# ವಿಪ್ರನುಡಿ

ಸ್ವಾವಲಂಬನೆ-ಸಂಘಟನೆ-ಸಂಸ್ಕಾರ

ಸಂಪುಟ-41 ಕ್ರೋಧಿ ನಾಮ ಸಂವತ್ಸರ, ವೈಶಾಖ - ಜೇಷ್ಠ ಮಾಸ, ಜೂನ್ - 2024, ಸಂಚಿಕೆ-3, ಪುಟಗಳು-32 ಬೆಲೆ ರೂ.15/-


ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಗಾಯತ್ರಿಭವನ, ಬೆಂಗಳೂರು

## ಮಹಾಸಭೆಯ 2024-25ನೇ ಸಾಲಿನ ಪ್ರಥಮ ಕಾರ್ಯಕಾರಿಣಿ ಸಭೆ










## ರಾಜ್ಯದ ನೂತನ ವಿಪ್ರ ಸಂಸದರಿಗೆ ಹಾರ್ದಿಕ ಅಭಿನಂದನೆಗಳು



ಪ್ರಹ್ಲಾದ ಜೋಶಿ



ವಿಶ್ವೇಶ್ವರ ಹೆಗಡೆ ಕಾಗೇರಿ,



ತೇಜಸ್ವಿ ಸೂರ್ಯ

## ಮಹಾಸಭೆಯಲ್ಲಿ ನಡೆದ 2024-25ನೇ ಸಾಲಿನ ಪ್ರಥಮ ಕಾರ್ಯಕಾರಿಣಿ ಸಭೆ



















## ಉದಾರ ದೇಣಿಗೆ



ಮಹಾಸಭಾ ಉಪಾಧ್ಯಕ್ಷರು ಹಾಗೂ ಹೋಟೆಲ್ ಉದ್ದಿಮೆದಾರರ ಸಂಘದ ಅಧ್ಯಕ್ಷರಾದ ಪಿ.ಸಿ. ರಾವ್‌ರಿಂದ 50 ಸಾವಿರ ರೂ. ದೇಣಿಗೆ



ನಗರ ನೀರು ಸರಬರಾಜು ಮಂಡಳಿ ನಿವೃತ್ತ ಅಭಿಯಂತರರಾದ ಶ್ರೀ ಕೇಶವರಿಂದ ಮಹಾಸಭೆಗೆ 20 ಸಾವಿರ ರೂ. ದೇಣಿಗೆ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**

ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ: 26771695, 26770066
E-mail: info@akbms.com
Website: www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**

ಖಜಾಂಚಿ
**ವೆಂಕಟೇಶ ಎಸ್, ನಾಯಕ್**

ವಿಪ್ರನುಡಿ ಪ್ರಕಟಣಾ ಸಮಿತಿ

ಪ್ರಧಾನ ಸಂಪಾದಕರು
**ಡಾ। ಎಂ.ಕೆ. ಶ್ರೀಧರ್**

ಸಮಿತಿ ಸದಸ್ಯರು
ಜ್ಯೋತಿಷಿ ಬ।। ಡಾ। ಮುದ್ರಾಡಿ ವಾಸುದೇವ ಭಟ್
ನಾರಾಯಣ ಭಟ್ ಹುಳೇಗಾರು
ಪ್ರಭಾಕರ ಕೆ.ಸಿ.
ಕಾರ್ತಿಕ್ ಬಾಪಟ್
ಟಿ.ಎಲ್.ಎಸ್. ಕುಮಾರ್

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 05. ದೂ : 26606061.

# ನಲ್ನುಡಿ

**ಕ್ಷಂತವ್ಯೋ ಮಂದಬುದ್ಧಿನಾಮಪರಾಧೋ ಮನೀಷಿಣಾ।**
**ನ ಹಿ ಸರ್ವತ್ರ ಪಾಂಡಿತ್ಯಂ ಸುಲಭಂ ಪುರುಷೇ ಕ್ವಚಿತ್॥**

**– ಸುಭಾಷಿತ ರತ್ನಭಾಂಡಾಗಾರ**

ಸಂಸ್ಕಾರವುಳ್ಳವರು, ವಿವೇಕಶೀಲರಾದವರು, ಬುದ್ಧಿಶಾಲಿಗಳಲ್ಲದ ಸಾಮಾನ್ಯ ಜನರು ಎಸಗುವ ತಪ್ಪನ್ನು ಕ್ಷಮಿಸಬೇಕು.ಎಲ್ಲರಿಗೂ ಯುಕ್ತಾಯುಕ್ತ ವಿವೇಚನೆ ಇರುತ್ತದೆ ಎಂದು ಹೇಳಲಾಗದು. ಯುಕ್ತಾಯುಕ್ತತೆ ಉಳ್ಳವರು ವಿರಳವಾಗಿರುತ್ತಾರೆ. ಇದು ಮೇಲಿನ ಶ್ಲೋಕದ ಭಾವಾರ್ಥ.

ವ್ಯಕ್ತಿಗಳಲ್ಲಿ ಕ್ಷಮಾ ಗುಣವು ಬಹಳ ಶ್ರೇಷ್ಠವಾದದ್ದು. ಕ್ಷಮಾಗುಣ, ಸಹನೆಯುಳ್ಳವನು ಕೆಲವೊಮ್ಮೆ ಮಾನಸಿಕ ನೋವು ಅನುಭವಿಸಬೇಕಾಗುತ್ತದೆ. ಆದರೆ ಕಾಲಕ್ರಮೇಣ ಅವನು ಪುಟಕ್ಕೆ ಹಾಕಿದ ಚಿನ್ನದಂತಾಗಿ ಸಮಾಜದಲ್ಲಿ ಸರ್ವರ ಪ್ರೀತಿಪಾತ್ರನಾಗುತ್ತಾನೆ. ಭೂತಾಯಿಯಂತೆ ಕ್ಷಮಾಗುಣ, ಸಹನೆ ಇರಬೇಕೆಂದು ಹೇಳುತ್ತಾರೆ. ಕ್ಷಮಾಗುಣವು ವ್ಯಾವಹಾರಿಕ ಜೀವನವನ್ನು ಹೆಚ್ಚು ಸಹ್ಯವಾಗಿ ಸುತ್ತದೆ. ಬೋಳೇ ಸ್ವಭಾವದ ಕ್ಷಮಾಗುಣವು ಇರಬಾರದು. ನಮ್ಮ ಕ್ಷಮಾಗುಣವೇ ನಮ್ಮ ನ್ಯೂನತೆಯಾಗಿ ಬೇರೆಯವರು ಅದರ ದುರು ಪಯೋಗ ಪಡೆಯಬಾರದು.ಕ್ಷಮಾಗುಣವು ಮಿತಿಮೀರಲೂಬಾರದು.

ಮಿತಿಮೀರಿದ ಕ್ಷಮಾಗುಣ, ಸಹನೆ ಮೂರ್ಖತನವಾಗುತ್ತದೆ. ಉದಾಹರಣೆಗೆ ಒಬ್ಬ ಸನ್ಯಾಸಿ ಬೆಳಗ್ಗೆ ನದಿಯಲ್ಲಿ ಸ್ನಾನ ಮಾಡಿ ಸೂರ್ಯಾರ್ಘ್ಯ ಕೊಡಲು ಕೈಬೊಗಸೆಯಲ್ಲಿ ನೀರು ತೆಗೆದುಕೊಂಡಾಗ ಆ ಬೊಗಸೆಯಲ್ಲಿ ಚೇಳೊಂದು ಬರುತ್ತದೆ. ಅಯ್ಯೋ, ಈ ಚೇಳನ್ನು ನದಿಗೆ ಬಿಟ್ಟರೆ ಸಾಯುತ್ತದೆ ಎಂದು ನೀರನ್ನು ಬಿಟ್ಟು ಕೈನಲ್ಲಿ ಚೇಳನ್ನು ಉಳಿಸಿಕೊಳ್ಳುತ್ತಾನೆ. ಅದು ಕೂಡಲೇ ಆಶ್ರಯಕೊಟ್ಟ ಕೈಯನ್ನೇ ಕುಟುಕುತ್ತದೆ. ಉರಿ ತಾಳಲಾರದೆ ಬಿಟ್ಟುಬಿಡು ತ್ತಾನೆ. ಅದು ಒದ್ದಾಡುತ್ತಾ ತೇಲುತ್ತಾ ಮುಳು ಗುತ್ತಾ ಇರುವುದನ್ನು ನೋಡಿ ಕನಿಕರದಿಂದ ಅದನ್ನು ಬದುಕಿಸಲು ಮತ್ತೆ ಸನ್ಯಾಸಿ ಬೊಗಸೆಯಲ್ಲಿ ತೆಗೆದುಕೊಳ್ಳುತ್ತಾನೆ. ಆಗ ಮತ್ತೆ ಕುಟುಕುತ್ತದೆ. ಹೀಗೆ ಮೂರು ನಾಲ್ಕು ಬಾರಿ ಮಾಡುವುದರೊಳಗೆ ಅದರ ವಿಷ ಸಾಧುವಿನ ಶರೀರ ಆವರಿಸಿ ಸಾಧು ಸಾಯುತ್ತಾನೆ. ಮತ್ತೆಮತ್ತೆ ಕಚ್ಚುತ್ತಾ ಇದ್ದರೂ ಮತ್ತೆಮತ್ತೆ ಕ್ಷಮಿಸಿ ಬದುಕಿಸುವುದು ಅರ್ಥವಿಲ್ಲದ ಕ್ಷಮೆ ಇಂತಹ ಕ್ಷಮೆ ಬೇಕೆ ?.ಪಾಕಿಸ್ತಾನ ಎಂಬ ಚೇಳು ಪದೇ ಪದೇ ಭಾರತವನ್ನು ಕೆಣಕುತ್ತಾ ಯುದ್ಧ ಮಾಡುತ್ತಾ ತೊಂದರೆ ಕೊಡುತ್ತಿದ್ದರೂ ಭಾರತ ಕ್ಷಮಿಸುತ್ತಾ ಬಂದಿತು.ಗೆದ್ದ ಭೂಪ್ರದೇಶವನ್ನೂ ಬಿಟ್ಟುಕೊಡುತ್ತಾ ಬಂದಿತು.ಪಾಕಿಸ್ತಾನ ಮತ್ತೆ ಮತ್ತೆ ಯುದ್ಧ, ಭಯೋತ್ಪಾದನೆ ನಡೆಸುತ್ತಾ ಬಂದಿತು. ತಾಳಲಾರದೆ ತಿರುಗಿನಿಂತ ಭಾರತ ಸರ್ಜಿಕಲ್ ಸ್ಟ್ರೈಕ್ ಮಾಡಿ ಚೇಳಿನ ಹಲ್ಲು ಮುರಿಯಿತು. ಸನ್ಯಾಸಿಯಂತೆ ಭಾರತ ಎಂದೂ ಸಾಯುವುದಿಲ್ಲ.

**ನೀತಿ– "ಕ್ಷಮೆಗೊಂದು ಮಿತಿಯಿರಬೇಕು"**

**– ಛಾಯಾಪತಿ ಕೆ.ಎನ್.**

**ಸೂಚನೆ :** ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹಿರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು) ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.

– ಸಂಪಾದಕ ಮಂಡಳಿ

# ಬ್ರಹ್ಮಾನುಚಿಂತನಮ್

ಶಂಕರಾಚಾರ್ಯರದ್ದೆಂದು ಪ್ರಸಿದ್ಧವಾದ ನೂರಾರು ಗ್ರಂಥಗಳಲ್ಲಿ ಬ್ರಹ್ಮಾನುಚಿಂತನಮ್ ಎನ್ನುವ ಗ್ರಂಥವು ಒಂದಾಗಿದೆ. ಇದು ಕೇವಲ ಇಪ್ಪತೊಂಭತ್ತು ಶ್ಲೋಕಗಳನ್ನೊಳಗೊಂಡ ಒಂದು ಲಘುಕಾಯಪ್ರಕರಣಗ್ರಂಥ. ಇದಕ್ಕೆ ಆತ್ಮಚಿಂತನಮ್ ಎನ್ನುವ ಹೆಸರೂ ಇದೆ. ವೇದಾಂತ ಸಾಹಿತ್ಯದಲ್ಲಿ ಮೂರು ಬಗೆಯ ಪ್ರಕರಣ ಗ್ರಂಥಗಳು ಕಂಡುಬರುತ್ತವೆ. ಮೊದಲನೆಯವು ಶ್ರವಣ ಪ್ರಧಾನವಾದ ಪ್ರಕರಣಗ್ರಂಥಗಳು. ಎಲ್ಲಾ ಉಪನಿಷತ್ತುಗಳ ತಾತ್ಪರ್ಯವು ಜೀವ ಬ್ರಹ್ಮೈಕ್ಯವೆಂಬ ವಿಷಯವೇ ಆಗಿದೆ ಎಂಬುದನ್ನು ಈ ಗ್ರಂಥಗಳು ತಿಳಿಸುತ್ತವೆ. ಇವುಗಳಿಂದ ವೇದಾಂತ ಪ್ರಮಾಣದ ತಾತ್ಪರ್ಯದ ಬಗ್ಗೆ ಉಂಟಾಗಬಹುದಾದ ಸಂಶಯಗಳ ಪರಿಹಾರವಾಗುತ್ತದೆ.

ಎರಡನೆಯವು ಮನನ ಪ್ರಧಾನವಾದ ಗ್ರಂಥಗಳು. ಇವುಗಳು ಯುಕ್ತಿ ಪ್ರಧಾನವಾದ ಗ್ರಂಥಗಳಾಗಿವೆ. ಜೀವೇಶ್ವರೈಕ್ಯವನ್ನು ಯುಕ್ತಿಯ ಸಹಾಯದಿಂದ ಹೇಗೆ ಮನದಟ್ಟು ಮಾಡಿಕೊಳ್ಳಬಹುದು ಎನ್ನುವುದನ್ನು ಈ ಗ್ರಂಥಗಳು ವಿಚಾರಪೂರ್ವಕವಾಗಿ ತಿಳಿಸುತ್ತವೆ. ಮೂರನೆಯವು ನಿದಿಧ್ಯಾಸನ ಪ್ರಧಾನ ಗ್ರಂಥಗಳು. ಶ್ರವಣ ಹಾಗೂ ಮನನದ ಬಳಿಕ ನಿದಿಧ್ಯಾಸನ ಎನ್ನುವ ಸಾಧನೆಯನ್ನು ಮಾಡುವ ಮಾರ್ಗವನ್ನು ಈ ಗ್ರಂಥಗಳು ಪ್ರದರ್ಶಿಸುತ್ತವೆ.

**"ತಚ್ಚಿಂತನಂತತ್ಕಥನಮನ್ಯೋನ್ಯಂತತ್ತ್ವಬೋಧನಮ್ ।**
**ಏತದೇಕಪರತ್ವಂ ಚ ಬ್ರಹ್ಮಾಭ್ಯಾಸಂ ವಿದುರ್ಬುಧಾಃ ॥"**

ಎಂದು ಬುದ್ಧಿವಂತರಾದ ಪೂರ್ವಾಚಾರ್ಯರು ನುಡಿದಿದ್ದಾರೆ. "ಆಸುಪ್ತೇರಾಮೃತೇಃ ಕಾಲಂ ನಯೇದ್ವೇದಾಂತಚಿಂತಯಾ" ಎಂದು ದಕ್ಷಸ್ಮೃತಿಯು ಹೇಳುತ್ತದೆ. ಮೋಕ್ಷವನ್ನು ಪಡೆಯಲಿಚ್ಛಿಸುವವರು ನಿರಂತರವಾಗಿ ಬ್ರಹ್ಮತತ್ತ್ವವನ್ನು ಚಿಂತಿಸುತ್ತಿರಬೇಕು ಎನ್ನುವುದೇ ಈ ವಾಕ್ಯಗಳ ಅಭಿಪ್ರಾಯ.

ನಮ್ಮ ಸ್ವರೂಪವು ದೇಶ ಕಾಲಾದಿಗಳಿಂದ ಪರಿಚ್ಛಿನ್ನವಾಗದ ಪರಮಾನಂದ ರೂಪವಾದ ಬ್ರಹ್ಮವೇ ಎಂದು ವೇದಾಂತಗಳು ಪ್ರತಿಪಾದಿಸುತ್ತವೆ. ಗುರುವಿನ ಮುಖದಿಂದ ಈ ಉಪದೇಶವನ್ನು ಪಡೆದ ಬಳಿಕವೂ ಸಾಮಾನ್ಯ ಮುಮುಕ್ಷುವಿನ ಮನಸ್ಸು ಆತ್ಮಜ್ಞಾನದಲ್ಲಿ ನೆಲೆ ನಿಲ್ಲದೆ ಅದರ ಪ್ರಯೋಜನವನ್ನು ಪಡೆಯಲು ಅಸಮರ್ಥವಾಗುತ್ತದೆ. ಇದಕ್ಕೆ ಕಾರಣ ನಮ್ಮ ಮನಸ್ಸಿನಲ್ಲಿರುವ ವಿಪರೀತ ಭಾವನೆಗಳು. ಅನಾದಿ ಕಾಲದಿಂದ ನಾವು ರೂಢಿಸಿಕೊಂಡ 'ನಾನು ಶರೀರ', 'ಜಗತ್ತು ಸತ್ಯ' ಇತ್ಯಾದಿ ವೇದಾಂತವಿರುದ್ಧವಾದ ಅಭಿಮಾನಗಳೇ ಈ ವಿಪರೀತ ಭಾವನೆಗಳು. ಇವುಗಳನ್ನು ನೀಗಿಸಲು ಇರುವ ಉಪಾಯವೆಂದರೆ ಬ್ರಹ್ಮಾನುಚಿಂತನೆ.

ವೇದಾಂತವು ಉಪದೇಶಿಸಿದ ತತ್ತ್ವವನ್ನು ನಿರಂತರವಾಗಿ ಮನಸ್ಸಿನಲ್ಲಿ ಚಿಂತಿಸುವುದೇ ಬ್ರಹ್ಮಾನುಚಿಂತನೆ ಅಥವಾ ಆತ್ಮಚಿಂತನೆ. ವೇದಾಂತದ ಪರಮ ವಿಷಯವೆಂದರೆ ಬ್ರಹ್ಮ. 'ಸತ್ಯಂಜ್ಞಾನಮನಂತಂ ಬ್ರಹ್ಮ' ಎಂದು ತೈತ್ತಿರೀಯ ಶ್ರುತಿಯು ಬ್ರಹ್ಮತತ್ತ್ವವನ್ನು ಪರಿಚಯಿಸುತ್ತದೆ. ಈ ಬ್ರಹ್ಮತತ್ತ್ವವನ್ನು ಮುಮುಕ್ಷುವಾದ ಅಧಿಕಾರಿಯು ಸದ್ಗುರುಗಳ ಉಪದೇಶದಿಂದ ತಿಳಿದುಕೊಳ್ಳುತ್ತಾನೆ. ಬಳಿಕ ಆ ಮುಮುಕ್ಷುವು ತತ್ತ್ವಚಿಂತನೆಯಲ್ಲಿ ತೊಡಗುತ್ತಾನೆ. ಗುರೂಪದೇಶ, ಶ್ರವಣ ಮನನಗಳ ಬಳಿಕ ಶಾಸ್ತ್ರವನ್ನು ಅನುಸರಿಸಿ ಮಾಡುವ ಚಿಂತನೆಯಾದ್ದರಿಂದ ಇದನ್ನು 'ಅನು' ಚಿಂತನೆ ಎನ್ನಲಾಗುತ್ತದೆ. ಈ ಚಿಂತನೆಯ ವಿಷಯ ಬ್ರಹ್ಮವಾದ್ದರಿಂದ ಇದನ್ನು ಬ್ರಹ್ಮಾನುಚಿಂತನೆ ಎಂದು ಕರೆಯುವುದು ಸೂಕ್ತವಾಗಿದೆ. ಬ್ರಹ್ಮವೇ ನಮ್ಮೆಲ್ಲರ ಸ್ವರೂಪವಾದ್ದರಿಂದ ಬ್ರಹ್ಮಚಿಂತನೆ ಎಂದರೆ ಆತ್ಮನ ಸ್ವರೂಪದ ಕುರಿತಾದ ಚಿಂತನೆಯೇ ಆಗಿರುತ್ತದೆ. ಹಾಗಾಗಿ ಗ್ರಂಥಕ್ಕೆ ಆತ್ಮ ಚಿಂತನೆ ಎಂಬ ಹೆಸರೂ ಅನ್ವರ್ಥವೇ ಆಗಿರುತ್ತದೆ.

**ಅಹಮೇವಪರಂ ಬ್ರಹ್ಮ ವಾಸುದೇವಾಖ್ಯಮವ್ಯಯಮ್ ।**
**ಇತಿ ಸ್ಯಾನ್ನಿಶ್ಚಿತೋಮುಕ್ತೋ ಬದ್ಧ ಏವಾನ್ಯಥಾಭವೇತ್ ॥1॥**

**ಅನುವಾದ :** ನಾನು ವಾಸುದೇವ ಎಂದು ಕರೆಯಲ್ಪಡುವ ಅವ್ಯಯವಾದ ಪರಬ್ರಹ್ಮವೇ ಎಂದು ನಿಶ್ಚಯಿಸಿಕೊಂಡವನು ಮುಕ್ತನಾಗುವನು. ಹಾಗಿಲ್ಲದಿದ್ದರೆ ಅವನು ಬದ್ಧನೇ ಆಗಿರುವನು.

**ವಿವರಣೆ :** ಸಂಸಾರಕ್ಕೆ ಬಂಧ ಎಂಬ ಶಬ್ದದ ಬಳಕೆ ವೇದಾಂತ ಗ್ರಂಥಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಸಂಸಾರ ಅಥವಾ ಬಂಧ ಎಂದರೆ ಮೋಕ್ಷಕ್ಕೆ ವಿಪರೀತವಾದದ್ದು. ಮೋಕ್ಷವೆಂದರೆ ದುಃಖ, ಭಯ ಇತ್ಯಾದಿ ಮಾನಸಿಕ ಸಂತಾಪಗಳಿಂದಲೂ, ಜನ್ಮ ಮರಣಗಳ ಚಕ್ರದಿಂದಲೂ ಬಿಡುಗಡೆ. ಜನ್ಮ ಮರಣಗಳ ಚಕ್ರದಲ್ಲಿ ಸಿಲುಕಿಕೊಂಡು ಶಾರೀರಿಕವಾಗಿ ಹಾಗೂ ಮಾನಸಿಕವಾಗಿ ತಾಪತ್ರಯಗಳಿಂದ ಬಳಲುವುದೇ ಸಂಸಾರ ಅಥವಾ ಬಂಧ. ಸಂಸಾರವನ್ನು ಅನುಭವಿಸುವ ವ್ಯಕ್ತಿಯನ್ನು ಬದ್ಧ ಎನ್ನುವರು.

ಸಂಸಾರಕ್ಕೆ ಕಾರಣವಾದದ್ದು ನಮ್ಮ ಆತ್ಮದ ಸ್ವರೂಪದ ಅಜ್ಞಾನವೇ ಎನ್ನುವ ವಿಷಯದಲ್ಲಿ ವೇದಾಂತಿಗಳಿಗೆ ಯಾವುದೇ ಸಂಶಯವೂ ಇಲ್ಲ. ಹಾಗಾಗಿ ಸಂಸಾರದಿಂದ ಬಿಡುಗಡೆ ಹೊಂದಬೇಕಿದ್ದರೆ ಅದಕ್ಕೆ ಕಾರಣವಾದ ಅಜ್ಞಾನವನ್ನು ನಾಶಪಡಿಸುವುದೊಂದೇ ದಾರಿ. ಅಜ್ಞಾನದ ನಾಶಕ್ಕೆ ಜ್ಞಾನವೊಂದೇ ಉಪಾಯ. ಆತ್ಮದ ಬಗೆಗಿನ ಅಜ್ಞಾನವನ್ನು ನಾಶಪಡಿಸಲು ವೇದಾಂತ ವಾಕ್ಯವೆಂಬ ಪ್ರಮಾಣದಿಂದ ಉಂಟಾಗುವ 'ಅಹಂ ಬ್ರಹ್ಮಾಸ್ಮಿ' ಎನ್ನುವ ಜ್ಞಾನವನ್ನು ಪಡೆದುಕೊಳ್ಳುವುದು ಅನಿವಾರ್ಯ. ಅಂತಹ ಜ್ಞಾನವುಳ್ಳವನು ತನ್ನ ಅಜ್ಞಾನವನ್ನು ಕಳೆದುಕೊಂಡು ಮುಕ್ತನಾಗುವನು. "ತರತಿಶೋಕಾತ್ಮವಿತ್" ಎಂಬ ಛಾಂದೋಗ್ಯೋಪನಿಷತ್ತಿನ ವಾಕ್ಯವು ಆತ್ಮಜ್ಞಾನವು ಸಂಸಾರದ ನಿವೃತ್ತಿಗೆ ಮಾರ್ಗವೆಂಬುದನ್ನು ತಿಳಿಸುತ್ತದೆ.

ಈ ಶ್ಲೋಕದಲ್ಲಿ ಪರಬ್ರಹ್ಮವು ವಾಸುದೇವ ಎಂದು ಕರೆಯಲ್ಪಡುವುದು ಎಂದು ಹೇಳಲಾಗಿದೆ. ವಾಸುದೇವ ಎಂಬುದಕ್ಕೆ ವಸುದೇವನ ಪುತ್ರನಾದ ಕೃಷ್ಣ ಎಂಬುದು ಪುರಾಣದ ದೃಷ್ಟಿಯಿಂದ ಹೇಳಬಹುದಾದ ಅರ್ಥ. ಪರಬ್ರಹ್ಮ ಸ್ವರೂಪನಾದ ಭಗವಂತನೇ ತನ್ನ ಮಾಯೆಯನ್ನು ಉಪಯೋಗಿಸಿಕೊಂಡು ಕೃಷ್ಣ, ರಾಮ ಇತ್ಯಾದಿ ರೂಪಗಳಲ್ಲಿ ಅವತರಿಸುವನು ಎಂಬುದು ಭಗವದ್ಗೀತೆ, ಭಾಗವತ ಇತ್ಯಾದಿ ಶಾಸ್ತಗಳಿಂದ ಸ್ಪಷ್ಟವಾಗುತ್ತದೆ. ಗ್ರಂಥದ ಆರಂಭದಲ್ಲಿ ಗ್ರಂಥಕರ್ತೃಗಳು ತಮ್ಮ ಇಷ್ಟದೇವತೆಯಾದ ವಾಸುದೇವನನ್ನು ಸ್ಮರಿಸಿಕೊಂಡು ಮಂಗಳಾಚರಣೆಯನ್ನು ಮಾಡುತ್ತಾರೆ ಎಂದು ತಿಳಿಯಬಹುದು.

ವಾಸುದೇವ ಎಂಬ ಶಬ್ದಕ್ಕೆ ವೇದಾಂತದ ದೃಷ್ಟಿಯಿಂದ ಇನ್ನೊಂದು ಗಂಭೀರವಾದ ಅರ್ಥವಿದೆ. ವಾಸಯತಿ ಭೂತಾನಿ ಇತಿ ವಾಸುಃ। ವಾಸು ಎಂದರೆ ಭೂತಗಳಿಗೆ ಆಶ್ರಯವಾದವನು. ಸತ್ಸ್ವರೂಪನಾದ ಪರಮಾತ್ಮನು ಎಲ್ಲಾ ಭೂತಗಳಿಗೂ ಆಶ್ರಯವಾಗಿರುವನು. ದ್ಯೋತತೇ ಇತಿ ದೇವಃ। ದೇವ ಎಂದರೆ ಪ್ರಕಾಶಮಾನವಾದವನು ಎಂದರೆ ಚೈತನ್ಯಸ್ವರೂಪನು. ಹಾಗಾಗಿ ವಾಸುದೇವ ಎಂದರೆ ಎಲ್ಲಾ ಭೂತಗಳಿಗೂ, ಸಮಸ್ತ ಜಗತ್ತಿಗೂ ಆಶ್ರಯವಾದ ಪರಬ್ರಹ್ಮ ಪರಮಾತ್ಮನೇ ಹೌದು.

# ಅಧ್ಯಕ್ಷರ ನುಡಿ



**ಆತ್ಮೀಯ ವಿಪ್ರ ಬಾಂಧವರಿಗೆ ನಮಸ್ಕಾರಗಳು,**

ಮುಗಿಲೇರಿದ್ದ ಲೋಕಸಭಾ ಚುನಾವಣೆಗಳ ಬಿಸಿ ತಗ್ಗಿದೆ. ಆದರೆ ಮಹಾಸಭೆಯ ಚುನಾವಣಾ ಬಿಸಿ ಚುನಾವಣೆಗೆ ಸರಿಸುಮಾರು ಆರರಿಂದ ಎಂಟು ತಿಂಗಳಷ್ಟಿದ್ದರೂ ಈಗಲೇ ಮುಗಿಲೇರಿದಂತೆ ಭಾಸವಾಗುತ್ತಿದೆ. ಅರೆ ಇಷ್ಟು ಬೇಗ ಹತ್ತಿರ-ಹತ್ತಿರ ಮೂರು ವರುಷಗಳಾದವೇ ಎಂಬ ಪ್ರಶ್ನೆ ಪುಟಿದೇಳುತ್ತದೆ. ಆದ ಕೆಲಸ ಹಲವಾರಿವೆ, ಆಗಬೇಕಾದ್ದು ಅಷ್ಟೇ ಇವೆ. ಕೆಲಸಗಳ ಬಗ್ಗೆ ನಾವು ಮಾತಾಡುವುದಕ್ಕಿಂತ ಕೆಲಸಗಳೇ ಮಾತಾಡಬೇಕು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಈ ಅಭಿಪ್ರಾಯಕ್ಕೆ ನೀವು ಮನ್ನಣೆಯನ್ನು ಕೊಡುತ್ತೀರೆಂದು ಭಾವಿಸುತ್ತೇನೆ. ಹೋದಲ್ಲೆಲ್ಲಾ ಮುಂದಿನ ಚುನಾವಣೆಯಲ್ಲಿ ನೀವು ಸ್ಪರ್ಧಿಸುತ್ತೀರಿ ತಾನೇ ಎಂಬ ಪ್ರಶ್ನೆ ಹಲವಾರು ಬಾರಿ ತೂರಿಬಂದಿದ್ದರಿಂದ ಈ ವಿಷಯವನ್ನು ಪ್ರಸ್ತಾಪಿಸಬೇಕಾಯಿತು. ಅದೇನೇ ಇರಲಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಚುನಾವಣೆಯು ಕೂಡ ನಮ್ಮಲ್ಲಿ ಒಂದು ನಿರೀಕ್ಷೆಯನ್ನು ಹುಟ್ಟಿಸುತ್ತಿದೆ ಎಂದರೆ ಮಹಾಸಭೆಯನ್ನು ಹಾಗು ಮಹಾಸಭೆಯ ಚಟುವಟಿಕೆಗಳನ್ನು ನೀವೆಲ್ಲರೂ ಆಸಕ್ತಿಯಿಂದ ಗಮನಿಸುತ್ತಿದ್ದೀರಿ ಎಂದಾಯಿತು. ಇದು ಸಂತೋಷದ ವಿಷಯ. ಕಳೆದ ಎರಡುವರೆ ವರುಷದಲ್ಲಿ ಕರ್ನಾಟಕದಾದ್ಯಂತ ವಿಪ್ರ ಸಂಘಟನೆಗೆ ವೇಗ ಬಂದಿರುವುದು ನಿಜ. ಆದರೆ ಈ ವೇಗಕ್ಕೆ ಇನ್ನಷ್ಟು ಶಕ್ತಿ ತುಂಬುವ ಕೆಲಸ ಪ್ರತಿಯೊಬ್ಬ ವಿಪ್ರರಿಂದಾಗಬೇಕು. ಅಂದರೆ ವಿಪ್ರ ಸಂಘಟನೆಯ ಅನಿವಾರ್ಯದ ಬಗ್ಗೆ ವಿಪ್ರರ ಒಳಿತಿನ ಬಗ್ಗೆ ಕಾಳಜಿ ಇರುವವರು ತಾವಾಗಿಯೇ ಮುಂದೆ ಬರುತ್ತಿದ್ದಾರೆ. ಎಲ್ಲರಿಗೂ ಏನಾದರೊಂದು ಮಾಡಬೇಕೆಂಬ ಮನೋಭಾವನೆಯಿದೆ. ಈ ಕ್ಷಣಕ್ಕೆ ಬೇಕಾಗಿರುವುದು ಈ ಭಾವನೆಯನ್ನು ಹೊಂದಿದವರಿಗೆ ಸಹಾಯಹಸ್ತ ಚಾಚುವುದು. ವಿಪ್ರ ಸಂಘಟನೆಗೆ ಪಣತೊಟ್ಟು ಸಂಘಟನೆಗೆ ಧುಮುಕಲು ಉತ್ಸುಕರಾಗಿ ಬರುವ ಅಥವಾ ಬರಬೇಕೆಂಬ ಹಂಬಲ ಹೊಂದಿರುವ ಹಲವರನ್ನು ಜಿಲ್ಲೆ ಜಿಲ್ಲೆಗಳಲ್ಲಿ, ಪಟ್ಟಣಗಳಲ್ಲಿ ಹಾಗು ಹಳ್ಳಿಗಳಲ್ಲಿ ಕಂಡಿದ್ದೇನೆ. ಇವರೆಲ್ಲರ ಮನೋಬಲ ಹಾಗು ವಿಪ್ರ ಸಮುದಾಯಕ್ಕೇನಾದರೂ ಮಾಡಬೇಕೆಂಬ ಹಂಬಲ ಹಾಗು ಇಚ್ಛೆ ಸದಾ ಜಾಗ್ರತ ಅವಸ್ಥೆಯಲ್ಲಿರಬೇಕಾದರೆ ನಾವು ಮಾಡಬೇಕಾಗಿರುವ ಆದ್ಯ ಕರ್ತವ್ಯವೆಂದರೆ ಅವರ ಕೆಲಸದ ಬಗ್ಗೆ ಒಂದೊಳ್ಳೆ ಮಾತು. ಅದಾಗದಿದ್ದರೂ ಅವರ ಮನೋಬಲವನ್ನು ಕುಗ್ಗಿಸುವಂತಹ ಮಾತುಗಳನ್ನಾಡದಿದ್ದರೆ ಸಾಕು. ಅಂದರೆ ಸಂಘಟನೆಯಿಂದ ಏನು ಪ್ರಯೋಜನ, ಯಾರಿಗಾಗಿ ಸಂಘಟನೆ ಈ ರೀತಿಯ ನಕಾರಾತ್ಮಕ ಮಾತುಗಳನ್ನಾಡದಿದ್ದರೂ ಸಾಕು, ಅದೇ ಅತಿ ದೊಡ್ಡ ಉಪಕಾರ. ಏಕೆಂದರೆ ಮಾನವ ಸಹಜತಃ ಭಾವಜೀವಿ, ಮೇಲಾಗಿ ಪ್ರಸ್ತುತ ಕಾಲಘಟ್ಟದಲ್ಲಿ ದೈನಂದಿನ ಜೀವನಕ್ಕಾಗಿ ಕಸುಬು ನಡೆಸುವುದೇ ಒಂದು ಮಹತ್ಸಾಧನೆಯಂತಾಗಿರುವ ಸಮಯದಲ್ಲಿ ಒಬ್ಬ ಸಮಾಜ ಬಾಂಧವ ಮನೆಯೊಂದಿಗೆ ಸಮಾಜದ ಒಳಿತಿಗೂ ನಾನು ದುಡಿಯುತ್ತೇನೆ ಎಂದು ಮುಂದೆ ಬಂದರೆ ಅಂಥವರನ್ನು ಕಾಪಿಟ್ಟುಕೊಳ್ಳುವುದು ನಮ್ಮ ಕರ್ತ್ಯವ್ಯ. ತಾವೆಲ್ಲರೂ ತಮ್ಮ ತಮ್ಮ ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಹಾಗು ಜಿಲ್ಲೆಗಳಲ್ಲಿ ಅಂಥವರನ್ನು ಗುರುತಿಸಿ ಅವರ ಬೆನ್ನುತಟ್ಟುವ, ನಾಲ್ಕು ಒಳ್ಳೆಯ ಮಾತನಾಡುವ ಕೆಲಸವಾಗಬೇಕು. ಅಷ್ಟು ಮಾಡಿದರೆ ಸಾಕು ಸಂಘಟನೆಗೊಂದು ಹೊಸ ಭಾಷ್ಯ ದೊರೆಯುವುದರಲ್ಲಿ ಸಂಶಯವಿಲ್ಲ. ತಾವೆಲ್ಲರೂ ಈಗಾಗಲೇ ಈ ಕೆಲಸವನ್ನು ಮಾಡುತ್ತಿದ್ದೀರಿ, ಆದರೆ ನೀವು ಮಾಡುತ್ತಿರುವ ಈ ಕೆಲಸ ನಿಮ್ಮ ನೆರೆ ಹೊರೆಯ ವಿಪ್ರರೂ ಅಷ್ಟೇ ಆಸ್ಥೆಯಿಂದ ಮಾಡುವಂತೆ ನೋಡಿಕೊಳ್ಳುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿ.

ಈ ನಮ್ಮ ಜವಾಬ್ದಾರಿಯನ್ನು ನಾವೆಲ್ಲರೂ ತಪ್ಪದೆ ಪರಿಪಾಲಿಸಬೇಕು. ಕಾರಣವಿಷ್ಟೇ, ಸಮಾಜದಲ್ಲಿ ಒಂದು ಸಂಘಟನೆಯ ಬಗ್ಗೆ ಪ್ರೇರಣೆ ಹಾಗು ಆವೇಗ ಇರುವಾಗ ಕೆಲಸಗಳು ಶೀಘ್ರವಾಗಿ ಆಗುತ್ತದೆ. ಅಂದುಕೊಂಡದ್ದನ್ನು ಅತಿವೇಗವಾಗಿ ಮಾಡಬಹುದು. ಅಡಿಗರು ಒಡೆದು ಬಿದ್ದ ಕೊಳಲು ಪದ್ಯದಲ್ಲಿ ಹೇಳಿದಂತೆ ಒಂದು ಸಮಾಜದಲ್ಲಿ ವಿಪ್ರ ಸಮಾಜವೇ ಎಂದಲ್ಲ ಒಟ್ಟಾರೆಯಾಗಿ ಒಂದು ಪರಿವರ್ತನೆಗಾಗಿ ಬರುವನೊಬ್ಬ ಧೀರನು, ಅಲ್ಲಿವರೆಗೆ ಮೃಣ್ಮಯ, ಬಳಿಕ ನಾನು ಚಿನ್ಮಯ! ಎಂದು ಕೊಳಲು ಕಾದು ಕುಳಿತಿರುತ್ತದಂತೆ. ಹಾಗೆ ನಿಮ್ಮ ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ, ನಗರಗಳಲ್ಲಿ ಸಮಾಜಮುಖಿ ಕೆಲಸಗಳನ್ನು ಮಾಡಲು, ಅದರಲ್ಲೂ ವಿಪ್ರ ಸಮಾಜದ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುವ ಜೀವವೊಂದು ಮುಂದೆ ಬಂದಾಗ ನಿರ್ಲಕ್ಷ್ಯಮಾಡದೆ ಎರಡೇ ಎರಡು ಪ್ರೋತ್ಸಾಹದ ನುಡಿಗಳನ್ನಾಡಲು ಮರೆಯಬೇಡಿ, ಹಾಗೆ ಮಾಡುತ್ತೀರೆಂಬ ನಂಬಿಕೆಯೊಂದಿಗೆ ಮುಂದಿನ ಸಂಚಿಕೆಯಲ್ಲಿ ಇನ್ನಷ್ಟು ವಿಷಯಗಳೊಂದಿಗೆ ಮತ್ತೆ ಭೇಟಿಯಾಗೋಣ.

ವಂದನೆಗಳೊಂದಿಗೆ,

**ಅಶೋಕ ಹಾರನಹಳ್ಳಿ,**
ಅಧ್ಯಕ್ಷರು,

# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮಸ್ಕಾರ. ಎನ್.ಡಿ.ಎ. ಮೈತ್ರಿಕೂಟದ ನಾಯಕರಾದ ಶ್ರೀ ನರೇಂದ್ರ ಮೋದಿ ಅವರು ಸತತ ಮೂರನೇ ಬಾರಿಗೆ ದೇಶದ ಪ್ರಧಾನಿಯಾಗಿ ಭಾನುವಾರ 09.06.2024ರಂದು ದೆಹಲಿಯ ರಾಷ್ಟ್ರಪತಿ ಭವನದಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಇದರೊಂದಿಗೆ ನಮ್ಮ ದೇಶದ ಮೊದಲ ಪ್ರಧಾನಿ ಜವಹರ್‌ಲಾಲ್ ನೆಹರು ಬಳಿಕ ಸತತ ಮೂರನೇ ಬಾರಿಗೆ ಪ್ರಧಾನಿಯಾದ ದಾಖಲೆಗೆ ಭಾಜನರಾಗಿದ್ದಾರೆ. ನಮ್ಮ ರಾಜ್ಯದಿಂದ ಲೋಕಸಭೆ ಚುನಾವಣೆಯಲ್ಲಿ ಮೂವರು ಬ್ರಾಹ್ಮಣರು ವಿಜೇತರಾಗಿದ್ದು ಅವರಿಗೆ ಪ್ರಧಾನ ಮಂತ್ರಿಗಳು ಸಚಿವ ಸ್ಥಾನ ನೀಡಿದ್ದಾರೆ. ಇವರೆಲ್ಲರಿಗೂ ಮಹಾಸಭೆಯ ಪರವಾಗಿ ಹಾರ್ದಿಕ ಅಭಿನಂದನೆಗಳು.

ಹಿಂದಿನ ಸರ್ಕಾರದಲ್ಲಿ ಸಂಸದೀಯ ಸಚಿವರಾಗಿದ್ದ ಶ್ರೀ ಪ್ರಹ್ಲಾದ್ ಜೋಶಿ ಅವರಿಗೆ ಈ ಬಾರಿ ಗ್ರಾಹಕರ ವ್ಯವಹಾರ, ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಜೊತೆಗೆ ಇಂಧನ ಇಲಾಖೆಯ ಸಂಪುಟ ಸಚಿವ ಸ್ಥಾನವನ್ನು ನೀಡಲಾಗಿದೆ. ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರಿಗೆ ಹಣಕಾಸು ಇಲಾಖೆ ನೀಡಿ ಸಂಪುಟ ಸಚಿವರ ಸ್ಥಾನಮಾನ ನೀಡಲಾಗಿದೆ. ಬೆಂಗಳೂರಿನ ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾದ ಯುವ ನಾಯಕ ಶ್ರೀ ತೇಜಸ್ವಿ ಸೂರ್ಯ ಅವರು ಉತ್ತಮ ಸಂಸದೀಯ ಪಟು. ಈ ಮೂವರು ವಿಪ್ರ ನಾಯಕರ ಜವಾಬ್ದಾರಿ ಬಹಳವಿದೆ. ಸಾಧಾರಣವಾಗಿ ಸಂಸತ್ ಸದಸ್ಯರ ಕ್ಷೇತ್ರ ಬಹಳ ದೊಡ್ಡದಿದ್ದು, ತಮ್ಮನ್ನು ಆಯ್ಕೆಮಾಡಿದ ನಾಗರಿಕರ ಆಶೋತ್ತರಗಳನ್ನು ಆಲಿಸಿ, ಪೂರೈಸುವ ಹೊಣೆಗಾರಿಕೆ ಇರುತ್ತದೆ. ಸಂಸತ್ ನಡೆಯುತ್ತಿರುವಾಗ, ಕರ್ನಾಟಕಕ್ಕೆ ದೊರಕಬೇಕಾದ ಮೂಲಭೂತ ಸೌಕರ್ಯಗಳ ಬಗ್ಗೆ, ಒಟ್ಟಾರೆ ಅಭಿವೃದ್ಧಿಯ ಬಗ್ಗೆ ಮುಖವಾಣಿಯಾಗಬೇಕಾಗಿದೆ. ಇದರೊಂದಿಗೆ ಯುವಜನತೆ ಎದುರಿಸುತ್ತಿರುವ ಹಲವಾರು ಸಮಸ್ಯೆಗಳ ಬಗ್ಗೆ, ವಿಶೇಷವಾಗಿ ಹೆಚ್ಚುತ್ತಿರುವ ನಿರುದ್ಯೋಗದ ಬಗ್ಗೆ, ಆತಂಕಕಾರಿಯಾಗಿ ಜಾಸ್ತಿಯಾಗುತ್ತಿರುವ 'ಲವ್ ಜಿಹಾದ್' ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯಬೇಕಾಗಿದೆ. ಬಹಳ ಹಿಂದಿನಿಂದಲೂ ಆಂಧ್ರಪ್ರದೇಶ, ಕೇರಳ, ತಮಿಳುನಾಡು ಸೇರಿದಂತೆ ದಕ್ಷಿಣದ ರಾಜ್ಯಗಳಿಂದ ಸಚಿವ ಸ್ಥಾನ ಪಡೆದಿದ್ದ ಲೋಕಸಭಾ ಸದಸ್ಯರು ಕೇಂದ್ರದಿಂದ ತಮ್ಮ ರಾಜ್ಯಗಳ ಕೆಲಸ ಮಾಡಿಸಿಕೊಳ್ಳುವುದರಲ್ಲಿ ಸದಾ ಮುಂದಿದ್ದಾರೆ. ಆದರೆ ಮತದಾರರ ಅಭಿಪ್ರಾಯದಂತೆ ಕನ್ನಡಿಗರು ದಾಕ್ಷಿಣ್ಯಪರರು. ಕನ್ನಡದ ನೆಲ-ಜಲ, ಗಡಿಗಳ ಪ್ರಶ್ನೆ ಬಂದಾಗ ಪ್ರಾಮುಖ್ಯತೆ ನೀಡಿರುವುದು ಬಹಳ ಕಡಿಮೆ ಎಂಬ ಅಸಮಾಧಾನವಿದೆ. ಆದ್ದರಿಂದ ಹಣಕಾಸು, ಉಕ್ಕು, ಪಡಿತರ, ಜಲಶಕ್ತಿ, ರೈಲ್ವೆ, ಎಂಎಸ್ಎಂಇ ಸಚಿವಾಲಯಗಳ ಮೂಲಕ ನಮ್ಮ ರಾಜ್ಯದಲ್ಲಿ ಬಹಳ ಕಾಲದಿಂದ ಬಾಕಿ ಉಳಿದಿರುವ ಮಹತ್ವ ಯೋಜನೆಗಳಿಗೆ ಚಾಲನೆ ನೀಡಲು ಸಾಧ್ಯ. ಈ ದಿಶೆಯಲ್ಲಿ ನಮ್ಮ ರಾಜ್ಯದ ಲೋಕಸಭಾ ಸಂಸದರು ರಾಜ್ಯದ ಒಳಿತಿಗಾಗಿ ಟೊಂಕಕಟ್ಟಿ ಕೆಲಸ ಮಾಡಬೇಕಾಗಿದೆ ಎಂದು ನಮ್ಮ ರಾಜ್ಯದ ಮತದಾರರು ನಿರೀಕ್ಷಿಸುತ್ತಿದ್ದಾರೆ. ಈ ದಿಶೆಯಲ್ಲಿ 2300 ವರ್ಷಗಳ ಹಿಂದೆ ಸಾಮ್ರಾಟ್ ಚಂದ್ರಗುಪ್ತ ಮೌರ್ಯನ ಮೂಲಕ ಮೌರ್ಯ ಸಾಮ್ರಾಜ್ಯವನ್ನು ಕಟ್ಟಿದ ಪ್ರಧಾನ ಮಂತ್ರಿ ವಿಷ್ಣುಗುಪ್ತ ಅಥವಾ ಚಾಣಕ್ಯನು ಬಹಳ ವಿಸ್ತಾರವಾಗಿ ರಾಜ್ಯ-ದೇಶ, ರಾಜ -ಮಂತ್ರಿಗಳು, ನಾಗರಿಕರು ಹೇಗಿರಬೇಕು ಎಂದು ತನ್ನ ಬೃಹತ್‌ಗ್ರಂಥ ಅರ್ಥಶಾಸ್ತ್ರ ಹಾಗೂ ಚಾಣಕ್ಯನೀತಿಯಲ್ಲಿ ವಿವರಿಸಿದ್ದಾನೆ. ಅದರಂತೆ ಉತ್ತಮ ನಾಗರಿಕರ, ರಾಜರ, ಆಡಳಿತಾಧಿಕಾರಿಗಳ ಲಕ್ಷಣವನ್ನು ಈ ಕೆಳಕಂಡಂತೆ ವಿವರಿಸಿದ್ದಾನೆ.

ಉತ್ತಮ ನಾಯಕನು ಕಳೆದುಹೋದ ಕಾಲದ ಅಥವ ಭವಿಷ್ಯದ ಬಗ್ಗೆ ಚಿಂತಿಸಬಾರದು. ಬುದ್ಧಿವಂತರಾದವರು ವರ್ತಮಾನದಲ್ಲಿ ಕೆಲಸ ಮಾಡುವರು.

**ಗತೇ ಶೋಕೋ ನ ಕರ್ತವ್ಯೋ ಭವಿಷ್ಯಂ ಚಿಂತಯೇತ್ ।**
**ವರ್ತಮಾನೇನ ಕಾಲೇನ ಪ್ರವರ್ತಂತೇ ವಿಚಕ್ಷಣಾಃ ॥**

ನಾಯಕರು ಸದಾ ಜಾಗರೂಕರಾಗಿರಬೇಕು. ಭವಿಷ್ಯದಲ್ಲಿ ಬರಬಹುದಾದ ಆಪತ್ತು-ವಿಪತ್ತುಗಳ ಬಗ್ಗೆ ಪೂರ್ವಭಾವಿಯಾಗಿ ಸಿದ್ಧರಾಗಿ, ಮುಂದಾಲೋಚನೆಯಿಂದ ಕಾರ್ಯಪ್ರವೃತ್ತರಾಗಬೇಕು. ಎಲ್ಲವನ್ನೂ ವಿಧಿಗೆ ಬಿಟ್ಟು ಸುಮ್ಮನೇ ಕೂರಬಾರದು. ಕೇವಲ ವಿಧಿಯನ್ನು ನಂಬಿದವರು ನಾಶವಾಗುತ್ತಾರೆ ಎನ್ನುತ್ತಾನೆ.

**ಅನಾಗತ ವಿಧಾತಾ ಚ ಪ್ರತ್ಯುತ್ಪನ್ನಮತಿಸ್ಥಥಾ ।**
**ದ್ವಾವೇತೌ ಸುಖಮೇಧೇತೇ ಯದ್‌ಭವಿಷ್ಯೋ ವಿನಶ್ಯತಿ ॥**

ರಾಜನಾದವನು ಧರ್ಮಿಷ್ಠನಾಗಿರಬೇಕು. ಪಾಪಕಾರ್ಯಗಳಲ್ಲಿ ತೊಡಗಬಾರದು. ಧರ್ಮಕಾರ್ಯಗಳನ್ನು ಸದಾ ಕೈಗೊಳ್ಳುತ್ತಿರಬೇಕು. ಏಕೆಂದರೆ ಪ್ರಜೆಗಳು ಯಾವಾಗಲೂ ರಾಜರ ನಡೆ-ನುಡಿಗಳನ್ನು ನೋಡಿ ಅನುಸರಿಸುತ್ತಾರೆ. ರಾಜನು ಹೇಗೋ ಪ್ರಜೆಗಳೂ ಅಂತೆಯೇ.

**ರಾಜ್ಞಿ ಧರ್ಮಿಣಿ ಧರ್ಮಿಷ್ಠಾಃ ಪಾಪೇ ಪಾಪಾಃ ಸಮೇಸಮಾಃ ।**
**ರಾಜಾನಂ ಅನುವರ್ತಂತೇ ಯಥಾ ರಾಜಾ ತಥಾ ಪ್ರಜಾಃ ॥**

ಹೀಗೆ ಚಾಣಕ್ಯನ ನೀತಿಗಳು ಎಲ್ಲಾ ಕಾಲಕ್ಕೂ, ಎಲ್ಲ ಸಮುದಾಯದ ಜನರಿಗೂ, ನಾಗರಿಕರಿಗೂ ಪ್ರಸ್ತುತವಾಗಿವೆ. ಅವುಗಳನ್ನು ನಮ್ಮ ವಿಪ್ರ ರಾಜಕೀಯ ನಾಯಕರು ಪಾಲಿಸಲಿ, ನಮ್ಮ ರಾಜ್ಯದ, ದೇಶದ ಅಖಂಡತೆ, ಅಭಿವೃದ್ಧಿ, ಸಮಗ್ರ ಕಲ್ಯಾಣಕ್ಕೆ ಶ್ರಮಿಸಲಿ ಎಂದು ಆಶಿಸೋಣ.

ವಂದನೆಗಳೊಂದಿಗೆ,

**ಪ್ರೊ. ಎಂ.ಕೆ. ಶ್ರೀಧರ್**
ಪ್ರಧಾನ ಸಂಪಾದಕರು

# ಮಹಾಸಭೆಯಲ್ಲಿ ನಡೆದ 2024-25ನೇ ಸಾಲಿನ ಪ್ರಥಮ ಕಾರ್ಯಕಾರಿಣಿ ಸಭೆ
# ವಿಶ್ವಾದ್ಯಂತ ಕನ್ನಡಿಗ ಬ್ರಾಹ್ಮಣರ ಒಗ್ಗೂಡುವಿಕೆಯಿಂದ ಸಂಘಟನೆಗೆ ಬಲ

– ಅಶೋಕ್ ಹಾರನಹಳ್ಳಿ



ಬೆಂಗಳೂರು 22 ಜೂನ್ 2024 : ರಾಜ್ಯ, ದೇಶವಲ್ಲದೆ ವಿಶ್ವಾದ್ಯಂತ ಹಲವು ಭಾಗಗಳಲ್ಲಿರುವ ಕನ್ನಡ ನಾಡಿನ ಬ್ರಾಹ್ಮಣರನ್ನು ವಿಪ್ರ ಸಂಘಟನೆಯನ್ನು ಬಲಗೊಳಿಸಲು ಒಗ್ಗೂಡಿಸಬೇಕಾದ ಅವಶ್ಯಕತೆ ಇದೆ ಎಂದು ಅಖಿಲ ಕರ್ನಾಟಕ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅಭಿಪ್ರಾಯಪಟ್ಟರು.

ನಗರದ ಮಹಾಸಭಾದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಬ್ರಾಹ್ಮಣರಿದ್ದು ಅವರನ್ನು ಸಂಪರ್ಕಿಸುವ ಕೆಲಸ ಕೂಡ ಆಗಬೇಕಾಗಿದೆ ಎಂದರು.

ಪಾಶ್ಚಾತ್ಯ ದೇಶಗಳಲ್ಲಿಯೂ ಕೂಡ ಕನ್ನಡಿಗ ಬ್ರಾಹ್ಮಣರು ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರನ್ನು ಸಂಪರ್ಕಿಸಿ ಒಗ್ಗೂಡಿಸಲೇಬೇಕಾಗಿದೆ. ಈ ನಿಟ್ಟಿನಲ್ಲಿ ಬ್ರಾಹ್ಮಣ ಮಹಾಸಭಾ ಕೂಡ ಸಮರ್ಥವಾಗಿ ತೊಡಗಿಸಿಕೊಳ್ಳಲಿದೆ. ಮಹಾಸಭಾದ ವತಿಯಿಂದ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಲಾಗಿತ್ತು. ಈ ವೇಳೆ ತಮಿಳುನಾಡಿನಲ್ಲಿ ಹೊರತಂದಿರುವ ಬ್ರಾಹ್ಮಣ ವ್ಯಕ್ತಿಗಳು ಮಾಡಿರುವ ಸಾಧನೆಗಳ ಕುರಿತಾದ ಎನ್‌ಸೈಕ್ಲೋಪಿಡಿಯಾ (ದೊಡ್ಡ ಪುಸ್ತಕ) ಕುರಿತು ತಿಳಿಸಿದರು. ರಾಜ್ಯದಲ್ಲೂ ಇಂತಹದೇ ಪುಸ್ತಕವನ್ನು ಹೊರತರುವಂತೆ ಸಲಹೆ ನೀಡಿದ್ದಾರೆ. ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ಅದನ್ನು ಹೊರ ತರಲಾಗುವುದು ಎಂದು ತಿಳಿಸಿದರು.

ಹಾವೇರಿಯಲ್ಲಿ ಸಿಎ ನಿವೇಶನ ಖರೀದಿಸಲಾಗಿದೆ. ಇಲ್ಲಿ ಉತ್ತರ ಕರ್ನಾಟಕದ ಬ್ರಾಹ್ಮಣರಿಗೆ ಅನುಕೂಲವಾಗುವ ದೃಷ್ಟಿಯಿಂದ ಕಟ್ಟಡ ನಿರ್ಮಿಸಲು ತಯಾರಿ ನಡೆದಿದೆ. ಬಾಗಲಕೋಟೆಯಲ್ಲೂ ನಿವೇಶನ ಖರೀದಿಸಲು ತಯಾರಿ ನಡೆದಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ಸಿಎ ನಿವೇಶನ ಪಡೆಯಲು ಅರ್ಜಿ ಹಾಕುವಂತೆ ತಿಳಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲವ್ ಜಿಹಾದ್, ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಾಹ ಕುರಿತಾದ ಸಮಸ್ಯೆ ಇದೆ. ಉತ್ತರ ಕರ್ನಾಟಕ ಭಾಗದಲ್ಲಿ ಬ್ರಾಹ್ಮಣರು ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬ್ರಾಹ್ಮಣರ ಹಲವು ಬೇಡಿಕೆ ಹಾಗೂ ಸಮಸ್ಯೆಗಳ ಕುರಿತಾಗಿ ಸಚಿವ ದಿನೇಶ್ ಗುಂಡೂರಾವ್ ಮತ್ತು ದೇಶಪಾಂಡೆ ಅವರಿಗೆ ಮನವರಿಕೆ ಮಾಡಿಕೊಡಲಾಗಿದ್ದು, ಈ ಕುರಿತಾಗಿ ಉತ್ತಮ ಸ್ಪಂದನೆ ಕೂಡ ಬಂದಿದೆ ಎಂದು ತಿಳಿಸಿದರು. ನವೆಂಬರ್ ತಿಂಗಳಲ್ಲಿ ಈ ಸಾಲಿನ ಪ್ರತಿಭಾ ಪುರಸ್ಕಾರ ಸಮಾರಂಭ ಹಾಗೂ ವಿದ್ಯಾರ್ಥಿ ವೇತನ ವಿತರಣಾ ಸಮಾರಂಭ ಏರ್ಪಡಿಸಲಾಗುವುದು ಹಾಗೂ ಡಿಸೆಂಬರ್ ಕೊನೆ ಅಥವಾ ಜನವರಿಯಲ್ಲಿ ಸಭೆ ನಡೆಸಿ ಮಹಾಸಭಾದ ಚುನಾವಣೆ ಬಗ್ಗೆ ನಿರ್ಧರಿಸಲಾಗುವುದು ಎಂದರು.

ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಶ್ರೀ ಅಸಗೋಡು ಜಯಸಿಂಹರವರು ಮಾತನಾಡಿ ಬ್ರಾಹ್ಮಣರಿಗೆ ಯಾರು ಸಹಾಯ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ, ಮಾಡುವುದೂ ಇಲ್ಲ. ನಮಗೇ ನಾವೇ ಸಹಾಯ ಮಾಡಿಕೊಳ್ಳಬೇಕು. ಅಭಿವೃದ್ಧಿ ಮಂಡಳಿ ಎಲ್ಲಾ ರೀತಿಯಿಂದಲೂ ಬ್ರಾಹ್ಮಣ ಮಹಾಸಭೆಯ ಬೆಂಬಲಕ್ಕೆ ನಿಲ್ಲಲಿದೆ ಎಂಬ ಭರವಸೆ ನೀಡಿದರು.



ಕಾರ್ಯಕಾರಿಣಿ ಸಭೆಯು ಪ್ರಾರ್ಥನೆ ಹಾಗೂ ಉಪಾಧ್ಯಕ್ಷರಾದ ಡಾ|| ರಾಘವೇಂದ್ರ ಭಟ್, ಕಳೆಕೋಡಿ ಸೂರ್ಯನಾರಾಯಣ ಭಟ್ ಹಾಗೂ ಗಿರಿಪ್ರಕಾಶ್ ತಂತ್ರಿಯವರ ವೇದಘೋಷದೊಂದಿಗೆ ಆರಂಭವಾಯಿತು.

ಪ್ರಧಾನಕಾರ್ಯದರ್ಶಿ ಶ್ರೀ ಶ್ರೀಧರಮೂರ್ತಿಯವರು ಸಭೆಯ ನಿಯಮಾವಳಿ ಪ್ರಕಾರ ಇಂದಿನ ಸಭೆಯ ತಿಳುವಳಿಕೆ ಪತ್ರ ಓದಿ ಹಾಗೂ ಹಿಂದಿನ ಕಾರ್ಯಕಾರಿಣಿ ಸಭೆಯ ನಡಾವಳಿಗಳನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದರು. ಅವುಗಳನ್ನು ಸಭೆ ಸರ್ವಾನುಮತದಿಂದ ಅನುಮೋದಿಸಿತು. ಆರಂಭದಲ್ಲಿ ಉಪಾಧ್ಯಕ್ಷರಾದ ಕೆ.ಎನ್. ಛಾಯಾಪತಿಯವರು ಸ್ವಾಗತ ಕೋರಿದರು. ಉಪಾಧ್ಯಕ್ಷ





ಮಹಾಸಭೆಯ ಆರ್ಥಿಕ ಪರಿಸ್ಥಿತಿ ಸುಭದ್ರವಾಗಿದೆ ಎಂಬ ಮಾಹಿತಿ ನೀಡಿದರು.

ಉಪಾಧ್ಯಕ್ಷರಾದ ಶ್ರೀ ಪಿ.ಸಿ. ರಾವ್‌ರವರು ತಮ್ಮ 70ನೇ ವರ್ಷದ ಭೀಮರಥ ಶಾಂತಿ ಕಾರ್ಯಕ್ರಮ ಪ್ರಯುಕ್ತ ಮಹಾಸಭೆಗೆ 50,000 ರೂ. ಗಳ ದೇಣಿಗೆ ನೀಡಿದರು.

ನಗರ ನೀರು ಸರಬರಾಜು ಮಂಡಳಿ, ನಿವೃತ್ತ ಮುಖ್ಯ ಅಭಿಯಂತರ ಶ್ರೀ ಕೇಶವರವರು 20,000 ರೂ.ಗಳ ದೇಣಿಗೆಯನ್ನು ನೀಡಿದರು.

ಶ್ರೀ ಹೆಚ್.ಆರ್. ಸುರೇಶರವರು ಅಗಲಿದ ವಿಪ್ರ ಸಮಾಜದ ಗಣ್ಯರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಸಭೆಯಲ್ಲಿ ಉಪಾಧ್ಯಕ್ಷರಾದ ನಟರಾಜ್ ಭಾಗವತ್, ಶ್ರೀಕಂಠಕುಮಾರ್, ಪಿ.ಸಿ. ರಾವ್, ವೈದ್ಯಕೀಯ ವಿಭಾಗದ ಡಾ॥ ಮುರಳೀಧರ, ವೆಂಕಟೇಶ್ ದ್ವಾರಕಾನಾಥ್, ಶ್ರೀ ದಿವಾಕರ, ಗದಗಿನ ಶ್ರೀ ಶ್ರೀನಿವಾಸ ಹುಯಿಲಗೊಳ ಮತ್ತು ಶ್ರೀ ಎನ್.ಎಸ್. ನರಸಿಂಹಮೂರ್ತಿ, ಶ್ರೀ ಸತೀಶ್, ಶ್ರೀ ವಿದ್ವಾನ್ ಕಶೆಕೋಡಿ ಸೂರ್ಯನಾರಾಯಣ ಭಟ್, ಉತ್ತರ ವಲಯ ಸಂಚಾಲಕ ಜಯಸಿಂಹ, ಉಪಧ್ಯಾಕ್ಷರಾದ ಮಹೇಶ್ ಕಜೆ ಮೊದಲಾದವರು ರಚನಾತ್ಮಕ ಸಲಹೆ ಸೂಚನೆಗಳನ್ನು ನೀಡಿದರು. ಖಜಾಂಚಿಗಳಾದ ಶ್ರೀ ವಿ.ಎಸ್. ನಾಯಕ್ ರವರು ಈ ಸಾಲಿನಲ್ಲಿ ನಡೆದ ಮಹಿಳಾ ಸಮಾವೇಶ ಹಾಗೂ ರಾಮತಾರಕ ಮಹಾಯಜ್ಞ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳ ಖರ್ಚು-ವೆಚ್ಚದ ಪೂರ್ಣಮಾಹಿತಿ ನೀಡಿ



**ಹೂವಿನ ಹಡಗಲಿಯಿಂದ ಶ್ರೀ ವಿನಯ್‌ಗೆ ಉನ್ನತ ವಿದ್ಯಾಭ್ಯಾಸಕ್ಕಾಗಿ ಕಾರ್ಯಕಾರಿಣಿ ಸಭೆಯಲ್ಲಿ ಸಂಗ್ರಹವಾದ 55,000 ರೂ.ಗಳ ಧನಸಹಾಯ ನೀಡಿದ ಸಂದರ್ಭ**

# ಶ್ರೀ ಶಂಕರಾಚಾರ್ಯರ ಜಯಂತ್ಯೋತ್ಸವ





ರಟ್ಟೇಹಳ್ಳಿ : ಶ್ರೀ ಜಗದ್ಗುರು ಶಂಕರಾಚಾರ್ಯ ಸೇವಾ ಸಮಿತಿಯ ಆಶ್ರಯದಲ್ಲಿ ದಿನಾಂಕ 12.04.2024 ರಿಂದ ದಿನಾಂಕ 18.05.24ರವರೆಗೆ ಶ್ರೀ ಜಗದ್ಗುರು ಶಂಕರಾಚಾರ್ಯರ ಜಯಂತ್ಯೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ, ಸಂಭ್ರಮದಿಂದ ಆಚರಿಸಲಾಯಿತು. ಪ್ರತಿನಿತ್ಯ ಶ್ರೀ ಕದಂಬೇಶ್ವರ ಮಹಾದೇವರಿಗೆ ಹಾಗೂ ಜಗದ್ಗುರುಗಳಿಗೆ ರುದ್ರಾಭಿಷೇಕ ಅರ್ಚನ ಸೇವಾದಿಗಳು, ಸಾಯಂಕಾಲ ಭಜನೆ-ಕೀರ್ತನೆಗಳು ನಡೆದವು. ದಿನಾಂಕ 18ರಂದು ಪಾಲಕಿ ಉತ್ಸವ, ರುದ್ರಾಭಿಷೇಕ, ಮಾತೆಯರಿಂದ ಕುಂಕುಮ ಅರ್ಚನೆ ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಉತ್ತೀರ್ಣರಾದ ತಾಲ್ಲೂಕಿನ ಇಬ್ಬರು ವಿಪ್ರ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ, ಅನ್ನ ಸಂತರ್ಪಣೆ, ಭಜನೆ-ಕೀರ್ತನೆಗಳೊಂದಿಗೆ ಸಂಪನ್ನಗೊಂಡಿತು.

ತಾಲ್ಲೂಕಿನ ಬ್ರಾಹ್ಮಣ ಸಮಾಜದ ಅಧ್ಯಕ್ಷರೂ, ಸಮಿತಿಯ ಖಜಾಂಚಿಗಳೂ, ಪ್ರಧಾನ ಅರ್ಚಕರು ಆದ ಶ್ರೀ ಗಿರೀಶ ಭಟ್ ನಾಡಗೇರರವರು ಮಾತನಾಡಿ ಶ್ರೀಮದ್ ಜಗದ್ಗುರು ಶಂಕರಾಚಾರ್ಯರು ಒಂದು ವೇಳೆ ಜನಿಸದಿದ್ದಲ್ಲಿ ನಮ್ಮ ವೇದ, ಸಂಸ್ಕೃತಿ, ಸನಾತನ ಸಂಸ್ಕೃತಿಗಳು ಸಂಪೂರ್ಣ ನಾಶವಾಗುತ್ತಿದ್ದವು. ಅವರ ಅವತಾರವಾದದ್ದರಿಂದಲೇ ನಾವಿಂದು ಬ್ರಾಹ್ಮಣರಾಗಿ, ಹಿಂದೂ ಧರ್ಮದವರಾಗಿ ಉಳಿದಿದ್ದೇವೆ ಎಂದು ಜಗದ್ಗುರುಗಳ ಪವಾಡ ಸದೃಶ ಜೀವನ ಚರಿತ್ರೆಯನ್ನು ವಿವರಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶಿಕ್ಷಣ ಇಲಾಖೆಯ ಶ್ರೀ ರಾಘವೇಂದ್ರ ಹಂಚಿನಮನಿಯವರು ಮಾತನಾಡಿ ಸ್ಥಳೀಯ ಸಮಿತಿಯವರು ಎಲೆಮರೆಯ ಕಾಯಿಯಂತೆ ಜಗದ್ಗುರುಗಳ ಜಯಂತ್ಯುತ್ಸವವನ್ನು ಕಳೆದ ಅನೇಕ ವರ್ಷಗಳಿಂದ ಆಚರಿಸುತ್ತಾ ಬಂದಿರುವುದು ತುಂಬಾ ಸ್ತುತ್ಯರ್ಹವಾಗಿದೆ. ಈ ಧರ್ಮಕಾರ್ಯಕ್ಕೆ ನಾವೆಲ್ಲರೂ ತನು-ಮನ-ಧನ ಪೂರ್ವಕ ಸಹಕರಿಸೋಣ ಎಂದು ತಿಳಿಸಿದರು. ಸಮಾಜದ ಮುಖಂಡರಾದ ಶ್ರೀ ಪ್ರದೀಪ ಕುಲಕರ್ಣಿ, ಶ್ರೀ ಪ್ರಶಾಂತ ಕುಲಕರ್ಣಿ, ಶ್ರೀ ರವೀಂದ್ರ ಮಕರಿ, ಶ್ರೀ ಸುಶೀಲ ನಾಡಗೇರ, ಶ್ರೀ ಸುಬ್ರಮಣ್ಯ ನಾಡಗೇರ, ಶ್ರೀ ದತ್ತಾತ್ರೇಯ ಜೋಶಿ ಹಾಗೂ ಸಮಾಜದ ಸಮಸ್ತ ಮಾತಾ ಭಗಿನಿಯರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.




# ರಾಜ್ಯ ಯುವ ವಿಭಾಗದಿಂದ ಎ.ಕೆ.ಬಿ.ಎಂ.ಎಸ್. ಜಾಬ್ ಪೋರ್ಟಲ್ ಅನಾವರಣ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಯುವ ವಿಭಾಗದ ವತಿಯಿಂದ ದಿನಾಂಕ 22–06–2024ರ ಶನಿವಾರ ಬೆಂಗಳೂರಿನ ಮಹಾಸಭಾ ಕೇಂದ್ರ ಕಛೇರಿ ಗಾಯತ್ರಿ ಭವನದಲ್ಲಿ ನೆರವೇರಿದ ಕಾರ್ಯಕಾರಿಣಿ ಸಭೆಯ ಸಂದರ್ಭದಲ್ಲಿ ಸಮಾಜದ ಯುವ ಸಮೂಹಕ್ಕೆ ಸಹಕಾರಿಯಾಗಲೆಂದು ಎಕೆಬಿಎಂಸ್ ಜಾಬ್ ಪೋರ್ಟಲ್ ಎಂಬ ಉದ್ಯೋಗ ಮಾಹಿತಿ ಒದಗಿಸುವ ವಾಟ್ಸಪ್ ಚಾನಲ್ ಅನ್ನು ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಶ್ರೀ ಅಸಗೋಡು ಜಯಸಿಂಹ ಮತ್ತು ಮಹಾಸಭಾ ಪದಾಧಿಕಾರಿಗಳು ಅನಾವರಣಗೊಳಿಸಿದರು.

ಈ ಉದ್ಯೋಗ ಮಾಹಿತಿ ವಾಟ್ಸಪ್ ಚಾನಲ್‌ಗೆ ಸಮುದಾಯದ ಲಕ್ಷಾಂತರ ಜನರು ಸೇರಬಹುದು. ಪ್ರತಿನಿತ್ಯ 10ಕ್ಕೂ ಹೆಚ್ಚಿನ ವಿವಿಧ ಇಲಾಖೆಗಳ, ವಿವಿಧ ಉದ್ಯೋಗ ಕ್ಷೇತ್ರಗಳ ಉದ್ಯೋಗ ಮಾಹಿತಿಯನ್ನು ಹಂಚಿಕೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಸಾವಿರಾರು ಕಂಪನಿಗಳಲ್ಲಿ ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸುತ್ತಿರುವ ಸಮಾಜ ಬಂಧುಗಳ ಸಹಕಾರದಿಂದ ನಮ್ಮ ಯುವ ಸಮುದಾಯದ ಉದ್ಯೋಗಾಕಾಂಕ್ಷಿಗಳಿಗೆ ಪ್ರಪಂಚದಾದ್ಯಂತ ಲಭ್ಯವಿರುವ ಉದ್ಯೋಗ ಮಾಹಿತಿಗಳನ್ನು ಹಂಚಿಕೊಳ್ಳಲಾಗುವುದು ಎಂದು ಈ ಯೋಜನೆಯ ರೂವಾರಿ ರಾಜ್ಯ ಯುವ ವಿಭಾಗದ ಸಂಚಾಲಕರಾದ ಶ್ರೀ ಉಮೇಶ ಶಾಸ್ತ್ರಿ ಮಾಹಿತಿಯನ್ನು ನೀಡಿದರು.

## ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಡೆದ ಮನಕಲಕುವ ಸಂದರ್ಭ

ದೂರದ ಬಳ್ಳಾರಿಯ ಹೂವಿನ ಹಡಗಲಿಯಿಂದ ಶ್ರೀ ವಿನಯ್ ತನ್ನ ಉನ್ನತ ವಿದ್ಯಾಭ್ಯಾಸವನ್ನು (ಸಿ.ಎ.) ಪೂರೈಸಲು ಸಹಾಯವನ್ನು ಕೋರಿ ಬಂದಿದ್ದ ಪ್ರತಿಭಾವಂತ ಸಮಾಜದ ಹುಡುಗನಿಗೆ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ತನ್ನಿಂದಾಗುವ ಸಹಾಯವನ್ನು ಮಾಡಿ, ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಹಾಯ ಮಾಡಲು ಕೇಳಿದಾಗ ಸದಸ್ಯರುಗಳು ಈತನಿಗೆ ತಕ್ಷಣ ಪ್ರತಿಸ್ಪಂದಿಸಿ ರೂಪಾಯಿ 54,425ಕ್ಕೂ ಹೆಚ್ಚಿನ ಧನಸಹಾಯ ಮಾಡಿದರು.

ಮಹಾಸಭಾಧ್ಯಕ್ಷರು ಬಲಗೈಯಲ್ಲಿ ಕೊಟ್ಟದ್ದು ಎಡಗೈಗೆ ಗೊತ್ತಾಗದಂತಹ ಇಂತಹ ಅನೇಕ ಸಂದರ್ಭಗಳು ಗಾಯತ್ರಿ ಭವನದಲ್ಲಿ ನಡೆದಿರುವುದು ನಮ್ಮ ಕಣ್ಣ ಮುಂದಿದೆ.

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಯುವವಿಭಾಗದ ಸಂಚಾಲಕರಾಗಿ ಶ್ರೀ ಉಮೇಶ ಶಾಸ್ತ್ರಿ ನೇಮಕ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಗೆ 2020ರ ಚುನಾವಣೆಯಲ್ಲಿ ಗೆದ್ದು, ಅಧ್ಯಕ್ಷರಾಗಿ ಬಂದ ಶ್ರೀ ಅಶೋಕ ಹಾರನಹಳ್ಳಿಯವರು, ಸಮಾಜ ಸುಧಾರಣೆಗೆ ಎಲ್ಲಾ ಆಯಾಮಗಳಲ್ಲೂ ಹೊಸ ಚೈತನ್ಯವನ್ನು ಮೂಡಿಸಿದರು. ಸಮಾಜದಲ್ಲಿ ಎಲೆ ಮರೆಕಾಯಿಯಂತೆ ದುಡಿಯುತ್ತಿದ್ದ ವಿಪ್ರ ಸಮಾಜದ ಅನೇಕ ಯುವ ಪ್ರತಿಭೆಗಳಿಗೆ ತನ್ನ ಕಾರ್ಯಕಾರಿ ಸಮಿತಿಯಲ್ಲಿ ಸ್ಥಾನಕೊಟ್ಟು ಮುಂದಿನ ಸಮಾಜ ಮುಖಂಡರಾಗಲು ದಾರಿ ತೋರಿಸಿದರು. ಈ ಯುವ ಪ್ರತಿಭೆಗಳಲ್ಲಿ ಈಗ ರಾಜ್ಯ ಯುವ ವಿಭಾಗಕ್ಕೆ ಸಂಚಾಲಕರಾಗಿ ನೇಮಕರಾಗಿರುವ ಶ್ರೀ ಉಮೇಶ ಶಾಸ್ತ್ರಿ ಸಹ ಒಬ್ಬರು.

ಕರಾವಳಿ ಮೂಲದ ಕೂಟ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಉಮೇಶ ಶಾಸ್ತ್ರಿ ಕಾರಂತ ಮನೆತನಕ್ಕೆ ಸೇರಿದವರು. ತನ್ನ 25ನೇ ವಯಸ್ಸಿಗೆ ವಿಪ್ರ ಸಮುದಾಯದ ಸೇವೆಗೆ ಬಂದು ಕೂಟ ಸಮಾಜದ ಹಿರಿಯರ ಮಾರ್ಗದರ್ಶನದಲ್ಲಿ ಹಂತ ಹಂತವಾಗಿ ಬೆಳೆದವರು. ಕೂಟ ಮಹಾಜಗತ್ತಿನಲ್ಲಿ ಯುವಬಳಗದ ಅಧ್ಯಕ್ಷನಾಗಿ, 2 ಬಾರಿ ಜಂಟಿ ಕಾರ್ಯದರ್ಶಿಯಾಗಿ, 1 ಬಾರಿ ಕೇಂದ್ರ ಸಂಸ್ಥೆಯ ಸಂಘಟನಾ ಕಾರ್ಯದರ್ಶಿಯಾಗಿ, ಪ್ರಸ್ತುತ ಕೂಟಬಂಧು ಕಾರ್ಯನಿರ್ವಹಣಾಧಿಕಾರಿಯಾಗಿ ಸಮಾಜ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ತಾನು ವಹಿಸುವ ಯಾವುದೇ ಜವಾಬ್ದಾರಿಗೆ ತನ್ನಿಂದಾಗುವ ಸಕಲ ಶ್ರಮವನ್ನು ಹಾಕಿ, ಕಾಲಮಾನಕ್ಕೆ ತಕ್ಕಂತೆ ವಿನೂತನ ರೀತಿಯಲ್ಲಿ ಕಾರ್ಯಕ್ರಮಗಳನ್ನು ಯೋಜಿಸಿ ಸಮಾಜ ಸೇವೆ ಸಲ್ಲಿಸುವುದು ಇವರಿಗೆ ತನ್ನ ಕುಲಗುರು ಸಾಲಿಗ್ರಾಮ ಶ್ರೀ ಗುರುನರಸಿಂಹನು ನೀಡಿರುವ ವರ.

ಕರಾವಳಿ ಮೂಲದ ಅನೇಕ ಸಂಘ-ಸಂಸ್ಥೆಗಳೊಂದಿಗೆ, ಸಂಪನ್ಮೂಲ ವ್ಯಕ್ತಿಗಳೊಂದಿಗೆ ಉತ್ತಮ ಸಂಬಂಧ ಹೊಂದಿರುವವರು. ಕರೋನಾ 1ನೇ ಆವೃತ್ತಿಯ ಲಾಕ್‌ಡೌನ್ ಸಂದರ್ಭದಲ್ಲಿ ಮನೆಯಿಂದ ಹೊರಬರಲು ಹೆದರುತ್ತಿದ್ದ ಸಂದರ್ಭದಲ್ಲಿ ತಿಂಗಳುಗಟ್ಟಲೆ ಮನೆಯಿಂದ ಹೊರಗಿದ್ದು, ಸಮಾಜದ ಹಿರಿಯರ ಮಾರ್ಗದರ್ಶನದಲ್ಲಿ ಸಾವಿರಾರು ಜನರಿಗೆ ಆಹಾರ ಪೊಟ್ಟಣಗಳನ್ನು ಹಂಚಿದರು. ತನಗೆ ಗೊತ್ತಿರುವ ಸಂಪನ್ಮೂಲ ವ್ಯಕ್ತಿಗಳ ಸಹಕಾರದಿಂದ ಬೆಂಗಳೂರಿನ ಪ್ರಮುಖ ಹೊಟೇಲ್‌ಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ ತೊಂದರೆಯಲ್ಲಿದ್ದ ಸಾವಿರಾರು ಕುಲಬಾಂಧವರಿಗೆ ಸಹಾಯ ಹಸ್ತವನ್ನು ಚಾಚಿದರು. ಬೆಂಗಳೂರು ನಗರ ಪೊಲೀಸರೊಂದಿಗೆ ಸೇರಿ ನಗರದ ಕೊಳಗೇರಿ ನಿವಾಸಿಗಳಿಗೆ ಪ್ರತಿದಿನ ಊಟದ ಪೊಟ್ಟಣಗಳನ್ನು ಹಂಚಿದರು.

ಕರೋನಾ 2ನೇ ಆವೃತ್ತಿಯ ಭೀಕರತೆಯಲ್ಲಿ ಎದೆಗುಂದದೆ ಓಡಾಡಿ, ತನ್ನ ಧರ್ಮಪತ್ನಿ, ಪ್ರಸ್ತುತ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷೆಯಾಗಿರುವ ಶ್ರೀಮತಿ ರೂಪಾಶಾಸ್ತ್ರಿಯವರೊಂದಿಗೆ ಸಾವಿರಾರು ಜನರಿಗೆ ಕರೋನಾ ಲಸಿಕೆಗಳನ್ನು ಒದಗಿಸಿದರು. ಬೆಂಗಳೂರಿನ ಅನೇಕ ಭಾಗಗಳಲ್ಲಿ ಸಮಾಜದ ಪ್ರಮುಖರ ಸಹಯೋಗದೊಂದಿಗೆ ಲಸಿಕಾ ಅಭಿಯಾನವನ್ನು ನಡೆಸಿದರು. ಈ ಸಮಯದಲ್ಲಿ ಇವರ ಸೇವೆಯನ್ನು ಗಮನಿಸಿದ ಪೊಲೀಸ್ ಇಲಾಖೆ, ಬಿಬಿಎಂಪಿ ಮತ್ತು ಕರೋನಾ ನಿಗ್ರಹ ಸ್ಕ್ವಾ ಇವರನ್ನು ಸನ್ಮಾನಿಸಿ, ಪ್ರಶಂಸಾ ಪತ್ರಗಳನ್ನು ನೀಡಿದೆ.

ಇದೇ ಕರೋನಾ ಸಂದರ್ಭದ ಒಂದು ಕಾರ್ಯಕ್ರಮದಲ್ಲಿ ದಿನಸಿ ಕಿಟ್ ವಿತರಣಾ ಕಾರ್ಯಕ್ರಮದಲ್ಲಿ, ಆಗಿನ ಸಚಿವರಾಗಿದ್ದ ಶ್ರೀ ಕೆ. ಗೋಪಾಲಯ್ಯರೊಂದಿಗೆ ಅತಿಥಿಗಳಾಗಿ ಭಾಗವಹಿಸಿದ್ದ ಮಹಾಸಭಾದ ಉಪಾಧ್ಯಕ್ಷರಾಗಿರುವ ಶ್ರೀ ರಾಘವೇಂದ್ರ ಭಟ್ಟರ ಕಣ್ಣಿಗೆ ಬಿದ್ದ ಶ್ರೀ ಉಮೇಶ ಶಾಸ್ತ್ರಿಯವರನ್ನು, ನಿಮ್ಮಂತಹ ಸಕ್ರಿಯ ಯುವ ಪ್ರತಿಭೆಗಳು ನಮ್ಮ ಮಹಾಸಭೆಗೆ ಬರಬೇಕು, ಇಡೀ ವಿಪ್ರ ಸಮಾಜಕ್ಕೆ ನೀವು ಸೇವೆ ಸಲ್ಲಿಸುವಂತಾಗಬೇಕೆಂದು ಪ್ರೇರೇಪಿಸಿ, ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ಕಾರ್ಯಕಾರಿ ಸಮಿತಿಗೆ ಸದಸ್ಯರನ್ನಾಗಿ ಮಾಡಿಸಿದರು. ನೂರಾರು ಕಾರ್ಯಕಾರಿ ಸಮಿತಿ ಸದಸ್ಯರುಗಳ ಮಧ್ಯೆ ತನ್ನ ಕಾರ್ಯವೈಖರಿಯನ್ನು ಮಹಾಸಭೆಯ ಎಲ್ಲಾ ಸಭೆ, ಸಮಾವೇಶಗಲ್ಲಿ ತೋರಿಸಿ ಇಂದು ಮಹಾಸಭಾ ರಾಜ್ಯ ಯುವ ವಿಭಾಗದ ಸಂಚಾಲಕರಾಗಿ ನೇಮಕರಾಗಿದ್ದಾರೆ.



ಮಹಾಸಭಾ ಸಂಘಟನಾ ಕಾರ್ಯದರ್ಶಿಗಳಾಗಿದ್ದ, ಪ್ರಸ್ತುತ ಉಪಾಧ್ಯಕ್ಷರಾಗಿರುವ ಶ್ರೀ ರಾಘವೇಂದ್ರ ಭಟ್ಟರೊಂದಿಗೆ, ಉಪಾಧ್ಯಕ್ಷರಾದ ಶ್ರೀ ರಾಜೇಂದ್ರ ಪ್ರಸಾದ್‌ರೊಂದಿಗೆ ಕರ್ನಾಟಕದ ಎಲ್ಲಾ ಜಿಲ್ಲೆಗಳ ಸಂಘಟನಾ ಪ್ರವಾಸ ಮಾಡಿರುವ ಉಮೇಶ ಶಾಸ್ತ್ರಿ ನಮ್ಮ ಸಮಾಜದ ಆಳ ಅಗಲಗಳನ್ನು ಬಲ್ಲವರಾಗಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳ ವಿಪ್ರ ಮುಖಂಡರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದಾರೆ.

ತಾನು ಮಾಡುವ ಸೇವಾಕಾರ್ಯವನ್ನು ಸಮಾಜ ಗುರುತಿಸುವಂತಾಗುತ್ತದೆ ಎಂದು ಬಲವಾಗಿ ನಂಬಿರುವ ಉಮೇಶ ಶಾಸ್ತ್ರಿ, ಯಾವುದೇ ಜವಾಬ್ದಾರಿ ಸಿಗಲಿ ಅದಕ್ಕೆ ಸಂಪೂರ್ಣ ನ್ಯಾಯವನ್ನು ಒದಗಿಸಲು ಪ್ರಯತ್ನಿಸುತ್ತಾರೆಂದು ಅವರನ್ನು ಹತ್ತಿರದಿಂದ ಬಲ್ಲ ಸಮಾಜಬಂಧುಗಳು ಹೇಳುತ್ತಾರೆ. ಅಕ್ಟೋಬರ್ 8, 2023ರಂದು ಬೆಂಗಳೂರಿನಲ್ಲಿ ಮಹಾಸಭಾ ಉಪಾಧ್ಯಕ್ಷರಾದ ಶ್ರೀ ಪಿ.ಸಿ. ರಾವ್ ಮತ್ತು ಶ್ರೀಮತಿ ರೂಪಾಶಾಸ್ತ್ರಿಯವರ ಉಸ್ತುವಾರಿಯಲ್ಲಿ ಸಮಾಜದ ವಿಪ್ರ ವಾಣಿಜ್ಯೋದ್ಯಮಿಗಳು, ಉದ್ದಿಮೆದಾರರನ್ನು ಸೇರಿಸಿ, ಆಯೋಜಿಸಿದ್ದ ವಿಪ್ರ ವಾಣಿಜ್ಯ ಎಂಬ ವಾಣಿಜ್ಯೋದ್ಯಮಿಗಳ ಸಮಾವೇಶದ ಸಂಚಾಲಕರಾಗಿ ತನ್ನ ಕಾರ್ಯಕೌಶಲ್ಯವನ್ನು ಸಮಾಜಬಂಧುಗಳ ಮುಂದೆ ಅನಾವರಣಗೊಳಿಸಿದರು.

ಪ್ರಸ್ತುತ ಹೊಟೇಲ್ ಉದ್ಯಮಿಯಾಗಿ ಬೆಂಗಳೂರಿನಲ್ಲಿ ಸುಸಜ್ಜಿತ 4 ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗಳನ್ನು ನಡೆಸುತ್ತಿದ್ದು, ತನ್ನ ಜೀವನೋಪಾಯಕ್ಕೆ ಇನ್ನಿತರ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ತನ್ನ ಉದ್ಯಮದ ಮಧ್ಯೆಯೂ ಹೆಚ್ಚಿನ ಸಮಯವನ್ನು ನಿರಂತರವಾಗಿ ಸಮಾಜ ಸೇವೆಗೆ ನೀಡುತ್ತಿರುವ ಉಮೇಶ ಶಾಸ್ತ್ರಿಯವರ ಸೇವೆ ಇದೇ ರೀತಿಯಲ್ಲಿ ಮುಂದುವರಿಯಲಿ, ರಾಜ್ಯ ಯುವ ವಿಭಾಗದ ಸಂಚಾಲಕ ಜವಾಬ್ದಾರಿಯನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸುವಂತಾಗಲಿ ಎಂದು ವಿಪ್ರನುಡಿ ಪತ್ರಿಕಾ ಬಳಗ ಹಾರೈಸುತ್ತದೆ. ಇದೇ ಸಂದರ್ಭದಲ್ಲಿ ಉಮೇಶ ಶಾಸ್ತ್ರಿ ತನ್ನ ನೂತನ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಎಲ್ಲಾ ಸಮಾಜಬಂಧುಗಳ, ಮುಖಂಡರುಗಳ ಸಹಕಾರ ಮತ್ತು ಮಾರ್ಗದರ್ಶನವನ್ನು ಬಯಸಿರುತ್ತಾರೆ.

# ರಾಜ್ಯ ಯುವ ವಿಭಾಗವನ್ನು ಸಂಘಟಿಸಲು ಕೈಗೊಳ್ಳಲುದ್ದೇಶಿಸಿರುವ ಪ್ರಾಥಮಿಕ ಹಂತದ ಕಾರ್ಯಕ್ರಮಗಳು

ರಾಜ್ಯ ಯುವ ವಿಭಾಗವನ್ನು ಒಂದು ಸದೃಢ ವಿಭಾಗವನ್ನಾಗಿ ಮಾಡಲು, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ, ಆ ಭಾಗದ ವಿಪ್ರ ಮುಖಂಡರ ಮಾರ್ಗದರ್ಶನದಲ್ಲಿ ಕನಿಷ್ಠ 50ರಿಂದ 100 ಯುವಕ-ಯುವತಿಯರ ತಂಡವನ್ನು ಕಟ್ಟಲು ತೀರ್ಮಾನಿಸಲಾಗಿದೆ. ರಾಜ್ಯಾದ್ಯಂತ ಯುವ ಸಮೂಹವನ್ನು ಕ್ರಿಯಾಶೀಲಗೊಳಿಸಲು ರಾಜ್ಯಾದ್ಯಂತ ವಿಪ್ರ ಯುವಚೈತನ್ಯ ಯಾತ್ರೆಯನ್ನು ಹಮ್ಮಿಕೊಳ್ಳಲಾಗುವುದು. ಯುವ ಸಮೂಹವನ್ನು ಪ್ರೇರೇಪಿಸಲು ರಾಜ್ಯ ಯುವವಿಭಾಗದ ಘನತೆಗೆ ತಕ್ಕಂತೆ ಈ ಕೆಳಗಿನ ಕಾರ್ಯಕ್ರಮಗಳನ್ನು ಯೋಜಿಸಿ, ಈಗಾಗಲೇ ಯುವ ವಿಭಾಗ ಕಾರ್ಯ ಪ್ರವೃತ್ತವಾಗಿದೆ.

01. ಸಮಾಜದ ಯುವ ಸಮೂಹ ಐಎಎಸ್, ಐಪಿಎಸ್, ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಮತ್ತು ಉನ್ನತ ಶಿಕ್ಷಣಕ್ಕೆ ಸಹಕಾರ, ಸಹಾಯ ಮತ್ತು ಮಾರ್ಗದರ್ಶನ ನೀಡಲು ವೇದಿಕೆ ನಿರ್ಮಾಣ. ರಾಜ್ಯದ ಖ್ಯಾತ ಶಿಕ್ಷಣ ಸಂಸ್ಥೆಗಳೊಂದಿಗೆ, ಕೋಚಿಂಗ್ ಸೆಂಟರ್‌ಗಳೊಂದಿಗೆ, ಹೊರದೇಶದ ಖ್ಯಾತ ಯೂನಿವರ್ಸಿಟಿಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ನಮ್ಮ ಸಮಾಜದ ಯುವಕ-ಯುವತಿಯರಿಗೆ ಯುವ ವಿಭಾಗದ ಮೂಲಕ ಅನುಕೂಲ ಒದಗಿಸುವುದು.

02. ವಿಶ್ವದಾದ್ಯಂತ ವಾಸಿಸುತ್ತಿರುವ ಸಮಾಜ ಬಂಧುಗಳ ಸಹಕಾರದಿಂದ ರಾಜ್ಯ, ದೇಶ, ವಿದೇಶಗಳ ದೊಡ್ಡ ಕಂಪನಿಗಳು, ಎಂಎನ್‌ಸಿ ಕಂಪನಿಗಳು, ವಿವಿಧ ಸೆಕ್ಟರ್‌ಗಳ ಕಂಪನಿಗಳೊಂದಿಗೆ ಸಂಪರ್ಕ ಸಾಧಿಸಿ, ಸಮಾಜದ ಯುವಕ-ಯುವತಿಯರಿಗೆ ತಮ್ಮ ವಿದ್ಯಾರ್ಹತೆಗೆ ಅನುಗುಣವಾಗಿ ಉದ್ಯೋಗಗಳನ್ನು ಒದಗಿಸುವುದು. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಯುವಕ-ಯುವತಿಯರಿಗೆ ಖ್ಯಾತ ಸಂಘ-ಸಂಸ್ಥೆಗಳ ಜೊತೆಗೂಡಿ ಉದ್ಯೋಗ ಮೇಳಗಳನ್ನು ಆಯೋಜಿಸುವುದು.

03. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಡಿಯಲ್ಲಿ ಯುವ ಸಮೂಹಕ್ಕೆ ಸಹಕಾರಿಯಾಗುವಂತಹ ಯೋಜನೆಗಳನ್ನು ನಮ್ಮ ಸಮಾಜದ ಯುವ ಸಮೂಹಕ್ಕೆ ಒದಗಿಸಲು ಪ್ರಯತ್ನಿಸುವುದು. ನಮ್ಮ ಯುವ ಸಮೂಹಕ್ಕೆ ಕೌಶಲ್ಯ ತರಬೇತಿಗಳ ಕಾರ್ಯಾಗಾರಗಳನ್ನು ಆಯೋಜಿಸಿ (MSME, Skill India, FKCCI, Nehru Yuva Kendra, Samartha Bharata, Youth for Seva, etc.) ಅವರ ಜೀವನವನ್ನು ರೂಪಿಸುವಲ್ಲಿ ಸಹಕರಿಸುವುದು.

04. ನಮ್ಮ ಸಮಾಜದ ಯುವ ಸಮೂಹ ತನ್ನ ಸ್ವಂತ ಉದ್ದಿಮೆ, ವ್ಯಾಪಾರ ನಡೆಸಲು ಅನುಕೂಲವಾಗುವಂತೆ ನಮ್ಮ ಸಮಾಜದ ಖ್ಯಾತ ವಾಣಿಜ್ಯೋದ್ಯಮಿಗಳ ಸಹಕಾರದೊಂದಿಗೆ, ಸರ್ಕಾರದ ಸಹಕಾರದೊಂದಿಗೆ ಸಣ್ಣ ಸಣ್ಣ ಉದ್ದಿಮೆಗಳನ್ನು (Startup) ಪ್ರಾರಂಭಿಸಲು ಸೂಕ್ತ ತರಬೇತಿಗಳನ್ನು ಕೊಡಿಸಿ, ಉದ್ದಿಮೆಗಳನ್ನು ಪ್ರಾರಂಭಿಸಲು ಅನುಕೂಲವಾಗುವಂತೆ ವಾಣಿಜ್ಯ ಕಾರ್ಯಾಗಾರಗಳನ್ನು ಆಯೋಜಿಸುವುದು.

05. ನಮ್ಮ ಸಮಾಜ ದಶಕಗಳಿಂದ ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆ ವೈವಾಹಿಕ ಸಮಸ್ಯೆ. ಈ ವ್ಯವಸ್ಥೆಯನ್ನು ರಾಜ್ಯದ ವಿಪ್ರ ಸಮುದಾಯದ ಹಿರಿಯ ಸಂಸ್ಥೆ ಎಕೆಬಿಎಂಎಸ್ ತನ್ನ ಇತಿಮಿತಿಯಲ್ಲಿ ಬಗೆಹರಿಸಲು ಪ್ರಯತ್ನಿಸುವುದು. ಅದಕ್ಕಾಗಿ ವೈವಾಹಿಕ ವ್ಯವಸ್ಥೆಯ ಕುರಿತು ಒಂದು ಕಾರ್ಯಾಗಾರವನ್ನು ನಡೆಸುವುದು. ಮಹಾಸಭಾದ ವಿವಾಹ ವೇದಿಕೆಯ ಜೊತೆಯಲ್ಲಿ ರಾಜ್ಯದಲ್ಲಿರುವ ಪ್ರಸಿದ್ಧ 25-30 ವಿವಾಹ ಸಂಪರ್ಕ ವೇದಿಕೆಗಳ ಸಹಕಾರದೊಂದಿಗೆ, ಸಮಾಜದ ಶ್ರೇಷ್ಠ ವಿದ್ವಾಂಸರು, ಹಿರಿಯರಿಂದ ಈ ಸಮಸ್ಯೆಗೆ ಪರಿಹಾರವನ್ನು ರೂಪಿಸಲು ಪ್ರಯತ್ನಿಸುವುದು.

06. ಬ್ರಾಹ್ಮಣ ಸಮಾಜದ ಕುರಿತು ಅವಹೇಳನ ಮಾಡುವವರ ವಿರುದ್ಧ ಸಮಾಜದ ಹಿರಿಯರ ಮಾರ್ಗದರ್ಶನದಲ್ಲಿ ಕಾನೂನಾತ್ಮಕವಾಗಿ ಹೋರಾಡುವುದು. ಇದಕ್ಕೆ ಸಂಬಂಧಿಸಿದಂತೆ ಒಂದು ಯುವ ವಕೀಲರ ತಂಡವನ್ನು ರಚಿಸಿಕೊಳ್ಳುವುದು.

07. ಸಾವಿರಾರು ವರ್ಷಗಳಿಂದ ರಕ್ಷಿಸಿಕೊಂಡು ಬಂದಿರುವ ನಮ್ಮ ಆಚಾರ-ವಿಚಾರ, ಸಂಸ್ಕೃತಿ ನಮ್ಮ ಸಮಾಜದ ಆಸ್ತಿ. ಇದನ್ನು ಸಾಧ್ಯವಾದ ಮಟ್ಟಿಗೆ ಆಚರಿಸಿಕೊಂಡು, ಉಳಿಸಿಕೊಂಡು ನಮ್ಮ ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ನಮ್ಮ ಯುವ ಸಮುದಾಯದ ಮೇಲಿದೆ. ಈ ಕುರಿತು ನಮ್ಮ ಮಠಾಧಿಪತಿಗಳ, ಪಂಡಿತರ ಮಾರ್ಗದರ್ಶನದಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಆಯೋಜಿಸುವುದು.

08. ವಿಶ್ವದಾದ್ಯಂತ ಹರಡಿರುವ ವಿಪ್ರ ಯುವ ಸಮುದಾಯವನ್ನು ಈಗಿನ ಸೋಷಿಯಲ್ ಮೀಡಿಯಾ, ಎಲೆಕ್ಟ್ರಾನಿಕ್ ಮೀಡಿಯಾ ಬಳಸಿಕೊಂಡು ಸಂಘಟಿಸಿ, ರಾಜ್ಯ ಯುವ ವಿಭಾಗವನ್ನು ಇಡೀ ರಾಷ್ಟ್ರದಲ್ಲಿಯೇ ಒಂದು ಬಲಾಢ್ಯ ವಿಪ್ರ ಯುವ ವಿಭಾಗವನ್ನಾಗಿ ಮಾಡುವುದು.

# ವಿಠಲಧಾಮದಲ್ಲಿ ಶ್ರೀಶಾಭಿನಂದನ ಸಡಗರ

## ಸಂತಗಣದ ಶುಭಹಾರೈಕೆ; ವಿದ್ವತ್‌ಗೋಷ್ಠಿ; ಧರ್ಮಶ್ರೇಷ್ಠರು ಭಾಗಿ



ಮೈಸೂರಿನ ವಿಠಲಧಾಮದಲ್ಲಿ ನಡೆದ ಶ್ರೀಶಾಭಿನಂದನಮ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಅಶೋಕ್ ಹಾರನಹಳ್ಳಿ ಅವರನ್ನು ಸೋಸಲೆ ಮಠಾಧೀಶರಾದ ವಿದ್ಯಾಶ್ರೀಶತೀರ್ಥ ಶ್ರೀಪಾದರು ಅಭಿನಂದಿಸಿದರು.

ಮೈಸೂರಿನ ವಿಠಲಧಾಮದಲ್ಲಿ ನಡೆದಿರುವ ಶ್ರೀಮನ್ ನ್ಯಾಯಸುಧಾಮಂಗಳ ಮಹೋತ್ಸವದಲ್ಲಿ ಶನಿವಾರ ಸಡಗರ ಮಡುಗಟ್ಟಿತ್ತು. ಸೋಸಲೆ ವ್ಯಾಸರಾಜ ಮಠಾಧೀಶರಾದ ವಿದ್ಯಾಶ್ರೀಶತೀರ್ಥ ಶ್ರೀಪಾದರಿಗೆ ಧಾರ್ಮಿಕ ಸಮಾಜದ ಮೇರುಗಳಂತಿರುವ ಮಠಾಧೀಶರು ಅಭಿನಂದನೆ ಸಲ್ಲಿಸಿದರು.

ವಿಠಲಧಾಮದ ಆವರಣದಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸ್ವಾಮೀಜಿಗಳು, ಧಾರ್ಮಿಕ ಉನ್ನತಿಗಾಗಿ ಸೋಸಲೆ ಮಠ ನೀಡಿರುವ ಬೃಹತ್ ಕಾಣಿಕೆಯನ್ನು ಸ್ಮರಿಸಿದರು. ಸುರಿಯುತ್ತಿದ್ದ ಜೋರು ಮಳೆಯ ನಡುವೆಯೂ ದೊಡ್ಡ ಸಂಖ್ಯೆಯಲ್ಲಿ ಸೇರಿದ್ದ ಜನಸ್ತೋಮದ ಉತ್ಸಾಹ ಅಪರಿಮಿತವಾಗಿತ್ತು.

**ಸ್ವಾಮೀಜಿ ಕೊಡುಗೆಯ ಶ್ಲಾಘನೆ**

ವಿದ್ಯಾಶ್ರೀಶತೀರ್ಥ ಶ್ರೀಪಾದರು ಸಮಾಜಕ್ಕೆ ನೀಡಿರುವ ಕೊಡುಗೆಯನ್ನು ಸುತ್ತೂರು ಮಠಾಧೀಶರಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕೊಂಡಾಡಿದರು. ನರಸೀಪುರದ ಬಳಿಯ ಸೋಸಲೆಯಲ್ಲಿ ಜೆಎಸ್‌ಎಸ್ ಹಾಗು ವ್ಯಾಸರಾಜ ಮಠದ ಮಧುರ ಸಂಬಂಧದ ಬಗ್ಗೆಯೂ ಶ್ರೀಗಳು ಮಾಹಿತಿ ನೀಡಿದರು.

ಕಾಗಿನೆಲೆ ಮಹಾಸಂಸ್ಥಾನ ಮಠದ ನಿರಂಜನಾನಂದಪುರಿ ಸ್ವಾಮೀಜಿ, ಅವಧೂತ ದತ್ತಪೀಠದ ದತ್ತವಿಜಯಾನಂದಸ್ವಾಮೀಜಿ, ಮಂತ್ರಾಲಯ ಮಠಾಧೀಶರಾದ ಸುಭುದೇಂದ್ರತೀರ್ಥ ಶ್ರೀಪಾದರು, ಬಾಳಗರು ಮಠದ ಅಕ್ಷೋಭ್ಯರಾಮಪ್ರಿಯತೀರ್ಥ ಶ್ರೀಪಾದರು, ಪೇಜಾವರ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು, ಸುಜಯನಿಧಿ ಶ್ರೀಪಾದರು ಸೇರಿದಂತೆ ಇನ್ನಿತರ ಯತಿವರ್ಯರು ವೇದಿಕೆಯಲ್ಲಿದ್ದರು.

**ಗೌರವ ಸನ್ಮಾನ**

ಶ್ರೀಶಾಭಿನಂದನ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಅಶೋಕ್ ಹಾರನಹಳ್ಳಿ ಅವರನ್ನು ವಿದ್ಯಾಶ್ರೀಶತೀರ್ಥ ಶ್ರೀಪಾದರು ಮಠದ ವತಿಯಿಂದ ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ಡಾ.ಶ್ರೀಶಾನಂದ, ನಿವೃತ್ತ ಅಧಿಕಾರಿ ಸುರಂಜನ್ ಇನ್ನಿತರ ಪ್ರಮುಖರು ಭಾಗಿಯಾಗಿದ್ದರು. ವ್ಯಾಸರಾಯರ ಕುರಿತು ವ್ಯಾಸನಕೆರೆ ಪ್ರಭಂಜನಾಚಾರ್ಯರು ಪ್ರವಚನ ನೀಡಿದರು.

# ಬಿಜಾಪುರ ಹಾಗು ಬಾಗಲಕೋಟೆ ಜಿಲ್ಲೆಯ ವಿವಿಧ ವಿಪ್ರ ಮಹಿಳಾ ಸಂಘದ ಪದಾಧಿಕಾರಿಗಳ ಸಭೆಗೆ ಅಧ್ಯಕ್ಷರ ಭೇಟಿ



ದಿನಾಂಕ 12.06.2024 ರಂದು ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಯ ವಿವಿಧ ವಿಪ್ರ ಮಹಿಳಾ ಸಂಘದ ಪದಾಧಿಕಾರಿಗಳು ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರನ್ನು ಭೇಟಿ ಮಾಡಿ ಮಹಿಳಾ ಸ್ವಸಹಾಯ ಸಂಘದಡಿಯಲ್ಲಿ ಹಮ್ಮಿಕೊಳ್ಳಲಿರುವ ವಿವಿಧ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು. ಮಹಾಸಭೆಯ ಉಪಾಧ್ಯಕ್ಷರಾದ ಶ್ರೀ ವೈ.ಎ. ಸುಧಾಕರ ಬಾಬು ಅವರ ಮಾನಸ ವಿದ್ಯಾ ಸಂಸ್ಥೆಯಲ್ಲಿ ಈ ಕಾರ್ಯಕ್ರಮ ಜರುಗಿತು ಹಾಗೂ ಈ ಕಾರ್ಯಕ್ರಮಕ್ಕೆ ಶ್ರೀ ವೈ.ಎ. ಸುಧಾಕರ ಬಾಬು ಅವರು ಸಂಪೂರ್ಣ ಸಹಕಾರ ನೀಡಿದರು .

ಈ ಸಂದರ್ಭದಲ್ಲಿ ಮಹಿಳಾ ಪದಾಧಿಕಾರಿಗಳು ಬಿಜಾಪುರದಿಂದ ಧರಿಸಿ ಬಂದಿದ್ದ ಟೋಪಿ ಹಾಗೂ ಅದರ ಮೇಲಿದ್ದ ವಿಜ್ಞಾಪನೆ **"ವಿಪ್ರ ಸಮೂಹದ ಏಳಿಗೆಗಾಗಿ ಮತ್ತೊಮ್ಮೆ ಅಶೋಕ ಹಾರನಹಳ್ಳಿ"** "ಹಾರನಹಳ್ಳಿ for AKBMS" ಎಲ್ಲರ ಗಮನ ಸೆಳೆಯಿತು. "ಮತ್ತೊಮ್ಮೆ ಹಾರನಹಳ್ಳಿ ಅವರೇ ಮಹಾಸಭಾದ ಅಧ್ಯಕ್ಷರಾಗಬೇಕು" ಎಂಬ ಕೂಗು ನೆರೆದಿದ್ದ ಎಲ್ಲ ಮಹಿಳಾ ಪದಾಧಿಕಾರಿಗಳಿಂದ ಬಲವಾಗಿಯೇ ಕೇಳಿ ಬಂದಿತು.

# ಬೆಳ್ತಂಗಡಿ ತಾಲೂಕು ಚಿತ್ಪಾವನ ಬ್ರಾಹ್ಮಣರ ಸಂಘದ ವತಿಯಿಂದ ಶಿಕ್ಷಣ ಮಾಹಿತಿ ಶಿಬಿರ




ಚಿತ್ಪಾವನರು ಪ್ರತಿಭಾವಂತರು. ಸಾಧನಶೀಲರು. ಆದರೆ ನಮ್ಮ ಕಡೆಯ ಚಿತ್ಪಾವನರು ನವೀನ (innovative) ತರಗತಿಗಳಿಗೆ ಹೋಗುವುದು ಕಡಿಮೆ.ಇದಕ್ಕೆ ಕಾರಣ ಪಕ್ಕದಲ್ಲೇ ಸಿಗುವ ಸಾಂಪ್ರದಾಯಿಕ ಕಾಲೇಜುಗಳು ಸಾಕು ಎಂಬ ಉದಾಸೀನ ಒಂದು ಕಡೆಯಾದರೆ ಮಕ್ಕಳಿಗೆ ಕೋರ್ಸ್‌ಗಳ ಬಗ್ಗೆ, ವಿದ್ಯಾರ್ಥಿವೇತನ, ಶುಲ್ಕ ಮತ್ತು ಪ್ರವೇಶ ಕ್ರಮ ಮತ್ತು ತಯಾರಿ ಬಗ್ಗೆ ಮಾಹಿತಿ ಕೊರತೆ ಮುಖ್ಯ ಕಾರಣವಾಗಿದೆ. ಇದನ್ನು ಮನಗಂಡು ಬೆಳ್ತಂಗಡಿ ತಾಲೂಕು ಚಿತ್ಪಾವನ ಬ್ರಾಹ್ಮಣರ ಸಂಘದ ವತಿಯಿಂದ 8ನೇ ತರಗತಿಯಿಂದ ಪಿ.ಯು.ಸಿ. ವರೆಗಿನ ಮಕ್ಕಳಿಗೆ ಶಿಕ್ಷಣದ ಬಗ್ಗೆ ಮಾಹಿತಿ ಶಿಬಿರವನ್ನು ಉಜಿರೆ ಜನಾರ್ದನ ದೇವಸ್ಥಾನದ ವಠಾರದಲ್ಲಿ ತಾ 12/5/2024ರಂದು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಉಜಿರೆ ಜನಾರ್ದನಸ್ವಾಮಿ ದೇವಸ್ಥಾನದ ಮೊಕ್ತೇಸರರಾದ ಶ್ರೀ ಶರತ್ ಕೃಷ್ಣ ಪಟ್ವೆಡ್ನಾಯ ಅವರು, ಬ್ರಾಹ್ಮಣರಿಗೆ ಜ್ಞಾನವೇ ಸಂಪತ್ತು, ಬ್ರಾಹ್ಮಣರು ಇಂದು ಅಸ್ತಿತ್ವ ಉಳಿಸಿಕೊಂಡಿದ್ದರೆ ಅದು ಜ್ಞಾನ ಸಂಪತ್ತಿನಿಂದ. ಚಿತ್ಪಾವನ ಸಂಘದ ಇಂತಹ ಕಾರ್ಯಕ್ರಮ ಅನುಕರಣೀಯ ಎಂದರು. ಬೆಳ್ತಂಗಡಿ ತಾಲೂಕು ಚಿತ್ಪಾವನ ಸಂಘದ ಅಧ್ಯಕ್ಷ ಶ್ರೀ ತ್ರಿವಿಕ್ರಮ ಹೆಬ್ಬಾರ್ ಕೇಳ್ಕರ್ ಶಿಬಿರದ ಉದ್ದೇಶ ತಿಳಿಸಿದರು, ಶ್ರೀ ಗಣೇಶ್ ಶೇಂಡ್ಯೆ ಕಾರ್ಯಕ್ರಮ ನಿರ್ವಹಿಸಿದರು.

ನಂತರ ನಡೆದ ಮಾಹಿತಿ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ತರಬೇತುದಾರರೂ ಆದ ಶಿಕ್ಷಣ ಮಾಹಿತಿಯ ಸುಮಾರು 3000ಕಾರ್ಯಕ್ರಮ ನಡೆಸಿರುವ ರಾಮಕುಂಜೇಶ್ವರ ಪದವಿ ಪೂರ್ವ ಕಾಲೇಜಿನ ಮುಖ್ಯಸ್ಥರಾದ ಶ್ರೀ ಸತೀಶ ಭಟ್ ಮರಾಟೆಯವರು ಹೈಸ್ಕೂಲ್, ಪಿ ಯು. ಸಿ ನಂತರ ನಮ್ಮ ದೇಶದಲ್ಲಿ ಸಿಗುವ ಶಿಕ್ಷಣ ಅವಕಾಶಗಳು, ಅದಕ್ಕೆ ಪ್ರಾಥಮಿಕ ಹಂತದಿಂದ ಮಾಡಬೇಕಾದ ತಯಾರಿಗಳು, ಪ್ರವೇಶ ಪರೀಕ್ಷೆಗಳ ಮಾದರಿ, ಸರಕಾರಿ ಮತ್ತು ಖಾಸಗಿ ಸಂಸ್ಥೆ ಗಳಿಂದ ಸಿಗುವ ಸ್ಕಾಲರ್‌ಶಿಪ್‌ಗಳು ಇತ್ಯಾದಿ ಬಗ್ಗೆ ವಿವರವಾದ ಮಾಹಿತಿಗಳನ್ನು ಪವರ್ ಪಾಯಿಂಟ್ ಮೂಲಕ ತಿಳಿಸಿಕೊಟ್ಟರು.

ನಂತರ ಸಂಘದ ಅಧ್ಯಕ್ಷರಾದ ಶ್ರೀ ತ್ರಿವಿಕ್ರಮ ಹೆಬ್ಬಾರ್, ಕೇಳ್ಕರ್ ಅವರು ಬ್ರಾಹ್ಮಣರಿಗೆ ಸಿಗುವ ಇಡಬ್ಲ್ಯುಎಸ್ ಮೀಸಲಾತಿ ಗಳು,ಅದನ್ನು ಪಡೆಯುವ ವಿಧಾನದ ಬಗ್ಗೆ ಮತ್ತು ಶಿಕ್ಷಣಕ್ಕೆ ಸಿಗುವ ಬ್ಯಾಂಕ್ ಸಾಲ ಸೌಲಭ್ಯಗಳ ಬಗ್ಗೆ ತಿಳಿಸಿದರು. ಡಾ ಟಿ. ದೀಪಾಲಿ ಡೋಂಗ್ರೆ ಅವರು ವಿದ್ಯಾರ್ಥಿಗಳಿಗೆ ಕ್ಯಾರಿಯರ್ ಗೈಡೆನ್ಸ್ ಬಗ್ಗೆ ತಿಳಿಸಿದರು. ಕೊನೆಗೆ ಪ್ರಾಧ್ಯಾಪಕ ಶ್ರೀ ಗಣೇಶ್ ಶೆಂಡ್ಯೆ ಯವರು ಜೆಇಇ, ನೀಟ್ ಇತ್ಯಾದಿ ಪರೀಕ್ಷೆಗಳು ಅದರ ಪೂರ್ವ ತಯಾರಿ ಬಗ್ಗೆ ವಿವರವಾಗಿ ತಿಳಿಸಿದರು. ಸುಮಾರು 75ಜನ ಶಿಬಿರಾರ್ಥಿಗಳು ಪ್ರಯೋಜನ ಪಡೆದರು. ಶ್ರೀ ಯಶವಂತ ಪಟವರ್ಧನ್ ಉಪಾಹಾರ ವ್ಯವಸ್ಥೆ ಮಾಡಿದ್ದರು. ಬೆಳ್ತಂಗಡಿ ತಾಲೂಕು ಚಿತ್ಪಾವನ ಸಂಘದ ಕಾರ್ಯದರ್ಶಿ ಶ್ರೀ ನಾರಾಯಣ ಫಡಕೆಯವರು ವಂದನಾರ್ಪಣೆ ಮಾಡಿದರು.

# ಶಿಕ್ಷಣ ನೀಡುವ ಯೋಜನೆಯಲ್ಲಿ ಸ್ವಯಂ ಸೇವಕ ಸಂಘ ಮತ್ತು ಕೂಡಲಿ ಮಠ

ಮೇಘಾಲಯ, ಸಿಕ್ಕಿಂ, ಮಣಿಪುರ ಮುಂತಾದ ಈಶಾನ್ಯ ರಾಜ್ಯಗಳಲ್ಲಿ ಮತಾಂತರ ಹಾಗೂ ಉಗ್ರವಾದದ ತೆಕ್ಕೆಗೆ ಬೀಳದಂತೆ ಮಕ್ಕಳನ್ನು ಕಾಪಾಡಿ, ಉತ್ತಮ ಶಿಕ್ಷಣ ನೀಡುವ ಉದ್ದೇಶದಿಂದ ಅಲ್ಲಿನ ಮಕ್ಕಳನ್ನು ದಕ್ಷಿಣ ಭಾರತಕ್ಕೆ ಕರೆತಂದು ಪೋಷಿಸಿ, ಶಿಕ್ಷಣ ನೀಡುವ ಯೋಜನೆಯನ್ನು ಸ್ವಯಂ ಸೇವಕ ಸಂಘವು ಅನೇಕ ವರ್ಷಗಳಿಂದ ನಡೆಸಿಕೊಂಡು ಬರುತ್ತಿದೆ. ಈ ಯೋಜನೆಯ ಅಂಗವಾಗಿ ಕರ್ನಾಟಕಕ್ಕೆ ಬಂದಿರುವ 25 ಜನ ವಿದ್ಯಾರ್ಥಿಗಳಿಗೆ ಕೂಡಲಿ ಮಠವು ಆಶ್ರಯ ನೀಡಿ, ಉತ್ತಮ ಶಿಕ್ಷಣದ ವ್ಯವಸ್ಥೆ ಮಾಡಿದೆ.



ಕೂಡಲಿ ಮಠದಲ್ಲಿ ವಾಸ ಮಾಡುತ್ತಿರುವ ಮೇಘಾಲಯದ 25 ಮಕ್ಕಳು ನಾಳೆಯಿಂದ ಶಾಲೆಗೆ ಹಾಜರಾಗಲಿದ್ದಾರೆ.

# ಕಲಬುರ್ಗಿಯ ಯುವ ಪ್ರೇರಣೆ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ವೀರ ಸಾವರ್ಕರ್ ಜಯಂತಿ





ಕಲಬುರ್ಗಿಯ ಯುವ ಪ್ರೇರಣೆ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಮತ್ತು ಅಭಿನವ ಭಾರತ ತಂಡವು ವೀರ ಸಾವರ್ಕರ್ ಜಯಂತಿಯನ್ನು ಆಯೋಜಿಸಿತ್ತು. ಮೊದಲ ಭಾಷಣಕಾರರಾದ ಶ್ರೀ ಮುರಳಿ ಪೂಜಾರಿ ಅವರು ಸಾವರ್ಕರ್‌ಜೀಯವರ ಜೀವನದ ಬಗ್ಗೆ ಒಳನೋಟವುಳ್ಳ ಭಾಷಣವನ್ನು ಮಾಡಿದರು. ಪುಣೆಯಿಂದ ಪ್ರಯಾಣಿಸಿದ ಇನ್ನೊಬ್ಬ ಅತಿಥಿಉಪನ್ಯಾಸಕರಾದ ಶ್ರೀ ನಿತಿನ್‌ಶಾಸ್ತ್ರಿ. ಜಿ ಅವರು ವಿದೇಶಾಂಗ ಮತ್ತು ಸೈನ್ಯ ನೀತಿ ಬಗ್ಗೆ ಸಾವರ್ಕರ್‌ಜಿ ಅವರ ದೃಷ್ಟಿಕೋನವನ್ನು ಚರ್ಚಿಸಿದರು ಮತ್ತು ಅವರ ಅಪರೂಪದ ಛಾಯಾಚಿತ್ರಗಳನ್ನು ಪ್ರದರ್ಶಿಸಿದರು. 200 ಕ್ಕೂ ಹೆಚ್ಚು ದೇಶಭಕ್ತ ನಾಗರಿಕರು ಈ ಆಚರಣೆಯಲ್ಲಿ ಪಾಲ್ಗೊಂಡರು, ಇದು ಸ್ಮರಣೀಯ ಘಟನೆಯಾಗಿದೆ.

ಅಖಿಲಕ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಮತ್ತು ಯುವ ಪ್ರೇರಣೆ ಸಂಸ್ಥೆ ಅಧ್ಯಕ್ಷ ಪ್ರಮೋದ ದೇಶಪಾಂಡೆ, ಕಾರ್ಯದರ್ಶಿ ಶ್ರೇಯ್ ಮಲ್ಹಾರ್ ರಾವ್ ಮಲ್ಲೆ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಲಬುರಗಿ ಯುವ ಘಟಕದ ಪ್ರಭಾರಿ ನಾರಾಯಣ ಜಹಗೀರದಾರ ಮತ್ತು ಕಲಬುರಗಿ ಹೆಚ್.ಪಿ. ತಂಡ ಸದಸ್ಯೆ ಶ್ವೇತಾ ಶರಾಫ್ ಸೇರಿದಂತೆ ಅನೇಕರು ಕಾರ್ಯಕ್ರಮದ ಆಯೋಜಕರಾಗಿದ್ದರು.




**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು**

**ಸ್ಥಳ : ಗಾಯತ್ರಿ ಭವನ**

ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,

ಬನಶಂಕರಿ 2ನೆ ಹಂತ, ಬೆಂಗಳೂರು-70.

ದೂರವಾಣಿ : 080-26770066/26771695

ಸಮಯ : ಸಂಜೆ 5.00 ರಿಂದ 7.00 ರವರೆಗೆ

ಮಂಗಳವಾರ ಮತ್ತು ಶನಿವಾರ

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು** : ಶ್ರೀಮತಿ ಜಯಲತಾ ಸತ್ಯನಾರಾಯಣ್

ಮೊ. : 9916325902

**ಸದಸ್ಯರು**

ಶ್ರೀಮತಿ ನಳಿನಿ ನಟರಾಜ್, ಮೊ. : 9481788495

ಶ್ರೀಮತಿ ಗಾಯತ್ರಿ ರಾವ್, ಮೊ>9980481245

# ಗದಗಿನಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ



ಗದಗ್ ಜಿಲ್ಲೆಯಲ್ಲಿ ದಿನಾಂಕ 16-6-24 ರವಿವಾರ 11:00 ಗಂಟೆಗೆ ಶ್ರೀ ವೀರನಾರಾಯಣ ಕಲ್ಯಾಣ ಮಂಟಪದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಸಮಾರಂಭ ಅದ್ದೂರಿಯಾಗಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಶ್ರೀ ಎ ಜಯಸಿಂಹ. ಜಿಲ್ಲಾಧ್ಯಕ್ಷರಾದ ಶ್ರೀ ವೆಂಕಟೇಶ ಕುಲಕರ್ಣಿ, ರಾಜ್ಯ ಸಂಘಟನಾ ಕಾರ್ಯದರ್ಶಿ ಮತ್ತು ಗದಗ ಜಿಲ್ಲಾ ಉಸ್ತುವಾರಿಯಾದ ವಿಜಯ್ ನಾಡ ಜೋಶಿ, ಶ್ರೀಯುತ ಅನಂತ ಕೊಪ್ಪರ್, ಶ್ರೀ ಶ್ರೀನಿವಾಸ್ ಹುಯಿಲ್ಗೋಳ, ಶ್ರೀಮತಿ ಕಲಾವತಿ ಅಲಗೂರ್. ಗದಗ್ ಜಿಲ್ಲಾ ವಿಪ್ರ ಮುಖಂಡರು ಹಾಗೂ ಹಾಸ್ಯ ದಿಗ್ಗಜ ಸಾಹಿತಿ ಶ್ರೀಯುತ ಪ್ರಾಣೇಶ್ ಗಂಗಾವತಿ ಇವರೆಲ್ಲರೂ ಉಪಸ್ಥಿತರಿದ್ದರು. ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು. ಕಾರ್ಯಕ್ರಮದಲ್ಲಿ ಯುವ ಮುಖಂಡರು, ಮಾತೆಯರು, ಮುದ್ದು ಮಕ್ಕಳು, ಪಂಡಿತರಾದಿಯಾಗಿ ಪಾಲ್ಗೊಂಡು ಶೋಭೆ ತಂದರು.

# ದಾವಣಗೆರೆ ಬ್ರಾಹ್ಮಣ ಸಮಾಜದಿಂದ ಪ್ರತಿಭಾ ಪುರಸ್ಕಾರ



ದಾವಣಗೆರೆ: ಬ್ರಾಹ್ಮಣ ಸಮಾಜದ ವತಿಯಿಂದ 2023-24ನೇ ಸಾಲಿಗೆ ಸಂಬಂಧಿಸಿದಂತೆ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಪದವಿ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ಸಾಧನೆ ಮಾಡಿರುವ ಬ್ರಾಹ್ಮಣ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಶ್ರೀ ಕೃಷ್ಣಪ್ರಸಾದ್ ಹಾಗೂ ನಿಲಯದ ವಿದ್ಯಾರ್ಥಿಗಳಿಂದ ವೇದಘೋಷದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಮುಖ್ಯ ಅತಿಥಿಗಳಾದ ಡಾ. ವೆಂಕಟಗಿರೀಶಾಚಾರ್ಯರವರು ಮಾತನಾಡುತ್ತಾ ಬ್ರಾಹ್ಮಣ ಸಮಾಜದ ವತಿಯಿಂದ ಸಮಾಜಮುಖಿ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ. ಜೀವನದಲ್ಲಿ ಪ್ರಾಮಾಣಿಕತೆ ತುಂಬಾ ಅವಶ್ಯಕವಾಗಿದ್ದು, ನಮ್ಮ ನಡೆ-ನುಡಿಯಲ್ಲಿ ಅಳವಡಿಸಿಕೊಂಡರೆ ಸಮಾಜದಲ್ಲಿ ಒಳ್ಳೆಯ ನಾಗರಿಕರಾಗಬಹುದು ಹಾಗೂ ಜೀವನವನ್ನು ತುಂಬಾ ಸೊಗಸಾಗಿ ರೂಪಿಸಿಕೊಳ್ಳಬಹುದು. ವಿದ್ಯಾರ್ಥಿಗಳು ಅವರ ಸೇವೆಯನ್ನು ನಮ್ಮ ದೇಶಕ್ಕೆ ಮುಡಿಪಾಗಿಡಬೇಕೆಂದು ತಿಳಿಸಿದರು.

ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಶಶಿಕಾಂತ್ ರವರು ವಿದ್ಯಾರ್ಥಿಗಳಿಗೆ ನಮ್ಮ ನಾಡು, ನುಡಿ, ಸಂಸ್ಕೃತಿಯ ಮಹತ್ವವನ್ನು ತಿಳಿಸಿ ಮುಂದೆ ಉತ್ತಮ ಸಾಧನೆಗೈದು ತಂದೆತಾಯಿಗಳಿಗೆ, ಗುರುಹಿರಿಯರಿಗೆ ಹಾಗೂ ಈ ದೇಶಕ್ಕೆ ಒಳ್ಳೆಯ ಹೆಸರು ತರುವಂತೆ ನಡೆದುಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ನಿಕಟಪೂರ್ವ ಅಧ್ಯಕ್ಷರಾದ ಎಸ್.ಪಿ. ಸತ್ಯನಾರಾಯಣರಾವ್, ಗೌರವ ಕಾರ್ಯದರ್ಶಿ ಎಸ್. ಗೋಪಾಲರಾವ್ ಉಪಸ್ಥಿತರಿದ್ದರು. ಪೋಷಕರ ಪರವಾಗಿ ಮಾಲತೇಶ್, ಪುನೀತಾ ಶ್ರೀಕಾಂತ್ ಮತ್ತು ವಿದ್ಯಾರ್ಥಿನಿಯಾದ ಕು॥ ಸಾನ್ವಿ ಕಶ್ಯಪ್ ಅನಿಸಿಕೆಗಳನ್ನು ಹಂಚಿಕೊಂಡರು. ಮುಖ್ಯ ಅತಿಥಿಗಳ ಪರಿಚಯವನ್ನು ರಾಮಚಂದ್ರರಾವ್ ಮಾಡಿದರು. ಭಾಸ್ಕರ್ ಭಟ್ ಸ್ವಾಗತಿಸಿದರು. ಬಾಲಕೃಷ್ಣ ವೈದ್ಯ ವಂದಿಸಿದರು. ಡಿ.ಶೇಷಾಚಲ, ವಕೀಲರಾದ ರಾಮದಾಸ್ ಅಡಿಗ, ಗೋಪಾಲಕೃಷ್ಣ, ಪೋಷಕರು ಮತ್ತು ಪುರಸ್ಕೃತ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಮೈಸೂರಿನಲ್ಲಿ ಪ್ರತಿಭಾ ಪುರಸ್ಕಾರ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗಸಂಸ್ಥೆಯಾದ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ವತಿಯಿಂದ ಮೈಸೂರಿನ ಶಾರದಾ ನಿಕೇತನ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ 2024 ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ.90 ಕ್ಕೂ ಹೆಚ್ಚು ಅಂಕಪಡೆದ 46 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ವಿಶ್ವನಾಥಯ್ಯ, ಉಪಾಧ್ಯಕ್ಷರಾದ ಶ್ರೀಧರಮೂರ್ತಿ, ನಂದಕುಮಾರ್, ಕಾರ್ಯದರ್ಶಿ ಕೆ.ಆರ್. ಮಂಜುನಾಥ್, ಜಂಟಿ ಕಾರ್ಯದರ್ಶಿ ರಾವ್ ಸೋಮಶೇಖರ್, ಖಜಾಂಚಿ ಶ್ರೀಕಂಠಶರ್ಮ ಹಾಗೂ ಎಲ್ಲಾ ನಿರ್ದೇಶಕರು, ಹೆಚ್ಚಿನ ಪೋಷಕರು ಭಾಗವಹಿಸಿದ್ದರು.



# "ಉತ್ತಮ ಕನ್ನಡ ಸಾಧಕಿ ಶಿಕ್ಷಕ ಪ್ರಶಸ್ತಿ"



ತುಮಕೂರು ನಗರದ ಶ್ರೀ ಸಪ್ತಗಿರಿ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಭಾಷಾ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀಮತಿ ಡಿ. ವಿ. ಪೂರ್ಣಿಮಾ ರವರು, ಕರ್ನಾಟಕ ಸಂಗೀತ ಕ್ಷೇತ್ರ, ಗಮಕ ಕ್ಷೇತ್ರ, ಕನ್ನಡ ಸಾಹಿತ್ಯ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮವಾದ ಕಾರ್ಯ ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಕರುನಾಡ ಕನ್ನಡ ಕಲಾ ಸಿರಿ ಬಳಗ (ರಿ.), ಬೆಂಗಳೂರು ಇವರು ಶ್ರೀಯುತರ ಸೇವೆಯನ್ನು ಪರಿಗಣಿಸಿ "ಉತ್ತಮ ಕನ್ನಡ ಸಾಧಕಿ ಶಿಕ್ಷಕ ಪ್ರಶಸ್ತಿ"ಯನ್ನು ನೀಡಿ ಗೌರವಿಸಿದ್ದಾರೆ. ಕಾಲೇಜಿನ ಪ್ರಧಾನ ವಿಶ್ವಸ್ಥ ಅಧಿಕಾರಿಗಳಾದ ಶ್ರೀಮತಿ ಅರ್ಚನಾ ಎಸ್. ಕುಮಾರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಯುತ ಮೃಣಾಲ್ ಮತ್ತು ಪ್ರಾಂಶುಪಾಲರಾದ ಡಾ. ಹೆಚ್. ಎಸ್. ನಿರಂಜನ ಆರಾಧ್ಯರವರುಗಳು ಶ್ರೀಮತಿಯವರಿಗೆ ಪ್ರಶಸ್ತಿ ಪತ್ರ ಮತ್ತು ಕಂಚಿನ ಪದಕವನ್ನು ನೀಡಿ ಗೌರವಿಸಿದರು.




# ಪ್ರಹ್ಲಾದ ಜೋಶಿ, ವಿಶ್ವೇಶ್ವರ ಹೆಗಡೆ ಕಾಗೇರಿ, ತೇಜಸ್ವಿ ಸೂರ್ಯ



2024ರ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ ಚುನಾಯಿತರಾದ ಬ್ರಾಹ್ಮಣ ಸಮಾಜದ ಶ್ರೀ ಪ್ರಹ್ಲಾದ ಜೋಶಿಯವರು 7.16,231 ಮತಗಳನ್ನು ಪಡೆದು ಹತ್ತಿರದ ಪ್ರತಿಸ್ಪರ್ಧಿಯವರಿಂದ 97,324 ಮತಗಳ ಅಂತರದಿಂದ ಜಯಶೀಲರಾಗಿರುತ್ತಾರೆ.



ಉತ್ತರ ಕರ್ನಾಟಕ ಕ್ಷೇತ್ರದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು, 7,82,495 ಮತಗಳನ್ನು ಪಡೆದು ಹತ್ತಿರದ ಪ್ರತಿಸ್ಪರ್ಧಿಯವರಿಂದ 3,37,428 ಮತಗಳ ಅಂತರದಿಂದ ಜಯಶೀಲರಾಗಿರುತ್ತಾರೆ.



ಶ್ರೀ ತೇಜಸ್ವಿ ಸೂರ್ಯ, ಬೆಂಗಳೂರು ದಕ್ಷಿಣ ಕ್ಷೇತ್ರ ಗಳಿಸಿರುವ ಒಟ್ಟು ಮತಗಳು 7,50,830. ಇವರು ಹತ್ತಿರದ ಪ್ರತಿಸ್ಪರ್ಧಿಯಿಂದ 2,77,783 ಮತಗಳ ಅಂತರದಿಂದ ಜಯಶೀಲರಾಗಿರುತ್ತಾರೆ.

**ಇವರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.**

## ರಾಣೀಬೆನ್ನೂರ್ ತಾಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಪುನರಾಯ್ಕೆ



ದತ್ತಾತ್ರೇಯ ನಾಡಿಗೇರ್ ಅವರು ರಾಣೀಬೆನ್ನೂರ್ ತಾಲೂಕ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಪುನರಾಯ್ಕೆಯಾಗಿರುತ್ತಾರೆ. ಶ್ರೀಯುತರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಪರವಾಗಿ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

## ರಾಷ್ಟ್ರೀಯ ಮಹಿಳಾ ಅಧ್ಯಕ್ಷೆಯಾಗಿ ಆಯ್ಕೆ



ಆಲ್ ಇಂಡಿಯಾ ಬ್ರಾಹ್ಮೀನ್ ಫೆಡರೇಷನ್‌ನ ಕಾರ್ಯಕಾರಿಣಿ ಸಭೆಯು ರಾಜಸ್ಥಾನದ ಪುಷ್ಕರದ ದಧೀಚಿ ಭವನದಲ್ಲಿ ನಡೆಯಿತು, ಈ ಸಭೆಯಲ್ಲಿ ದೇಶದ ಎಲ್ಲಾ ರಾಜ್ಯಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದು ಸನಾತನ ಧರ್ಮದ ಸಂರಕ್ಷಣೆ ಹಾಗು ಸಂಸ್ಕೃತಿಯನ್ನು ಉಳಿಸಿ ಬೆಳಸಲು ಎಲ್ಲರು ಕಾರ್ಯತತ್ಪರವಾಗಬೇಕು ಎಂದು ರಾಷ್ಟ್ರೀಯ ಅಧ್ಯಕ್ಷ ಡಾ, ಪ್ರದೀಪ್ ಜ್ಯೋತಿ ಅವರು ಕರೆ ನೀಡಿದರು. ಇದೇ ಸಂದರ್ಭದಲ್ಲಿ ನಮ್ಮ ಕರ್ನಾಟಕದವರೇ ಆದ ಶ್ರೀಮತಿ ಮಾಲಿನಿ. ಎನ್, ಅವರನ್ನು ರಾಷ್ಟ್ರೀಯ ಮಹಿಳಾ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದಾಗಿ ಅವರು ಘೋಷಿಸಿದರು.

## ಪದಾಧಿಕಾರಿಗಳಾಗಿ ಆಯ್ಕೆ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಂಗಸಂಸ್ಥೆ ಬೆಂಗಳೂರಿನ ಜೆ.ಪಿ.ನಗರ ಬ್ರಾಹ್ಮಣ ಸಭಾ (ರಿ.)ಯು ಇತ್ತೀಚೆಗೆ ಸಭೆ ಸೇರಿ ಅಧ್ಯಕ್ಷರು : ಹಿರಿಯಣ್ಣಯ್ಯ, ಕಾರ್ಯದರ್ಶಿ : ಕೆ. ರಾಮಪ್ರಸಾದ್ ಮತ್ತು ಖಜಾಂಚಿ : ದತ್ತಶಂಕರ್ ರವರನ್ನು ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಿರುತ್ತಾರೆ. ನೂತನ ಪದಾಧಿಕಾರಿಗಳಿಗೆ ಮಹಾಸಭೆಯ ಅಭಿನಂದನೆಗಳು.


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

## ಶ್ರೀ ಕೊಪ್ಪ ಮಹಾಬಲರಾವ್ ರವರ ಷಷ್ಟಬ್ಧಿ ಸಮಾರಂಭ




ಇತ್ತೀಚೆಗೆ ಕೊಪ್ಪ ಗಾಯತ್ರೀ ಮಂದಿರದಲ್ಲಿ ನಡೆದ ಮಹಾಸಭಾ ಉಪಾಧ್ಯಕ್ಷರು ಹಾಗೂ ಕೇಂದ್ರ ಕಾಫೀ ಮಂಡಳಿ ಉಪಾಧ್ಯಕ್ಷರೂ ಆದ ಶ್ರೀ ಕೊಪ್ಪ ಮಹಾಬಲರಾವ್ ರವರ ಷಷ್ಟಬ್ದಿ ಸಮಾರಂಭದಲ್ಲಿ ಮಹಾಸಭಾ ವತಿಯಿಂದ ಉಪಾಧ್ಯಕ್ಷ ಶ್ರೀ ರಾಘವೇಂದ್ರ ಭಟ್‌ರಿಂದ ಸನ್ಮಾನ ನಡೆಯಿತು. ಕೊಪ್ಪ ತಾಲ್ಲೂಕಿನ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಎ. ರಾಮಕೃಷ್ಣ, ಪದಾಧಿಕಾರಿಗಳಾದ ಉಮೇಶ್ ಹಾಗೂ ಕುಮಾರಸ್ವಾಮಿಯವರು ಉಪಸ್ಥಿತರಿದ್ದರು.

## ಬೆಂಗಳೂರಿನಲ್ಲಿ ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ಶ್ರೀಗಳ ಚಾತುರ್ಮಾಸ್ಯ

॥ ಶ್ರೀಗುರುಭ್ಯೋ ನಮಃ ॥

**ಶ್ರೀ ವ್ಯಾಸಪೂಜಾ ಮತ್ತು ಚಾತುರ್ಮಾಸ್ಯ ವ್ರತಾನುಷ್ಠಾನ**

ಆಸ್ತಿಕ ಬಂಧುಗಳೇ,

ಸ್ವಸ್ತಿ ಶ್ರೀ ಕ್ರೋಧಿ ಸಂವತ್ಸರದ ಆಷಾಢ ಪೂರ್ಣಿಮೆ ದಿನಾಂಕ 21–7–2024ನೇ ಭಾನುವಾರದಂದು ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧಿಪತಿಗಳಾದ **ಪರಮಪೂಜ್ಯ ಶ್ರೀಶ್ರೀ ಶಂಕರಭಾರತೀ ಮಹಾಸ್ವಾಮಿಗಳವರು** ಮತ್ತು ತತ್ಕರಕಮಲಸಂಜಾತರಾದ **ಪರಮಪೂಜ್ಯ ಶ್ರೀಶ್ರೀ ಬ್ರಹ್ಮಾನಂದ ಭಾರತೀಸ್ವಾಮಿಗಳವರು** ಬೆಂಗಳೂರಿನ ಶ್ರೀ ಜಯರಾಮಸೇವಾ ಮಂಡಳಿಯಲ್ಲಿ ವ್ಯಾಸಪೂಜೆಯೊಂದಿಗೆ ಚಾತುರ್ಮಾಸ್ಯ ವ್ರತಾನುಷ್ಠಾನದ ಸಂಕಲ್ಪವನ್ನು ಕೈಗೊಳ್ಳಲಿದ್ದಾರೆ.

ಭಾದ್ರಪದ ಪೂರ್ಣಿಮೆ ದಿನಾಂಕ 18–9–2024ನೇ ಬುಧವಾರದಂದು ಸೀಮೋಲ್ಲಂಘನದೊಂದಿಗೆ ಚಾತುರ್ಮಾಸ್ಯ ವ್ರತಾನುಷ್ಠಾನವು ಪೂರ್ಣಗೊಳ್ಳಲಿದೆ. ಈ ಪವಿತ್ರ ಸಂದರ್ಭದಲ್ಲಿ ತಾವೆಲ್ಲರೂ ಭಾಗವಹಿಸಿ ಪರಮಪೂಜ್ಯ ಉಭಯ ಶ್ರೀ ಶ್ರೀಗಳವರ ದರ್ಶನ ಆಶೀರ್ವಾದಗಳನ್ನು ಪಡೆದು ಪುಣ್ಯಭಾಜನರಾಗಬೇಕಾಗಿ ಅಪೇಕ್ಷಿಸುತ್ತೇವೆ.

ಹೆಚ್. ಎಸ್. ನಾಗೇಶ
ಆಡಳಿತಾಧಿಕಾರಿ

**ಚಾತುರ್ಮಾಸ್ಯವ್ರತ ಸಂಚಾಲನಸಮಿತಿ**
ಅಧ್ಯಕ್ಷರು:
**ಶ್ರೀಯುತ ಬಿ.ಸಿ ಪ್ರಭಾಕರ್**, ಹಿರಿಯ ನ್ಯಾಯವಾದಿಗಳು, ಬೆಂಗಳೂರು
ಕಾರ್ಯದರ್ಶಿಗಳು:
**ಶ್ರೀ ಅಭಿನವ ರಮಾನಂದ**, ಉಚ್ಚನ್ಯಾಯಾಲಯದ ನ್ಯಾಯವಾದಿಗಳು, ಬೆಂಗಳೂರು
**ಶ್ರೀ ಬಿ.ಆರ್. ಶ್ರೀವತ್ಸ**, ನ್ಯಾಯವಾದಿಗಳು, ಬೆಂಗಳೂರು
ಸಂಚಾಲಕರು:
**ಶ್ರೀ ಸಿ.ಕೆ. ಮಂಜುನಾಥ**, ಉದ್ಯಮಿಗಳು, ಬೆಂಗಳೂರು
**ಶ್ರೀ ಆರ್.ಎನ್. ರವಿಕುಮಾರ್**, ಉದ್ಯಮಿಗಳು, ಬೆಂಗಳೂರು
ಸಮಿತಿಯ ಉಪಾಧ್ಯಕ್ಷರು ಹಾಗೂ ಸದಸ್ಯರು.


ಜಾಹಿರಾತು

ELEGANT TOURS

# ELEGANT TOURS

## ಕಾಶಿ – ಅಯೋಧ್ಯಾ ಟೂರ್ ಪ್ಯಾಕೇಜ್

5 ರಾತ್ರಿ 6 ಹಗಲು

ಪಿತೃ ಪಕ್ಷ ಸ್ಪೆಷಲ್ ಕಾಶಿ ಯಾತ್ರೆ ಸೆಪ್ಟೆಂಬರ್ ತಿಂಗಳಿಂದ ಪ್ರಾರಂಭ!

**ನಮ್ಮ ವಿಶೇಷತೆಗಳು :**

- AC ಬಸ್
- AC ರೂಮ್
- ಶುದ್ಧ ಸಸ್ಯಾಹಾರಿ ಉತ್ತಮ ಊಟದ ವ್ಯವಸ್ಥೆ
- ಹಿರಿಯ ನಾಗರಿಕರಿಗೆ ವಿಶೇಷ ಸೌಲಭ್ಯ





**ನಮ್ಮ ಇತರೆ ಯಾತ್ರಾ ಸ್ಥಳಗಳು:-**

- 5 ದಿನಗಳ ವಿಶೇಷ ಭುವನೇಶ್ವರ ಮತ್ತು ಒರಿಸ್ಸಾ ಯಾತ್ರೆ
- 8 ದಿನಗಳ ನೇಪಾಳ ಮುಕ್ತಿನಾಥ ಟೂರ್
- 6 ದಿನಗಳ ರಾಮೇಶ್ವರಂ - ಕನ್ಯಾಕುಮಾರಿ ಯಾತ್ರಾ

Address : No 44, South End Road, Above Axis Bank, Opposite To Bharathi Nursing Home, Bangalore-560004

ಹೆಚ್ಚಿನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿರಿ : **Manoj : 90358 05575**

## ಅಮೆರಿಕಾದಲ್ಲಿ ಸಾಧನೆಗೈದ ಶಿರಸಿಯ ಮಧುರಾ ಭಟ್



ತನ್ನ ಮೊದಲ ಪ್ರಯತ್ನದಲ್ಲಿಯೇ ನ್ಯೂಯಾರ್ಕ್ ಸ್ಟೇಟ್‌ನ ಉಚ್ಚನ್ಯಾಯಾಲಯದಲ್ಲಿ ಕಾನೂನು ಸಲಹೆಗಾರಳಾಗಿ ಪ್ರಾಕ್ಟಿಸ್ ಮಾಡಲು ಪರವಾನಗಿ ಪಡೆಯಲು ಯಶಸ್ವಿಯಾಗಿದ್ದಾಳೆ. ಅಮೆರಿಕಾದ ನ್ಯೂಯಾರ್ಕ್ ಸ್ಟೇಟ್‌ನ ಉಚ್ಚ ನ್ಯಾಯಾಲಯವು ಮಧುರಾಳಿಗೆ ಲೈಸೆನ್ಸ್ ನೀಡಿ ಗೌರವಿಸಿದೆ.

ಶಿರಸಿ ತಾಲೂಕಿನ ಸಾಲ್ಕಣಿ ಗ್ರಾಮದ ಮುದ್ದಿನಪಾಲಿನ ಮಧುರಾ ಭಟ್ ತನ್ನ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ತುಮಕೂರಿನಲ್ಲಿ ಮುಗಿಸಿ ಬೆಂಗಳೂರಿನ ಕ್ರೈಸ್ಟ್ ಯೂನಿವರ್ಸಿಟಿಯಲ್ಲಿ ಬಿ.ಬಿ.ಎ, ಎಲ್.ಎಲ್.ಬಿ., ಪದವಿ ಪಡೆದು ದೆಹಲಿಯಲ್ಲಿ ತೆರಿಗೆ ಕಾನೂನಿನ ಕುರಿತು ಹೆಚ್ಚಿನ ಅಧ್ಯಯನ ನಡೆಸಿ ಅಮೇರಿಕಾದ ನ್ಯೂಯಾರ್ಕ್ ಯೂನಿವರ್ಸಿಟಿಯಲ್ಲಿ ಅಂತಾರಾಷ್ಟ್ರೀಯ ತೆರಿಗೆ ಕಾನೂನು ಕುರಿತು ಐಐಒ ಪದವಿ ಪಡೆದಿದ್ದಾಳೆ. ಅಂತಾರಾಷ್ಟ್ರೀಯ ಮನ್ನಣೆಯಲ್ಲಿ 2 ತಿಂಗಳ ಇಂಟರ್ನ್‌ಶಿಪ್ ಮುಗಿಸಿ ಪ್ರಸ್ತುತ ಪ್ರತಿಷ್ಠಿತ ಮೇ.ಪೌಲ್ ವೇಸ್ಸಿಸ್ ಕಾನೂನು ಸಂಸ್ಥೆಯಲ್ಲಿ ಅಸೋಸಿಯೇಟ್ ಆಗಿ ಕೆಲಸ ನಿರ್ವಹಿಸಿದ್ದು ಇವರ ಸಾಧನೆಗೆ ದೆಹಲಿಯ ಹಾಗೂ ಬೆಂಗಳೂರಿನ ಹಿರಿಯ ವಕೀಲರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈಕೆಯ ತಂದೆ ತುಮಕೂರು ಹಾಲು ಒಕ್ಕೂಟ (ಕೆ.ಎಂ.ಎಫ್) ದ ವ್ಯವಸ್ಥಾಪಕ ನಿರ್ದೇಶಕರಾಗಿ ನಿವೃತ್ತರಾಗಿರುವ ಡಾ.ಸುಬ್ರಾಯ ಭಟ್ ಮುದ್ದಿನಪಾಲು ಹಾಗೂ ತಾಯಿ ಹೋಮಿಯೋಪಥಿಕ್ ವೈದ್ಯೆ ಡಾ.ಜಯಲಕ್ಷ್ಮೀ ಶಿರಸಿಯವರು ಎನ್ನುವುದು ಗಮನಾರ್ಹ.

## ಶ್ರೀ ಮೋಹಿತ್ ವಿ. ಕಶ್ಯಪ್




ಬೆಂಗಳೂರಿನ ಶ್ರೀ ಕೆ.ಎಸ್. ವೆಂಕಟರಾಮನ್ ಮತ್ತು ಶ್ರೀಮತಿ ಅರ್ಚನಾ ಶಂಕರ್‌ರವರ ಪುತ್ರ ಶ್ರೀ ಮೋಹಿತ್ ವಿ. ಕಶ್ಯಪ್‌ರವರು 2024ರಲ್ಲಿ ನಡೆದ ದ್ವಿತೀಯ ಪಿ.ಯು.ಸಿ. (ವಿಜ್ಞಾನ ವಿಭಾಗ) ಯಲ್ಲಿ 588/600 ಅಂಕ 98% ಪಡೆದು ರಾಜ್ಯಕ್ಕೆ 9ನೇ ರ್‍ಯಾಂಕ್ ಪಡೆದು ಉತ್ತೀರ್ಣರಾಗಿದ್ದಾ ಇವರು ಕನಕಪುರ ರಸ್ತೆಯ ಅರಿಹಂತ್ ಪಿ.ಯು. ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದರು.

## ಕು|| ಕಾತ್ಯಾಯಿನಿ



ವಿದ್ಯಾವಾಸಿನಿ ವಿಪ್ರ ಮಹಿಳಾ ವಸತಿ ನಿಲಯದಲ್ಲಿ ವಾಸ್ತವ್ಯ ಮಾಡುತ್ತಿರುವ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆಯ ಶ್ರೀ ಮಂಜುನಾಥ್ ಎಸ್. ಮತ್ತು ರಮಾ ದಂಪತಿಗಳ ಪುತ್ರಿ ಕು|| ಕಾತ್ಯಾಯಿನಿ ಎಂಬ ವಿದ್ಯಾರ್ಥಿನಿಯು ನಾಲ್ಕನೇ ವರ್ಷದ ಬಿ.ಎಸ್‌ಸಿ ಬಿ.ಎಡ್ (ಸಿಬಿ2) ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಿರುತ್ತಾರೆ. ಇವರು ಎನ್.ಎಂ.ಕೆ.ಆರ್.ವಿ. ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದರು. ಕು|| ಕಾತ್ಯಾಯಿನಿಯವರಿಗೆ ಮಹಾಸಭೆಯ ಹಾಗೂ ವಸತಿ ನಿಲಯದವರಿಂದ ಅಭಿನಂದನೆಗಳು.

## ಚಿ. ಮಿಹೀರ ಮಹೇಶ ದೇಶಪಾಂಡೆ



ಶ್ರೀ ಶೃಂಗೇರಿ ಶಂಕರ ಮಠದ ಅಧ್ಯಕ್ಷರು ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಕಾರ್ಯಕಾರಣಿಯ ಸದಸ್ಯರಾದ ಶ್ರೀ ಮಹೇಶ ಗಂಗಾಧರರಾವ ದೇಶಪಾಂಡೆಯವರ ಪುತ್ರ ಚಿ. ಮಿಹೀರ ಮಹೇಶ ದೇಶಪಾಂಡೆ 98% ಪ್ರತಿಶತ ಅಂಕಗಳೊಂದಿಗೆ ವಿಜಯಪುರ ಹಾಗೂ ಬಾಗಲಕೋಟೆ ಅವಳಿ ಜಿಲ್ಲೆಗಳಿಗೆ ದ್ವಿತೀಯಸ್ಥಾನ ಪಡೆದಿದ್ದಕ್ಕೆ ಮಾಜಿ ನಗರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ಶ್ರೀ ಶ್ರೀಹರಿ ಅರವಿಂದರಾವ ಗೊಳಸಂಗಿಯವರು ಅಭಿನಂದಿಸಿ ಮುಂದಿನ ಭವಿಷ್ಯವೂ ಉಜ್ವಲವಾಗಲಿ ಎಂದು ಹಾರೈಸಿದ್ದಾರೆ.

ಜಾಹಿರಾತು

# ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

**# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,**
**ಬ್ಯಾಂಕ್ ಕಾಲೋನಿ, ಬೆಂಗಳೂರು–560 050.**

## ಸ್ಥಳದ ಬಾಡಿಗೆ ಇರುವುದಿಲ್ಲ

**ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,**
**ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,**
**ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು**
**ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.**
**ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.**

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080–26793054 ಮೊಬೈಲ್ 8277433666**

ಜಾಹಿರಾತು

ಸಂಧ್ಯಾ ಸುರಕ್ಷ ಟ್ರಸ್ಟ್,
ಜಿಲ್ಲಾ ಬ್ರಾಹ್ಮಣ ಮಹಾಸಭಾ (ರಿ).,

# ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧಾ ಕೇಂದ್ರ

ದೇವಯ್ಯನಹುಂಡಿ ಮುಖ್ಯರಸ್ತೆ, ಶ್ರೀರಾಂಪುರ, 2ನೇ ಹಂತ, ಮೈಸೂರು – 570 023

## ಹೊಸ ಆವಿಷ್ಕಾರದೊಂದಿಗೆ ನಿಮ್ಮ ಅನುಕೂಲಕ್ಕಾಗಿ

ತ್ರಿಮತಸ್ಥ ಬ್ರಾಹ್ಮಣ ಬಂಧುಗಳು, ಪೂರ್ವಿಕರ ಎಲ್ಲಾ ಶ್ರಾದ್ಧ ಕರ್ಮಾಧಿಗಳನ್ನು (ವೈದಿಕ) ಅಪರ, ಪೂರ್ವ, ಅಂತ್ಯೇಷ್ಠಿ ಕರ್ಮಾದಿಗಳನ್ನು ನುರಿತ ಆಯಾ ಪಂಗಡದ ಪುರೋಹಿತರಿಂದ, ಆಯಾ ಪಂಗಡದ ಅಡುಗೆಯೊಂದಿಗೆ ನುರಿತ ಅಡಿಗೆಯವರಿಂದ ನಡೆಸಲಾಗುವುದು ಹಾಗೂ ಬೆಳಗ್ಗೆ ಪ್ರಾತಃಕಾಲ 6.00 ರಿಂದ 6.30 ವೇದ ಪಠಣ, 6.30 ರಿಂದ 7.00 ವರೆಗೆ ಭಗವದ್ಗೀತಾ ಪಾರಾಯಣ, ಸಾಯಂಕಾಲ, ಸಂಧ್ಯಾವಂದನೆ, ಕಲಿಕೆ, ಪಾರಾಯಣ, ದೇವಿ ಶಾಕಂಭರಿಗೆ ಮಹಾಮಂಗಳಾರತಿ ಮತ್ತು ಸುಸಜಿತವಾದ 100 ಆಸನಗಳ ಹಾಲಿನಲ್ಲಿ ಹುಟ್ಟು ಹಬ್ಬ ಆಚರಣೆ, ಸೀಮಂತ, ನಾಮಕರಣ ಇತ್ಯಾದಿ ಸಣ್ಣ ಕಾರ್ಯಕ್ರಮಗಳಿಗೆ ಕೊಠಡಿ ಸಹಿತ ಎಲ್ಲಾ (ಊಟ, ತಿಂಡಿ ಇತರೆ) ವ್ಯವಸ್ಥೆಯೊಂದಿಗೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ವ್ಯವಸ್ಥೆ ಮಾಡಿಕೊಡಲಾಗುವುದು.

ನಿಮ್ಮ

**ಡಾ. ಬಿ.ಆರ್. ನಟರಾಜ್ ಜೋಯಿಸ್**
ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧಾ ಕೇಂದ್ರ

**ವಿ.ಸೂ. ಅಚ್ಚುಕಟ್ಟಾದ ಬ್ರಾಹ್ಮಣ ಅಡಿಗೆಯವರಿಂದ ಕ್ಯಾಟರಿಂಗ್ ವ್ಯವಸ್ಥೆಯಿದೆ.**
**(ಯಾವುದೇ ತರವಾದ ಬಾಡಿಗೆ ಇರುವುದಿಲ್ಲ)**
**ಸಂಪರ್ಕಿಸ ಬೇಕಾದ ದೂರವಾಣಿ ಸಂಖ್ಯೆ : 8088799540 / 8861998817**



## ದಿ|| ಬಿ.ವಿ. ಭಾನುಪ್ರಕಾಶ್ ನಿಧನ

ಕರ್ನಾಟಕ ವಿಧಾನ ಪರಿಷತ್ ಮಾಜಿ ಸದಸ್ಯರು, ಶಿವಮೊಗ್ಗ ಬ್ರಾಹ್ಮಣ ಸಮುದಾಯದ ಹಿರಿಯ ನಾಯಕರು, ಸಂಘ ಪರಿವಾರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಬಿ.ವಿ. ಭಾನುಪ್ರಕಾಶ್ ಅವರು ನಿಧನರಾಗಿದ್ದಾರೆ, ಈ ಸಂಧರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ಮಹಾಸಭಾದ ಸಮಸ್ತ ಪದಾಧಿಕಾರಿಗಳು ಮೃತರ ಆತ್ಮಕ್ಕೆ ಸದ್ಗತಿ ದೊರೆಯಲಿ ಎಂದು ಪ್ರಾರ್ಥಿಸುತ್ತಾ, ತೀವ್ರ ಸಂತಾಪವನ್ನು ವ್ಯಕ್ತಪಡಿಸಿರುತ್ತಾರೆ. ಅವರ ಇಡೀ ಜೀವನ ಸಮಾಜ ಸೇವೆಗೆ ಸಮರ್ಪಣೆ. ಅವರ ಕುಟುಂಬ ಮತ್ತು ಆಪ್ತ ವರ್ಗಕ್ಕೆ ದುಃಖ ಭರಿಸುವ ಶಕ್ತಿ ಭಗವಂತ ನೀಡಲಿ ಎಂದು ಆಶಿಸುತ್ತಾರೆ.

## ದಿ|| ವೆಂಕಟಗಿರಿ ರಾವ್

ರಾಜ್ಯ ಅರಣ್ಯ ಇಲಾಖೆಯ ಅಧಿಕೃತ ಪರಿಸರ ಸಲಹೆಗಾರರಾಗಿದ್ದ ಬಿ. ವೆಂಕಟಗಿರಿ ರಾವ್ (81) ನಿಧನರಾಗಿದ್ದಾರೆ. ತಮ್ಮ ಮನೆಯಂಗಳದಲ್ಲೇ ವೈಜ್ಞಾನಿಕವಾಗಿ ನಕ್ಷತ್ರ ವನ, ನವಗ್ರಹ ವನ ನಿರ್ಮಿಸಿದ್ದರಲ್ಲದೆ, ನೂರಾರು ಜಾತಿಯ ಅಮೂಲ್ಯ ಗಿಡಮೂಲಿಕೆ, ಫಲ-ಪುಷ್ಪ ಗಿಡಗಳನ್ನು ಬೆಳೆಸಿದ್ದರು. ಸಾರ್ವಜನಿಕರಲ್ಲಿ ಪರಿಸರ ಸಂರಕ್ಷಣೆ, ಅದರ ಮಹತ್ವಗಳ ಬಗ್ಗೆ ಅರಿವು ಮೂಡಿಸುವ ಕಾಯಕದಲ್ಲಿ ನಿರತರಾಗಿದ್ದರು. ಇವರ ಪರಿಸರ ಪ್ರೇಮವನ್ನು ಮೆಚ್ಚಿ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು.



ಜಾಹಿರಾತು

**ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ**

**Sri Srinivasa Nilaya Dharmika Sabha Mandira**

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

**ಸ್ಥಳದ ಬಾಡಿಗೆ ಇರುವುದಿಲ್ಲ.**

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು
ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ
ದೂರವಾಣಿ : 2672 2267, 98866 55755

# ಭಾನುಪ್ರಕಾಶ್ ಅಗಲಿಕೆ – ವಿಪ್ರಸಮಾಜಕ್ಕಾದ ನಷ್ಟ



ವಿಧಾನಪರಿಷತ್ತಿನ ಮಾಜಿ ಸದಸ್ಯ, ವಿಪ್ರ ಸಮುದಾಯದ ಮುಖಂಡ, ಸರ್ವಜನಪ್ರಿಯ, ಅಜಾತಶತ್ರು, ಮತ್ತೂರು ಭಾನುಪ್ರಕಾಶ (69) ಅವರು ದಿನಾಂಕ 17–06–2024, ಸೋಮವಾರ ಬಹು ಅನಿರೀಕ್ಷಿತವಾಗಿ ನಮ್ಮನ್ನು ಅಗಲಿದ್ದಾರೆ. ಅವರ ಅಗಲಿಕೆ ನಮ್ಮ ರಾಜ್ಯಕ್ಕೆ, ಭಾರತೀಯ ಜನತಾ ಪಕ್ಷಕ್ಕೆ, ವಿಶೇಷವಾಗಿ ವಿಪ್ರ ಸಮುದಾಯಕ್ಕೆ ಬಹುದೊಡ್ಡ ನಷ್ಟ.

1955ರ ನವೆಂಬರ್ 15ರಂದು ಸಂಸ್ಕೃತಗ್ರಾಮ ಮತ್ತೂರಿನಲ್ಲಿ ಶ್ರೀ ಭಾಸ್ಕರ ಅವಧಾನೀ ಮತ್ತು ಶ್ರೀಮತಿ ಪ್ರಸನ್ನಲಕ್ಷ್ಮೀ ಅವರ ಹಿರಿಯಪುತ್ರರಾಗಿ ಜನಿಸಿದ್ದ ಭಾನುಪ್ರಕಾಶ್ ಶಿವಮೊಗ್ಗದ ಕಾಲೇಜಿನಿಂದ ಬಿ.ಕಾಂ. ಪದವಿ ಪಡೆದಿದ್ದರು. ಬಾಲ್ಯದಿಂದಲೂ ಆರ್.ಎಸ್.ಎಸ್. ಒಡನಾಟದಲ್ಲಿ ಬೆಳೆದ ಇವರು ಜನಸಂಘದ ಕಾಲದಿಂದಲೂ ಸಾಮಾಜಿಕಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದರು. 1969ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರಾಗಿ ಸೇರ್ಪಡೆಗೊಂಡ ಇವರು 1975ರ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಸೆರೆವಾಸ ಅನುಭವಿಸಿದ್ದರು. 1977ರಿಂದ 1983ರ ವರೆಗೆ 6 ವರ್ಷಗಳ ಕಾಲ ಆರ್.ಎಸ್.ಎಸ್.ನ ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಿದ್ದ ಇವರು 1983ರಲ್ಲಿ ರಾಜ್ಯ ಕಿಸಾನ್ ಸಂಘದ ಪ್ರಧಾನಕಾರ್ಯದರ್ಶಿಯಾಗಿ ನೇಮಕಗೊಂಡರು. 1987ರ ವರೆಗೆ ಈ ಜವಾಬ್ದಾರಿಯನ್ನು ಹೊತ್ತಿದ್ದ ಭಾನುಪ್ರಕಾಶ್ 1987ರಲ್ಲಿ ಭಾರತೀಯ ಜನತಾಪಕ್ಷದ ಸಕ್ರಿಯ ಸದಸ್ಯರಾದರು. 1987ರಿಂದ 1993ರ ವರೆಗೆ ಬಿ.ಜೆ.ಪಿ.ಯ ಶಿವಮೊಗ್ಗ ಜಿಲ್ಲಾ ಪ್ರಧಾನಕಾರ್ಯದರ್ಶಿಯಾಗಿ, 1994 ರಿಂದ 2000ದವರೆಗೆ ಬಿ.ಜೆ.ಪಿ. ಶಿವಮೊಗ್ಗ ಜಿಲ್ಲಾ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ ಭಾನುಪ್ರಕಾಶ್ 2000–2005ರ ಅವಧಿಯಲ್ಲಿ ಶಿವಮೊಗ್ಗ ಜಿಲ್ಲಾಪಂಚಾಯಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದರು.

2003ರಲ್ಲಿ ಶಿವಮೊಗ್ಗ ಲೋಕಸಭಾ ಚುನಾವಣೆಗೆ ಬಿ.ಜೆ.ಪಿ. ಅಭ್ಯರ್ಥಿಯಾಗಿ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಶ್ರೀ ಎಸ್. ಬಂಗಾರಪ್ಪ ಅವರ ವಿರುದ್ಧ ಸ್ಪರ್ಧಿಸಿದ ಹಿರಿಮೆ ಕೂಡ ಇವರದ್ದಾಗಿದೆ. 2003 ರಿಂದ 2006ರವರೆಗೆ ಬಿ.ಜೆ.ಪಿ.ಯ ಶಿವಮೊಗ್ಗ ಜಿಲ್ಲಾಧ್ಯಕ್ಷರಾಗಿ ಮರು ಆಯ್ಕೆಗೊಂಡ ಭಾನುಪ್ರಕಾಶ್ 2007–2010ರ ಅವಧಿಯಲ್ಲಿ ಬಿ.ಜೆ.ಪಿ. ರಾಜ್ಯ ಕಾರ್ಯದರ್ಶಿಯಾಗಿ ಹಾಗೂ ನಂತರ ರಾಜ್ಯ ಬಿ.ಜೆ.ಪಿ. ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಒಂದು ಅವಧಿಗೆ ವಿಧಾನಪರಿಷತ್ತಿನ ಸದಸ್ಯರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಇವರು ಆನಂತರದಲ್ಲಿ ಬಿ.ಜೆ.ಪಿ.ಯ ವಿವಿಧ ಪ್ರಕೋಷ್ಠಗಳ ರಾಜ್ಯ ಸಂಯೋಜಕರಾಗಿದ್ದರು. ಪ್ರಸ್ತುತ ಭಾರತೀಯ ಜನತಾ ಪಕ್ಷದ ಮಲೆನಾಡು ಕ್ಲಸ್ಟರ್ ವಿಭಾಗದ ಪ್ರಭಾರಿಯಾಗಿ ಭಾನುಪ್ರಕಾಶ್ ಕಾರ್ಯನಿರ್ವಹಿಸುತ್ತಿದ್ದರು. ಅಧಿಕಾರ ರಾಜಕಾರಣಕ್ಕಿಂತ ಹೆಚ್ಚಾಗಿ ಸಂಘಟನಾ ರಾಜಕಾರಣದಲ್ಲೇ ಹೆಚ್ಚು ವರ್ಷಗಳ ಕಾಲ ಭಾನುಪ್ರಕಾಶ್ ಸೇವೆ ಸಲ್ಲಿಸಿದ್ದರು. ಭಾರತೀಯ ಜನತಾಪಕ್ಷದ ಸಂಘಟನೆಯ ವಿವಿಧ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಪಕ್ಷವನ್ನು ಬೆಳೆಸಿದ ಭಾನುಪ್ರಕಾಶ್ ಇಂದಿನ ಅನೇಕ ಯುವ ನಾಯಕರ ಮಾರ್ಗದರ್ಶಿಗಳಾಗಿದ್ದರು. ನಾಲ್ಕು ದಶಕಗಳ ತಮ್ಮ ರಾಜಕೀಯ ಜೀವನದಲ್ಲಿ ಯಾವ ಕಪ್ಪುಚುಕ್ಕೆಗಳೂ ಇಲ್ಲದಂತೆ ಕಾರ್ಯ ನಿರ್ವಹಿಸಿದ್ದು ಒಂದು ಹೆಗ್ಗಳಿಕೆಯೇ ಸರಿ. ಸದಾ ಶ್ವೇತವಸ್ತ್ರಧಾರಿಗಳಾಗಿರುತ್ತಿದ್ದ ಭಾನುಪ್ರಕಾಶ್ ಅಷ್ಟೇ ಶುದ್ಧ ಚಾರಿತ್ರ್ಯ ಹೊಂದಿದ್ದರು. ಅಧಿಕಾರಕ್ಕಾಗಿ ಎಂದೂ ಆಸೆಪಡದ ಅವರು ತಮ್ಮ ರಾಜಕೀಯ ಜೀವನದುದ್ದಕ್ಕೂ ತತ್ವ ಮತ್ತು ಪಕ್ಷಕ್ಕೆ ನಿಷ್ಠರಾಗಿದ್ದರು. ಪ್ರಖರ ವಾಗ್ಮಿಗಳಾಗಿದ್ದ ಅವರು ಎಲ್ಲ ಸಭೆ–ಸಮಾರಂಭಗಳಲ್ಲಿ ಆಕರ್ಷಣೆಯ ಕೇಂದ್ರವಾಗಿರುತ್ತಿದ್ದರು. ವಿಪ್ರ ಸಮುದಾಯ ಮತ್ತು ಸಂಘಟನೆಯ ಬಗೆಗೆ ಅವರಲ್ಲಿ ವಿಶೇಷವಾದ ಒಲವಿತ್ತು. ತಾವು ಶಾಸಕರಾಗಿದ್ದ ಅವಧಿಯಲ್ಲಿ ಅನೇಕ ವಿಪ್ರಸಂಘಟನೆಗಳಿಗೆ ಹಾಗೂ ಅಗ್ರಹಾರಗಳಿಗೆ ಶಾಸಕರ ನಿಧಿಯಿಂದ ಅನುದಾನ ನೀಡಿ, ಜನೋಪಯೋಗಿ ಕೆಲಸಗಳಿಗೆ ಸಹಕಾರಿಯಾಗಿದ್ದರು. ಆರ್.ಎಸ್.ಎಸ್.ನ ನಿಷ್ಠಾವಂತ ಸ್ವಯಂಸೇವಕರಾಗಿದ್ದ ಅವರು ಬಲಿಷ್ಠ ಹಿಂದೂರಾಷ್ಟ್ರದ ಕನಸನ್ನು ಹೊತ್ತಿದ್ದರು. ಹಾಗೆಂದು ವಿಪ್ರಸಂಘಟನೆಯಲ್ಲಿ ತೊಡಗಿಕೊಳ್ಳುವುದು ತಮ್ಮ ಹಿಂದೂ ರಾಷ್ಟ್ರದ ಕಲ್ಪನೆಗೆ ವಿರೋಧಾಭಾಸ ಎಂದು ಭಾವಿಸಿರಲಿಲ್ಲ. ವಿವಿಧ ಜಾತಿ ಸಂಘಟನೆಗಳು ರಾಷ್ಟ್ರದ ಅಂಗಗಳಾಗಿದ್ದು ಅವೆಲ್ಲವೂ ಸುಸ್ಥಿತಿಯಲ್ಲಿದ್ದಾಗ ಮಾತ್ರ ಸುಂದರ, ಸುದೃಢ ರಾಷ್ಟ್ರ ನಿರ್ಮಾಣ ಸಾಧ್ಯ ಎಂಬ ಪರಿಕಲ್ಪನೆಯಲ್ಲಿ ಅವರು ಕಾರ್ಯವೆಸಗುತ್ತಿದ್ದರು. ನಮ್ಮ ಸಂಸ್ಕೃತಿ ಮತ್ತು ಪರಂಪರೆಗಳ ಬಗೆಗೆ ವಿಶೇಷ ಗೌರವ ಹೊಂದಿದ್ದ ಅವರು ದೈವಭಕ್ತರೂ ಭಜನಾಪ್ರಿಯರೂ ಆಗಿದ್ದರು.

ವಿಧಾನಪರಿಷತ್ತಿನ ಸದಸ್ಯರಾಗಿದ್ದ ಸಮಯದಲ್ಲಿ ಪರಿಷತ್ತಿನಲ್ಲಿ ನಡೆದ ಚರ್ಚೆಯೊಂದರಲ್ಲಿ ಸಂಸ್ಕೃತ ಭಾಷೆಯ ವಿಷಯ ಬಂದಾಗ ಶಾಸಕರೊಬ್ಬರು "ಅದು ಮೃತ ಭಾಷೆ, ಅದರ ಬಗೆಗೆ ಇಲ್ಲಿ ಚರ್ಚಿಸಿ ಸಮಯ ವ್ಯಯ ಮಾಡುವುದು ಬೇಡ" ಎಂದರಂತೆ. ಆ ಸಮಯದಲ್ಲಿ ಮಾತಿಗೆ ಅವಕಾಶ ಕೋರಿ, ಸಂಸ್ಕೃತದ ಬಗೆಗೆ ಮತ್ತು ಅದು ಇಂದಿಗೂ ಹೇಗೆ ಮತ್ತು ಎಷ್ಟು ಅಗತ್ಯ ಎಂಬ ವಿಷಯದಲ್ಲಿ ನಿರರ್ಗಳವಾಗಿ ಮಾತನಾಡಿ ಎಲ್ಲರ ಮನ ಒಲಿಸಿದ್ದರಂತೆ. ಅಂದು ಪರಿಷತ್ತಿನ ಉಪಸಭಾಪತಿಗಳಾಗಿದ್ದ ಶ್ರೀ ಡಿ.ಹೆಚ್. ಶಂಕರಮೂರ್ತಿ ಮತ್ತು ಅಂದು ಸಚಿವರಾಗಿದ್ದ ಶ್ರೀ ಕೆ.ಎಸ್. ಈಶ್ವರಪ್ಪ ಅವರು ಭಾನುಪ್ರಕಾಶ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವಾಗ ಈ ಘಟನೆಯನ್ನು ನೆನಪು ಮಾಡಿಕೊಂಡರು. ಸದನದಲ್ಲಿ ಸಂಸ್ಕೃತದಲ್ಲಿ ಮಾತನಾಡಿ, ಭಾನುಪ್ರಕಾಶ್ ಇಡೀ ರಾಜ್ಯದ ಗಮನವನ್ನು ಸೆಳೆದಿದ್ದರು. ಭಾನುಪ್ರಕಾಶರ ಮಡದಿ ಶ್ರೀಮತಿ ಪ್ರಭಾ ಮತ್ತೂರಿನವರೇ. ಭಾನು–ಪ್ರಭಾ ದಂಪತಿಗೆ ಮೂವರು ಮಕ್ಕಳು. ಮೂವರೂ ಪುತ್ರರು ಇಂಜಿನಿಯರಿಂಗ್ ಪದವೀಧರರು. ಹಿರಿಯ ಪುತ್ರ ಯಾದವಕೃಷ್ಣ ಆರ್.ಎಸ್.ಎಸ್.ನ ಜವಾಬ್ದಾರಿಯೊಂದಿಗೆ ಮತ್ತೂರಿನಲ್ಲೇ ನೆಲೆಸಿದ್ದರೆ, ಎರಡನೆಯಪುತ್ರ ಹರಿಕೃಷ್ಣ ಭಾರತೀಯ ಜನತಾಪಕ್ಷದ ಶಿವಮೊಗ್ಗ ಜಿಲ್ಲಾ ಕಾರ್ಯದರ್ಶಿಯಾಗಿದ್ದಾರೆ. ಮೂರನೆಯ ಪುತ್ರ ಚಿನ್ಮಯಕೃಷ್ಣ ಆರ್.ಎಸ್.ಎಸ್.ನಪೂರ್ಣಾವಧಿ ಕಾರ್ಯಕರ್ತರಾಗಿ ಹಾಲಿ ಬೆಂಗಳೂರು ಉತ್ತರ ವಿಭಾಗ ಪ್ರಚಾರಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

"ಅನಾಯಾಸೇನ ಮರಣಂ, ವಿನಾ ದೈನ್ಯೇನ ಜೀವನಂ" ಎಂಬ ಉಕ್ತಿಗೆ ಅನುಗುಣವಾಗಿ ಭಾನುಪ್ರಕಾಶರ ಜೀವನ ಎಂದರೆ ಅತಿಶಯವಲ್ಲ. ಎಂದೂ ಯಾರಿಂದಲೂ ಏನನ್ನೂ ಬೇಡದವರು ಭಾನುಪ್ರಕಾಶ್. ರಾಜಕೀಯ ಕ್ಷೇತ್ರದಲ್ಲಿದ್ದೂ ಅಧಿಕಾರಕ್ಕಾಗಿ ಯಾರೆದರೂ ಕೈಚಾಚದೆ ದೈನ್ಯವಿಲ್ಲದ ಬದುಕನ್ನು ಬದುಕಿದರು. ಶಿವಮೊಗ್ಗದಲ್ಲಿ ತಮ್ಮ ಪಕ್ಷದ ವತಿಯಿಂದ ರಾಜ್ಯಸರ್ಕಾರದ ಪೆಟ್ರೋಲ್–ಡೀಸೆಲ್ ಬೆಲೆ ಏರಿಕೆ ವಿರುದ್ಧ ಪ್ರತಿಭಟನಾ ನಿರತರಾಗಿದ್ದ ಸಮಯದಲ್ಲಿ ಅನಾಯಾಸವಾಗಿ ಯಾವ ನೋವು ನರಳಿಕೆಗಳಿಲ್ಲದೆ ನಿಧನರಾದರು. ಅವರ ನಿಧನದಿಂದಾಗಿ ವಿಪ್ರಸಮಾಜ ಬಡವಾಗಿದೆ. ಸದಾ ಕ್ರಿಯಾಶೀಲರಾಗಿದ್ದ ಅವರ ಹಲವಾರು ಕನಸುಗಳು ಅಪೂರ್ಣವಾಗಿವೆ. ಅವುಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸುವುದೇ ಅವರಿಗೆ ನಾವು ಸಲ್ಲಿಸಬಹುದಾದ ಶ್ರದ್ಧಾಂಜಲಿಯಾಗಿದೆ.

**– ಹೊಸಹಳ್ಳಿ ಎಸ್. ನಾಗರಾಜ**

# ದಿವ್ಯಾತ್ಮ ವೆಂಕಣ್ಣದಾಸರು

– ಸುರೇಶ್ ಮೂನ



ನಮ್ಮ ನಾಡಿನ ಕೀರ್ತನ ಕಲೆ, ದಾಸ ಸಾಹಿತ್ಯ, ಸಂಗೀತ, ನೃತ್ಯ ಮುಂತಾದ ಲಲಿತಕಲಾ ಕ್ಷೇತ್ರಕ್ಕೆ ಅತ್ಯಂತ ಮೌಲ್ಯಯುತವಾದ ಮತ್ತು ಅಮೋಘವಾದ ಕೊಡುಗೆ ನೀಡಿರುವವರು ವೆಂಕಣ್ಣದಾಸರು ಮತ್ತು ದೇಶ–ವಿದೇಶಗಳಲ್ಲಿ ಖ್ಯಾತಿ ಪಡೆದಿರುವ ಅವರ ನಂತರದ ಪ್ರಭಾತ್ ಕಲಾವಿದರ ಮನೆತನ.

ವೆಂಕಣ್ಣದಾಸರ ಪೂರ್ವಜರು ವಿಜಯನಗರ ಸಾಮ್ರಾಜ್ಯದಲ್ಲಿ ಇದ್ದವರು. ಅಲ್ಲಿ ಗೋಪಾಲಕೃಷ್ಣ ದೇವರ ಪೂಜಾ ಕಾರ್ಯಗಳನ್ನು ನೆರವೇರಿಸುತ್ತಾ ವೇದ ಪಾರಾಯಣದಲ್ಲಿ ಪಾರಂಗತರಾಗಿದ್ದರು. ವಿಜಯನಗರದ ಪತನದ ಸಮಯದಲ್ಲಿ ಶತ್ರುಗಳು ಅಲ್ಲಿನ ದೇವರ ವಿಗ್ರಹಗಳನ್ನು ಭಗ್ನಗೊಳಿಸಲು ಪ್ರಯತ್ನಿಸುತ್ತಿದ್ದಾಗ ಸಹೋದರರಿಬ್ಬರು ಗೋಪಾಲಕೃಷ್ಣನ ವಿಗ್ರಹವನ್ನು ಕೆಂಪು ಬಟ್ಟೆಯಲ್ಲಿ ಸುತ್ತಿಕೊಂಡು ದಕ್ಷಿಣ ಒಳನಾಡಿನ ಕಡೆಗೆ ಹೊರಟುಬಿಟ್ಟರು. ಹೀಗೆ ಪ್ರಯಾಣ ಮಾಡುತ್ತಾ ತುಮಕೂರು ಜಿಲ್ಲೆಯ ಕುದೂರಿನಲ್ಲಿ ನೆಲೆಸಿದರು. ನಂತರ ಅಲ್ಲಿ ವ್ಯಾಸರಾಜ ಮಠದ ನಿರ್ಮಾಣವಾಗಿ ಗೋಪಾಲಕೃಷ್ಣ ದೇವರ ಪ್ರತಿಷ್ಠಾಪನೆಯಾಯಿತು. ಈ ಸಹೋದರರ ಮನೆತನವೇ ದೇವಾಲಯದ ಪೂಜಾಕಾರ್ಯಗಳನ್ನು ನೆರವೇರಿಸತೊಡಗಿದರು. ಈ ಮನೆತನಕ್ಕೆ ಸೇರಿದ ಮಹನೀಯರೆ ಮೂರ್ತಚಾರ್ಯರು. ಇವರ ಪತ್ನಿ ಈಗಿನ ಕಾಲಕ್ಕೆ ಖ್ಯಾತ ಹರಿದಾಸರಾಗಿದ್ದ ವೆಂಕಟರಾಯ ದಾಸರ ಪುತ್ರಿ. ಈ ಸುಸಂಸ್ಕೃತ ದಂಪತಿಗಳು ದೇವರ ಪೂಜೆ ಮತ್ತು ಧಾರ್ಮಿಕಕಾರ್ಯಗಳಲ್ಲಿ ನಿರತರಾಗಿದ್ದರು. ಇವರ ಮಕ್ಕಳೇ ಮುಂದೆ ಪ್ರಸಿದ್ಧರಾದ ವೆಂಕಣ್ಣದಾಸರು, ಸುಬ್ಬಣ್ಣಾಚಾರ್ಯರು, ಕೊರಟಗೆರೆ ಪ್ರಾಣೇಶಾಚಾರ್ಯರು, ವೇಣುಗೋಪಾಲದಾಸರು ಹಾಗೂ ಪಟ್ಟಾಭಿ ರಾಮಾಚಾರ್ಯರು.

ಇವರ ಪೈಕಿ ವೆಂಕಣ್ಣದಾಸರದು ಅತ್ಯಂತ ಆಕರ್ಷಕ ವ್ಯಕ್ತಿತ್ವ. ಸದಾ ನಲಿವು ಹಾಗೂ ಉತ್ಸಾಹದಿಂದ ಹಾಡು, ಕಥೆ, ನಾಟಕ ಮುಂತಾದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆ, ಸಂಸ್ಕೃತ ಕಾವ್ಯಗಳು, ರಾಮಾಯಣ, ಮಹಾಭಾರತ ಮುಂತಾದ ಗ್ರಂಥಗಳ ಅರ್ಥವನ್ನು ಚಿಕ್ಕಂದಿನಿಂದಲೇ ಅರಗಿಸಿಕೊಂಡು ಜನಸಾಮಾನ್ಯರಿಗೆ ತಿಳಿಹೇಳುವ ಅದ್ಭುತ ಪ್ರತಿಭೆ ಈ ಬಾಲಕನದ್ದು. ಇದರಿಂದಾಗಿ ವೆಂಕಣ್ಣದಾಸರು ಎಲ್ಲರಿಗೂ ಚಿರಪರಿಚಿತರಾಗಿದ್ದರು. ಆಗಿನ ಕಾಲದ ಪದ್ಧತಿಯಂತೆ ಚಿಕ್ಕಂದಿನಲ್ಲಿಯೇ ಇವರಿಗೆ ಭಾಗೀರಥಮ್ಮ ಎಂಬ ಕನ್ಯೆಯೊಂದಿಗೆ ವಿವಾಹವಾಗಿತ್ತು.

ಒಂದು ಅನಿವಾರ್ಯ ಪರಿಸ್ಥಿತಿಯಿಂದಾಗಿ ಇವರು ತಮ್ಮ ಒಂದು ವರ್ಷದ ಮಗು ಮತ್ತು ಪತ್ನಿಯೊಂದಿಗೆ ಮನೆಯಿಂದ ಹೊರಟು ಬೆಂಗಳೂರು ಬಳಿಯ ಯಲಹಂಕದಲ್ಲಿ ಬಂದು ನೆಲೆಸಿದರು. ತಮ್ಮ ಆಕರ್ಷಕ ವ್ಯಕ್ತಿತ್ವ ಮತ್ತು ಕಲೆಯಿಂದಾಗಿ ಅಲ್ಲಿಯ ಜನರ ಗೌರವಕ್ಕೆ ಪಾತ್ರರಾಗಿ ಬಹುಬೇಗ ಯಲಹಂಕದ ದಾಸರು ಎಂದೇ ಚಿರಪರಿಚಿತರಾದರು.

ಅಲ್ಲಿನ ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಇವರ ಪ್ರತಿಭೆಯನ್ನು ಗುರುತಿಸಿ ಯಲಹಂಕದ ಶಾಲೆಯೊಂದರಲ್ಲಿ ಸಂಗೀತ ಉಪಾಧ್ಯಾಯರಾಗಿ ನೇಮಕ ಮಾಡಿದರು. ಕ್ರಮೇಣ ಇವರ ಖ್ಯಾತಿ ಬೆಂಗಳೂರಿಗೂ ಹರಡಿತು. 1916 ರ ವೇಳೆಗೆ ಬೆಂಗಳೂರಿನ ಸುಲ್ತಾನ್‌ಪೇಟೆ ಗಣಪತಿ ಶಾಲೆಗೆ ವರ್ಗವಾಯಿತು. ಈ ನಗರಕ್ಕೆ ಬಂದ ಮೇಲಂತೂ ಇವರ ಪ್ರತಿಭೆ ಮತ್ತಷ್ಟು ವ್ಯಾಪಕವಾಗಿ ಬೆಳಕಿಗೆ ಬರುವಂತಾಯ್ತು. ಬಹುಬೇಗ ಇವರು ಇಡೀ ಮೈಸೂರು ಪ್ರಾಂತ್ಯದ ಭಕ್ತಿ ಪ್ರಸಾರದ ಕೇಂದ್ರಬಿಂದುವಾಗಿ ಹರಿಕಥಾ ಕಲೆಯನ್ನು ಅದರ ಸಾಧನೆಯ ಉತ್ತುಂಗ ಶೃಂಗಕ್ಕೆ ಕೊಂಡೊಯ್ದು ಸಾಧಕರಾಗಿ, ಹರಿದಾಸ ಸಾಹಿತ್ಯದ ವಿಶೇಷ ಪ್ರಚಾರಕರಾಗಿ ನಾಡಿನಾದ್ಯಂತ ಮನೆ ಮಾತಾಗಿದ್ದರು.

ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಹಾಗೂ ಮಧ್ವಾಚಾರ್ಯರು, ಆನಂತರದ ಮಹಿಮರು, ವೇದೋಪನಿಷತ್ತು ಮತ್ತು ಪುರಾಣಗಳಲ್ಲಿನ ಗಹನವಾದ ಸಂಗತಿಗಳನ್ನು ಸುಶ್ರಾವ್ಯವಾದ ಸಂಗೀತ ಮುಂತಾದ ಲಲಿತಕಲೆಗಳ ಮೂಲಕ ಸಾಮಾನ್ಯರಿಗೆ ತಲುಪಿಸಲು ಇವರು ರೂಪಿಸಿದ ಕ್ರಮಗಳು, ವಿಧಿ ವಿಧಾನಗಳು ಕಥನಕಲೆಗೆ ಒಂದು ಹೊಸ ಆಯಾಮವನ್ನೇ ಒದಗಿಸಿ ಕೊಟ್ಟಿತ್ತು.

ಬಳೆಪೇಟೆ ಶ್ರೀನಿವಾಸಮಂದಿರ, ಕಬ್ಬನ್‌ಪೇಟೆ, ಬುಲ್ ಟೆಂಪಲ್ ರಸ್ತೆಯ ರಾಮಕೃಷ್ಣ ಆಶ್ರಮ, ಚಾಮರಾಜಪೇಟೆಯ ರಾಮೇಶ್ವರ ಗುಡಿ ಹೀಗೆ ಈ ಮಹಾನಗರದ ಅನೇಕ ಕಡೆಗಳಲ್ಲಿ, ಹಾಗೆ ನಮ್ಮ ರಾಜ್ಯದ ಇತರ ಊರುಗಳಲ್ಲೂ ಇವರ ಹರಿಕಥೆಯು ತಿಂಗಳುಗಟ್ಟಲೆ ನಡೆಯುತ್ತಿತ್ತು. ಕಿಕ್ಕಿರಿದುನೆರೆಯುತ್ತಿದ್ದ ಸಭಿಕರು ತದೇಕಚಿತ್ತರಾಗಿ ಇವರ

ಕೀರ್ತನ ಕಲೆಯ ರಸದೌತಣವನ್ನು ಸವಿಯುತ್ತಿದ್ದರು. ಒಮ್ಮೆ ಆಗಿನ ಸಚಿವ ಚನ್ನಿಗರಾಮಯ್ಯನವರ ಕೋರಿಕೆ ಮೇರೆಗೆ ಹರಿಜನ ಕೇರಿಗೆ ಹೋಗಿ ಕಾರ್ಯಕ್ರಮವನ್ನು ನೀಡಿದರು. ಅದರ ಪರಿಣಾಮವಾಗಿ ಅವರಿಗಾಗಿಯೇ ಒಂದು ಭಜನಾಮಂಡಳಿ ಪ್ರಾರಂಭವಾಯಿತು. ಈ ಜನರ ಬಗ್ಗೆ ಅಪಾರ ಸಹಾನುಭೂತಿ, ಕಳಕಳಿ ಇದ್ದ ಇವರು ಆಗಾಗ್ಗೆ ಅಲ್ಲಿ ಸಮಾರಾಧನೆಯನ್ನು ಮಾಡುತ್ತಿದ್ದರು. ಒಮ್ಮೆ ಅಂತಹ ಒಂದು ಕಾರ್ಯಕ್ರಮವನ್ನು ಮುಗಿಸಿ ಬರುತ್ತಿದ್ದಾಗ ಬಂಧುಗಳೊಬ್ಬರು 'ದಾಸರೆ, ಮೊದಲು ಸ್ನಾನಮಾಡಿ ಜನಿವಾರ ಬದಲಾಯಿಸಿ.' ಎಂದರು. ಅದಕ್ಕೆ 'ನಾನು ಮಾಡಿರುವುದು ಪುಣ್ಯಕಾರ್ಯವೇ. ಅದಕ್ಕಾಗಿ ನಾನೇನು ಬದಲಾಯಿಸಬೇಕಾಗಿಲ್ಲ, ಆದರೆ ಇಂತಹ ಸಂಕುಚಿತ ಮನೋಭಾವದಿಂದ ಮಾತನಾಡಿದ ನಿಮ್ಮ ಮನಸ್ಸು ಮೈಲಿಗೆ ಆಗಿದೆ. ಹೀಗಾಗಿ ಸ್ನಾನ ಮಾಡಬೇಕಾದವರು ನೀವು' ಎಂದು ಹೇಳಿಬಿಟ್ಟರು. ಆಗಿನ ಕಾಲಕ್ಕೇ ಇಂತಹ ಪ್ರಗತಿಪರ ಚಿಂತನೆಯನ್ನು ಹೊಂದಿದ ಮಹಾನುಭಾವರು ವೆಂಕಣ್ಣದಾಸರು.

ಇವರ ಆಕರ್ಷಕ ವ್ಯಕ್ತಿತ್ವ ಎಂತೆಂತಹ ವ್ಯಕ್ತಿಗಳನ್ನು ಪರಿವರ್ತನೆಯ ಹಂತಕ್ಕೆ ಕೊಂಡೊಯ್ದಿದೆ ಎಂಬುದಕ್ಕೆ ಕೆಲವು ಕುತೂಹಲಕಾರಿ ಉದಾಹರಣೆಗಳಿವೆ.

ಬೆಂಗಳೂರಿನಲ್ಲಿ ವೆಂಕಣ್ಣದಾಸರ ಮನೆ ಇದ್ದಿದ್ದು ಶಂಕರಪುರದಲ್ಲಿ. ಇವರ ಮನೆಗೆ ಅನೇಕ ವಿದ್ವಾಂಸರು, ಕಲಾವಿದರು ಬಂದು ಹೋಗುತ್ತಿದ್ದರು. ಇವರ ಮನೆಯ ಬಳಿಯಲ್ಲಿಯೇ ಡೆಪ್ಯುಟಿ ಕಮಿಷನರ್, ಎಂ.ಎ. ನಾರಾಯಣ ಅಯ್ಯಂಗಾರ್‌ರವರು ವಾಸವಾಗಿದ್ದರು. ಅವರ ಮನೆಯಲ್ಲೂ ಜನರು ತುಂಬಿರುತ್ತಿದ್ದರು. ಅಲ್ಲಿ ಪರಕೀಯ ಸಂಸ್ಕೃತಿಯ ವೇಷಭೂಷಣ, ಆಚಾರ–ವಿಚಾರ, ಹಾಗೂ ಇಂಗ್ಲಿಷ್ ಭಾಷೆಯ ಪ್ರಾಬಲ್ಯತೆ ಇರುತ್ತಿತ್ತು. ಜೊತೆಗೆ, ಡಿ.ಸಿ. ಎಂಬ ಪದವಿಯ ದರ್ಪ ಅಲ್ಲಿ ತಾಂಡವವಾಡುತ್ತಿತ್ತು. ಅವರ ದೃಷ್ಟಿಯಲ್ಲಿ ವೆಂಕಣ್ಣದಾಸರು ಒಬ್ಬ ಹಳೆಯ ಕಾಲದ ಕಂದಾಚಾರದ ವ್ಯಕ್ತಿಯಾಗಿದ್ದರು.

ವೆಂಕಣ್ಣದಾಸರು ಸಹ ಡಿ.ಸಿ. ಅವರ ಮನೆಯ ವಾತಾವರಣವನ್ನು ಗಮನಿಸುತ್ತಿದ್ದರು. ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆ, ಅಧಿಕಾರ ಚಲಾವಣೆ, ಇಂಗ್ಲಿಷ್ ತಿಳುವಳಿಕೆ ಇವುಗಳಿಂದಲೇ ಪ್ರಗತಿ ಸಾಧ್ಯ ಎಂಬ ಭ್ರಮೆ ನಾರಾಯಣ ಅಯ್ಯಂಗಾರ್ ಮನೆಯಲ್ಲಿ ಕಂಡುಬರುತ್ತಿತ್ತು. ಸಂಪ್ರದಾಯಸ್ಥ ಮನೆತನದ ವ್ಯಕ್ತಿಯೊಬ್ಬ ಈ ರೀತಿ ಪರಕೀಯರ ಸಂಸ್ಕೃತಿಯ ಮಹತ್ವಗಳಿಗಾಗಿ ಭಾರತೀಯ ಸಂಸ್ಕೃತಿಯನ್ನು ಕಡೆಗಣಿಸಿರುವುದನ್ನು ಕಂಡು ದಾಸರಿಗೆ ನೋವಾಯಿತು. ಹೇಗಾದರೂ ಮಾಡಿ ಅಧಿಕಾರಿಯ ಮನಸ್ಸಿನಲ್ಲಿ ಪರಿವರ್ತನೆ ಉಂಟುಮಾಡಬೇಕೆಂದು ನಿರ್ಧರಿಸಿದರು. ಒಂದು ದಿನ ಡಿ.ಸಿ. ಅವರಿಗೆ ಪತ್ರವೊಂದನ್ನು ಬರೆದು ತಾವು ಕೇವಲ 10 ನಿಮಿಷ ಭೇಟಿ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೋರಿಕೆ ಸಲ್ಲಿಸಿದರು. ತಮ್ಮ ಸಮಯ ಬಹಳ ಅಮೂಲ್ಯವೆಂದೂ ಯಾವ ವಿಷಯಕ್ಕೆ ಸಂಬಂಧಿಸಿದಂತೆ ಭೇಟಿ ಮಾಡಬೇಕು ಎಂಬುದನ್ನು ತಿಳಿಸಿದರೆ ಪರಿಶೀಲಿಸಬಹುದು ಎಂದು ಉತ್ತರ ಬಂದಿತ್ತು. ಆಧ್ಯಾತ್ಮಿಕತೆ, ತತ್ವಶಾಸ್ತ್ರದಂತಹ ವಿಷಯಗಳ ಬಗ್ಗೆ ಚರ್ಚಿಸಲು ಅವಕಾಶ ಕೊಡಬೇಕೆಂದು ವೆಂಕಣ್ಣದಾಸರು ಮತ್ತೊಮ್ಮೆ ಪ್ರಾರ್ಥಿಸಿದರು. ತಮ್ಮಂತಹ ಆಧುನಿಕ ಚಿಂತನೆಯ ಸುಸಂಸ್ಕೃತನ ಬಳಿ ಹರಿಕಥೆದಾಸರು ಒಬ್ಬರು ಏನುತಾನೇ ಮಾತನಾಡಬಲ್ಲರು ಎಂಬ ಧೋರಣೆಯನ್ನು ಅವರು ವ್ಯಕ್ತಪಡಿಸಿದರೂ ಕೇವಲ ಹತ್ತು ನಿಮಿಷಗಳಷ್ಟು ಮಾತ್ರ ಭೇಟಿ ಮಾಡಲು ಒಂದು ದಿನ ರಾತ್ರಿ 9:00 ಗಂಟೆಗೆ ಅವಕಾಶ ನೀಡಿದರು. ಅಂದು ವೆಂಕಣ್ಣದಾಸರು ಅವರ ನಿರೀಕ್ಷಣಾ ಕೊಠಡಿಗೆ 8:30ಗೆ ಹೋಗಿ ಕುಳಿತರು. ಒಂಬತ್ತು ಗಂಟೆಗೆ ಒಳಗೆ ಬರಲು ಕರೆಬಂದಿತ್ತು. ಒಳಗೆ ಹೋಗುವಾಗ ಅವರ ಆಪ್ತ ಕಾರ್ಯದರ್ಶಿಯು ಸಹ ಕೇವಲ 10 ನಿಮಿಷ ಸಮಯ ಅಷ್ಟೇ ಎಂದು ಎಚ್ಚರಿಸಿದ. ನಸುನಕ್ಕ ವೆಂಕಣ್ಣದಾಸರು ಒಳಹೊಕ್ಕರು. 10 ನಿಮಿಷ ಆಯ್ತು, 20 ನಿಮಿಷ ಆಯ್ತು, ಗಂಟೆ ಆಯ್ತು, ದಾಸರು ಹೊರಗೆ ಬರಲೇ ಇಲ್ಲ. ರಾತ್ರಿ 12 ಗಂಟೆಯ ವೇಳೆಗೆ ಹೊರ ಬಂದರು.

ಮಾರನೇ ದಿನ ಡಿ.ಸಿ. ಕೆಲಸಕ್ಕೆ ರಜೆ ಹಾಕಿದರು. ಬೆಳಗ್ಗೆ 9 ಗಂಟೆಯಿಂದ ವೆಂಕಣ್ಣದಾಸರು ಮತ್ತೆ ಡಿ.ಸಿ. ಅವರೊಂದಿಗೆ ಮಾತನಾಡಲು ಕುಳಿತರು. ಅಂದು, ಮರುದಿನ ಹೀಗೆ ಸುಮಾರು ಏಳು ದಿನಗಳ ಕಾಲ ವಿಚಾರವಿನಿಮಯಗಳು ನಡೆದವು. ಕೊನೆಯ ದಿನ ವೆಂಕಣ್ಣದಾಸರು ಹೊರಡುವಾಗ ಡಿ.ಸಿ. ಸಾಹೇಬರು ಅಗಲವಾದ ತಟ್ಟೆಯಲ್ಲಿ ರೇಷ್ಮೆ ಮಗುಟ, ಶಲ್ಯ ಹಾಗೂ ಫಲಪುಷ್ಪಗಳನ್ನು ಇಟ್ಟು ನಮಸ್ಕರಿಸಿ ಗೌರವದಿಂದ ಕಳುಹಿಸಿಕೊಟ್ಟರು. ಒಂದೆರಡು ದಿನಗಳು ಆಗುತ್ತಿದ್ದಂತೆ ಸಾಹೇಬರು ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿ ರಾಮಕೃಷ್ಣ ಆಶ್ರಮದ ದೀಕ್ಷೆಯನ್ನು ಪಡೆದರು. ಮುಂದೆ ಶ್ರೀವಾಸಾನಂದ ಎಂಬ ಹೆಸರಿನೊಂದಿಗೆ ಸನ್ಯಾಸಿಯಾಗಿ ಬೆಂಗಳೂರು ದೊಡ್ಡ ಬಸವಣ್ಣ ರಸ್ತೆಯ ರಾಮಕೃಷ್ಣ ಆಶ್ರಮದಲ್ಲಿ ಸ್ವಲ್ಪಕಾಲ ಇದ್ದರು. ಪೂರ್ವಾಶ್ರಮದಲ್ಲಿ ಇವರು ಸರ್ಕಾರದ ದೊಡ್ಡ ಹುದ್ದೆಯಲ್ಲಿ ಇದ್ದುದರಿಂದ ಆಶ್ರಮ ಮತ್ತು ಮಹಾರಾಜರ ನಡುವಿನ ಪತ್ರ ವ್ಯವಹಾರಗಳ ಕೆಲಸಗಳಿಗೆ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಲು ಬಹಳ ಅನುಕೂಲವಾಗಿದ್ದರು.

ಸ್ವಾಮಿ ವಿವೇಕಾನಂದರ ಆದರ್ಶ ಮತ್ತು ಸಂದೇಶಗಳಿಂದ ಪ್ರಭಾವಿತರಾಗಿದ್ದ ವೆಂಕಣ್ಣದಾಸರು ಸ್ವಾಮೀಜಿಯ ಬಗ್ಗೆ ಅತ್ಯಾಕರ್ಷಕವಾಗಿ ಹರಿಕಥೆಯನ್ನು ನಡೆಸಿಕೊಡುತ್ತಿದ್ದರು.

ಒಮ್ಮೆ ವೆಂಕಣ್ಣದಾಸರು ತಮ್ಮ ಹರಿಕಥಾ ಕಾರ್ಯಕ್ರಮವನ್ನು ಮುಗಿಸಿಕೊಂಡು ರಾತ್ರಿ ಸ್ವಲ್ಪ ತಡವಾಗಿಯೇ ವಿಶ್ವೇಶ್ವರಪುರದ ಮೂಲಕ ಶಂಕರಪುರದ ತಮ್ಮ ಮನೆಯಕಡೆಗೆ ಹೊರಟಿದ್ದರು. ಹೆಚ್ಚಾಗಿ ದೀಪವಿಲ್ಲದ ಸ್ಥಳಕ್ಕೆ ಬಂದಾಗ ಇಬ್ಬರು ಕಳ್ಳರು ಹಿಂದಿನಿಂದ ಬಂದು ಇವರನ್ನು ಬಿಗಿಯಾಗಿ ಹಿಡಿದುಕೊಂಡರು. ಇವರ ದೈಹಿಕಶಕ್ತಿಯ ಪರಿಚಯ ಬಡಪಾಯಿಗಳಿಗೆ ಇರಲಿಲ್ಲ. ವೆಂಕಣ್ಣದಾಸರು ತಮ್ಮ ಎರಡು ತೋಳುಗಳಿಂದ ಅವರಿಬ್ಬರ ಕುತ್ತಿಗೆಗಳನ್ನ ಬಲವಾಗಿ ಸುತ್ತುವರೆದು ಅಮುಕಿ ಹಿಡಿದುಕೊಂಡು ಎಳೆದು ಕೊಂಡೆ ಮನೆಯವರೆಗೆ ಕರೆದುಕೊಂಡು ಬಂದರು. ಅವರ ಈ ಶಕ್ತಿಯನ್ನು ಕಂಡು ಬೆರಗಾದ ಆ ವ್ಯಕ್ತಿಗಳು ಶರಣಾಗತರಾದರು. ಮುಂದೆ ಅವರೇ ವೆಂಕಣ್ಣದಾಸರ ಅನುಯಾಯಿಗಳಾದರು ಮತ್ತು ಅಂಗರಕ್ಷಕರಾದರು. ಕೇವಲ ಮಾನಸಿಕವಾಗಿ ಅಷ್ಟೇ ಅಲ್ಲದೆ ಆಧ್ಯಾತ್ಮಿಕವಾಗಿಯೂ ಬದಲಾಗಿ ಪುನೀತರಾದರು.

ವೆಂಕಣ್ಣದಾಸರು ಒಮ್ಮೆ ದಾವಣಗೆರೆಯಲ್ಲಿ ಒಂದು

ಕಾರ್ಯಕ್ರಮಕ್ಕಾಗಿ ವಿಶಾಲವಾದ ಜಾಗದಲ್ಲಿ ಬೀಡುಬಿಟ್ಟಿದ್ದರು. ಒಂದು ದಿನ ಅಲ್ಲಿ ಕೋಮುಗಲಭೆ ಉಂಟಾಗಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ಅಟ್ಟಿಸಿಕೊಂಡು ಬಂದರು. ಪ್ರಾಣ ಭಯದಿಂದ ಓಡಿಬಂದ ಪೊಲೀಸರು ಇವರ ಬಿಡಾರವನ್ನು ಪ್ರವೇಶಿಸಿ ತಮ್ಮ ಪರಿಸ್ಥಿತಿಯನ್ನು ತಿಳಿಸಿ ಒಳಗಿರಲು ಅವಕಾಶ ಬೇಕೆಂದು ಕೋರಿಕೊಂಡರು. ಅವರನ್ನು ಒಳಗೆ ಕಳುಹಿಸಿದ ದಾಸರು ಹೊರಗೆ ಬಂದು ನಿಂತರು. ಅಲ್ಲಿ ಬಂದವರಲ್ಲಿ ಬಹಳಷ್ಟು ಜನರು ಇವರ ಹರಿಕಥೆಯಿಂದ ಪ್ರಭಾವಿತರಾದವರೇ. ಹೀಗಾಗಿ ಮುಂದೆಬರಲು ಹಿಂಜರಿದರು. ವೆಂಕಣ್ಣದಾಸರು ಅವರನ್ನು ಸಮಾಧಾನಪಡಿಸಿ ಕಳುಹಿಸಿಕೊಟ್ಟರು. ನಂತರ ಅಡುಗೆ ಮಾಡಿಸಿ ಪೊಲೀಸರಿಗೆ ಊಟಹಾಕಿಸಿದರು. ಹೆಚ್ಚುವರಿ ಪೊಲೀಸ ಪಡೆ ಬಂದ ಮೇಲೆ ಅವರನ್ನು ಕಳುಹಿಸಿಕೊಟ್ಟರು. ಹೀಗೆ ರಕ್ಷಕರಿಗೆ ರಕ್ಷಣೆ ನೀಡಿದವರು ವೆಂಕಣ್ಣದಾಸರು.

ಕೀರ್ತನ ಕಲೆ ಅಷ್ಟೇ ಅಲ್ಲದೆ ನಾಟ್ಯಶಾಸ್ತ್ರದಲ್ಲಿ ಕೂಡ ವೆಂಕಣ್ಣದಾಸರಿಗೆ ಆಳವಾದ ಜ್ಞಾನವಿತ್ತು. ಕೆಲವು ವೇಳೆ ತಮ್ಮ ಕಾರ್ಯಕ್ರಮದಲ್ಲಿ ನಾಟ್ಯಶಾಸ್ತ್ರ ಪಿತಾಮಹ ಭರತಮುನಿಯ ಬಗ್ಗೆ ವಿವರ ನೀಡುತ್ತಿದ್ದರು. ನಾಟ್ಯಶಾಸ್ತ್ರದ ವಿವಿಧ ಅಂಶಗಳನ್ನು ಅಭಿನಯಿಸಹಿತ ವಿವರಿಸುತ್ತಿದ್ದರು.

ನಟನೆಯಲ್ಲೂ ಇವರ ಪ್ರತಿಭೆ ಅಸಾಧಾರಣವಾಗಿತ್ತು. ನಾಟಕದ ಜಯಾಚಾರ್ಯರು ವೆಂಕಣ್ಣದಾಸರ ಹತ್ತಿರದ ಬಂಧುಗಳು. ಒಮ್ಮೆ ಅವರು ವರದಾಚಾರ್ಯರ ಕಂಪನಿಯ ನಾಟಕದಲ್ಲಿ ಕಣ್ವರ ಪಾತ್ರವನ್ನು ವಹಿಸುವಂತೆ ವೆಂಕಣ್ಣದಾಸರನ್ನು ಹುರಿದುಂಬಿಸಿದರು. ಈ ಸಂಗತಿಯನ್ನು ಮೈಸೂರು ಸಂಸ್ಥಾನದಲ್ಲಿ ನಾಟಕ ಶಿರೋಮಣಿ ಎಂದೇ ಪ್ರಸಿದ್ಧರಾಗಿದ್ದ ವರದಾಚಾರ್ಯರಿಗೆ ತಿಳಿಸಿದರು. ಹರಿಕಥಾ ಪ್ರಪಂಚವೇ ಬೇರೆ. ನಟನ ಕಲೆಯೇ ಬೇರೆ ಎಂದು ಅವರು ಅನುಮಾನ ವ್ಯಕ್ತಪಡಿಸಿದರು. ಆದರೂ ನಾಟಕದಲ್ಲಿ ಪಾತ್ರವಹಿಸಲು ಒಪ್ಪಿದರು. ಅದು ರತ್ನಾವಳಿ ಥಿಯೇಟ್ರಿಕಲ್ ಕಂಪನಿಯ ಶಾಕುಂತಲ ನಾಟಕ. ರಂಗಮಂದಿರ ಜನರಿಂದ ತುಂಬಿಹೋಗಿತ್ತು. ಎಲ್ಲರೂ ವೆಂಕಣ್ಣದಾಸರ ನಟನೆಯನ್ನು ಗಮನಿಸುತ್ತಿದ್ದರು. ಶಕುಂತಲೆಯು ಕಣ್ವರ ಬಳಿ ಬಂದು 'ಅಪ್ಪ ನಾನು ಹೋಗಿಬರುತ್ತೇನೆ. ಆಶೀರ್ವದಿಸಿ' ಎಂದಾಗ ಕಣ್ವರು, 'ನೀನು ಮತ್ತು ನಿನ್ನ ಪತಿಯು ಪುಟ್ಟ ಕಂದನೊಡನೆ ಮತ್ತೆ ಬಂದಾಗ ಪುನರ್ದರ್ಶನ' ಎಂದು ಅತ್ಯಂತ ಭಾವಪೂರ್ಣವಾಗಿ ಹೇಳಿದರು. ವರದಾಚಾರ್ಯರು ಇದನ್ನು ಕಂಡು ಭಾವಪರವಶರಾದರು, ಕೂಡಲೇ ಸ್ಟೇಜ್ ಮೇಲೆರೋಡಸೀನನ್ನು ಹಾಕಿಸಿ ಮುಂದೆ ಬಂದು 'ನಾನು ಈಗ ಪಾತ್ರಮಾಡಲು ಬಂದಿಲ್ಲ. ಮಹಾತ್ಮಕಣ್ವರನ್ನು ಪರಿಚಯಿಸಲು ಬಂದಿದ್ದೇನೆ. ಎಂದು ವೆಂಕಣ್ಣದಾಸರನ್ನು ತುಂಬುಹೃದಯದಿಂದ ಕೊಂಡಾಡಿದರು. ಅಷ್ಟೇ ಅಲ್ಲದೆ ತಮ್ಮದೇ ಲೆಗ್‌ಹಾರ್ಮೋನಿಯಂ ಅನ್ನು ಸಹ ವೆಂಕಣ್ಣದಾಸರಿಗೆ ಕೊಡುಗೆಯಾಗಿ ನೀಡಿದರು. ಆ ಹಾರ್ಮೋನಿಯಂ ಇವರ ಮನೆತನದಲ್ಲಿ ಬಹಳ ಗೌರವದಿಂದ ರಕ್ಷಿಸಲ್ಪಟ್ಟಿದೆ.

ಇದೇ ರೀತಿ ಶಿವಾನಂದ ಥಿಯಾಟ್ರಿಕಲ್ ಕಂಪನಿಯಲ್ಲೂ ಹಿರಿಯಕಲಾವಿದರಾದ ನಾಗೇಶರಾಯರ ಒಡನೆ ವೆಂಕಣ್ಣನದಾಸರು ಅನೇಕ ನಾಟಕಗಳಲ್ಲಿ ಪಾತ್ರವಹಿಸಿದರು. ಶಕುಂತಲಾ, ನಿರುಪಮಾ ಗುಲೇಬಕಾವಲಿ ಮುಂತಾದವುಗಳು ಅವರು ಪಾತ್ರವಹಿಸಿದ ಪ್ರಸಿದ್ಧ ನಾಟಕಗಳು.

ನಾಟಕಕ್ಕೆ ವರದಾಚಾರ್ಯರು, ಸಂಗೀತಕ್ಕೆ ಮೈಸೂರು ವಾಸುದೇವಾಚಾರ್ಯರು ಹಾಗೆ ಹರಿಕಥೆಗೆ ವೆಂಕಣ್ಣದಾಸರು ಇವರುಗಳು ಮೈಸೂರು ಸಂಸ್ಥಾನದ ತ್ರಿಮೂರ್ತಿಗಳು ಎಂದು ಆಗ ಉಲ್ಲೇಖಿಸಲ್ಪಡುತ್ತಿದ್ದರು.

ವೆಂಕಣ್ಣದಾಸರ ಅದ್ಭುತ ಕೀರ್ತನಕಲೆ, ಆಧ್ಯಾತ್ಮಿಕ ಚಿಂತನೆ, ವಿದ್ವತ್ತು, ಸಾಮಾಜಿಕ ಕಳಕಳಿ, ಪ್ರಗತಿಪರ ಚಿಂತನೆ ಮುಂತಾದ ಸಂಗತಿಗಳಿಗೆ ಸಂಬಂಧಿಸಿದಂತೆ ಇನ್ನು ಅನೇಕ ನಿದರ್ಶನಗಳಿವೆ. ಇವೆಲ್ಲವನ್ನು ಬರೆಯುತ್ತಾ ಹೋದರೆ ಒಂದು ದೊಡ್ಡ ಗ್ರಂಥವೇ ಆಗುತ್ತದೆ. ಈ ಲೇಖನದ ಇತಿ–ಮಿತಿಗೆ ಅನುಗುಣವಾಗಿ ಅವರ ವ್ಯಕ್ತಿತ್ವದ ಒಂದು ಕಿರುಪರಿಚಯವನ್ನು ಮಾತ್ರ ಇಲ್ಲಿ ಮಾಡಿಕೊಡಲಾಗಿದೆ.

ವೆಂಕಣ್ಣದಾಸರು 1935ರ ಭಾದ್ರಪದ ಶುದ್ಧ ಪಾಡ್ಯ ಗುರುವಾರದಂದು ಸುಮಾರು ಒಂದು ವಾರದಿಂದ ಉಂಟಾದ ಅನಾರೋಗ್ಯದಿಂದ ಪ್ರಜ್ಞಾಹೀನಸ್ಥಿತಿಗೆ ತಲುಪಿದ್ದರು. ಆದರೆ, ಸಂಜೆ ವೇಳೆಗೆ ಇದ್ದಕ್ಕಿದ್ದಂತೆ ಜ್ಞಾನ ಬಂದು ವಾಯುಸ್ತುತಿಯನ್ನು ಹೇಳಲು ತೊಡಗಿದರು. ನಂತರ 'ವಾಯು ದೇವರು ಬರುತ್ತಿದ್ದಾರೆ. ದಾರಿಮಾಡಿಕೊಡಿ' ಎಂದು ಹೇಳಿ ಸ್ತುತಿಯನ್ನು ಮುಂದುವರಿಸಿದರು. ಸುತ್ತಲೂ ನೆರೆದಿದ್ದ ಕುಟುಂಬದ ಸದಸ್ಯರಿಗೆ ಇದು ಅರ್ಥವಾಗದೆ ಯಾರು, ಯಾರು ಎಂದು ಕೇಳಿದರು. ದಾಸರು 'ವಾಯುದೇವರಪ್ಪ.. ಭೀಮಸೇನ ದೇವರು ಬರುತ್ತಿದ್ದಾರೆ, ದಾರಿಬಿಡಿ'. ಎಂದರು. ಇವರ ಆಪ್ತರಾಗಿದ್ದ ಭೀಮಸೇನಾಚಾರ್ಯ ಎಂಬ ವೈದಿಕರು ಸಹಜವಾಗಿ ಎಂಬಂತೆ ವಾಯುಸ್ತುತಿಯನ್ನು ಪಠಣ ಮಾಡುತ್ತಲೇ ಮನೆಯೊಳಗೆ ಪ್ರವೇಶ ಮಾಡಿದರು. ವೆಂಕಣ್ಣದಾಸರ ಬಳಿ ಸ್ವಲ್ಪ ಹೊತ್ತು ಕುಳಿತು ಅವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ನಂತರ ಅಲ್ಲಿಂದ ಹೊರಟು ಹೋದರು. ಅವರು ತೆರಳಿದ ಸ್ವಲ್ಪಹೊತ್ತಿಗೆ ವೆಂಕಣ್ಣದಾಸರು ಕೈ ಮುಗಿದು ಕಣ್ಣು ಮುಚ್ಚಿಕೊಂಡರು. ಅವರೊಂದಿಗೆ ಆ ದಿವ್ಯಚೇತನ ದೈವಾಧೀನವಾಗಿತ್ತು.

ವೆಂಕಣ್ಣದಾಸರು ಅಪರೋಕ್ಷ ಜ್ಞಾನಿಗಳಾಗಿ ಸಮಾಜದ ಆಧ್ಯಾತ್ಮಿಕ ಚಿಂತನೆಯ ಅರಿವಿಗೂ ಕಾರಣರಾಗಿದ್ದಾರೆ. ಅಷ್ಟೇಅಲ್ಲದೆ ನಮ್ಮ ನಾಡಿನ ಸಂಸ್ಕೃತಿ ಪರಂಪರೆ ಮುಂತಾದವುಗಳ ಅಭಿವೃದ್ಧಿಗೆ ಅಗತ್ಯವಾದ ಒಂದು ಮಹಾನ್ ಪರಂಪರೆಯನ್ನು ಕೊಡುಗೆಯಾಗಿ ನೀಡಿಹೋಗಿದ್ದಾರೆ. ಅದರ ಒಂದು ಕಿರುಪರಿಚಯವನ್ನು ಮುಂದಿನ ಸಂಚಿಕೆಯಲ್ಲಿ ಮಾಡಿಕೊಳ್ಳೋಣ.

ಜಾಹಿರಾತು



**20 X 30 ಅಡಿ 2 BHK**
**ಮನೆ ಮೈಸೂರಿನ ಗೋಕುಲಂ ಬಡಾವಣೆಯಲ್ಲಿ ಬಾಡಿಗೆಗೆ ಲಭ್ಯವಿದೆ. ಪ್ರತ್ಯೇಕ ಪೂಜಾ ಕೊಠಡಿಯನ್ನು ಹೊಂದಿದೆ.**

**ಮೊಬೈಲ್ 9886761824**

# ಅನಂತ ಲಕ್ಷ್ಮಣ ಕನ್ಹೆರೆ

– **ಕೆ.ಎನ್. ಛಾಯಾಪತಿ,** ಮಹಾಸಭಾ. ಉಪಾಧ್ಯಕ್ಷರು



**ನಿನ್ನ ದುಃಖಿತ ವದನ ವೀಕ್ಷಿಸೆ**
**ಸಿಡಿವುದೆಮ್ಮೆಯ ಹೃದಯವು**
**ನಿನ್ನ ಮುಖದಲ್ಲಿ ಗೆಲುವ ತರಲು**
**ನೀರುಗಯ್ಯುವೆ ರಕ್ತವ**

ದೇಶಭಕ್ತಿಯ ಗೀತೆಯೊಂದರಲ್ಲಿ ಬರುವ ಸಾಲುಗಳಿವು. ದಾಸ್ಯ ಸಂಕೋಲೆಗಳಿಂದ ಬಂಧಿತಳಾಗಿರುವ ತಾಯಿ ಭಾರತಿಯ ದುಃಖ ತುಂಬಿದ ಮುಖವನ್ನು ನೋಡಿ ನಿನ್ನ ಮುಖದಲ್ಲಿ ಗೆಲುವು ತರುವೆ, ನಗುವ ತರುವೆ, ಅದಕ್ಕೋಸ್ಕರ ನನ್ನ ಶರೀರದ ರಕ್ತವನ್ನು ನೀರಿನಂತೆ ಚೆಲ್ಲುವೆ, ಕ್ರೂರಿ ಆಂಗ್ಲರ ರುಂಡ ಚೆಂಡಾಡುವೆ, ಅವರನ್ನು ಭಾರತದಿಂದ ಒದ್ದು ಓಡಿಸುವೆ ಎಂಬ ಛಲದಿಂದ ನಮ್ಮ ದೇಶದ ಸ್ವಾತಂತ್ರ್ಯಕ್ಕೋಸ್ಕರ ಹೋರಾಡಿ ಪ್ರಾಣ ತೆತ್ತ ಸಾವಿರಾರು ಕ್ರಾಂತಿಕಾರಿಗಳಲ್ಲಿ ಹೊರಹೊಮ್ಮುತ್ತಿದ್ದ ಭಾವನೆಗಳು ಈ ಮೇಲಿನ ಸಾಲುಗಳು. ಈ ಸ್ವಾತಂತ್ರ್ಯ ಹೋರಾಟದಲ್ಲಿ ವಿಪ್ರವೃಂದದ ಕೊಡುಗೆ ಬಹಳವಿದೆ. ಅಂತಹ ವಿಪ್ರರೀರ್ವರನ್ನು ನೆನೆಯೋಣ. ಅವರಿಗೆ ಕೃತಜ್ಞತೆಯಿಂದ ಗೌರವ ಅರ್ಪಿಸೋಣ.

ಅನಂತ ಲಕ್ಷ್ಮಣ ಕನ್ಹೆರೆ– ಇವರೊಬ್ಬ ದೃಢ ನಿಶ್ಚಯದ ಮತ್ತು ಕೆಚ್ಚೆದೆಯ ಕ್ರಾಂತಿಕಾರಿ.

ಭಾರತೀಯರನ್ನು ನಿಷ್ಪ್ರಯೋಜಕರೆಂದು ಪರಿಗಣಿಸುವವರಿಗೆ ಜನತಾ ನ್ಯಾಯಾಲಯದಲ್ಲಿ ಮರಣದಂಡನೆಯಂತಹ ಕಠಿಣ ಶಿಕ್ಷೆಯಾಗಬೇಕು, ಇದೊಂದು ಶುಭ ಕಾರ್ಯ ಎಂದು ಪರಿಗಣಿಸಬೇಕು ಎಂಬುದೇ ನನ್ನ ಮನದಾಸೆ". ಇದು ಅನಂತ ಲಕ್ಷ್ಮಣ ಕನ್ಹೆರಿಯವರ ಧೀರೋದಾತ್ತ ಕಲ್ಪನೆಯಾಗಿತ್ತು

7 ಜನವರಿ 1892 ರಲ್ಲಿ ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಅಯಾನಿ ಎಂಬ ಪುಟ್ಟ ಹಳ್ಳಿಯಲ್ಲಿ ಚಿತ್‌ಪಾವನ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು.

ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ನಿಜಾಮಬಾದ್ ನಲ್ಲಿ ಪೂರ್ಣಗೊಳಿಸಿದರು. ಅವರ ಇಂಗ್ಲಿಷ್ ಶಿಕ್ಷಣ ಔರಂಗಬಾದ್ ನಲ್ಲಿ ನಡೆಯಿತು. 26 ಆಗಸ್ಟ್ 1906ರಂದು ನಾಸಿಕ್‌ನಲ್ಲಿ ಬಾಲ ಗಂಗಾಧರ ತಿಲಕರ ಭಾಷಣವಿತ್ತು. ಆ ಭಾಷಣವು ನಾಸಿಕ್‌ನ ಯುವಕರಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ಹುಟ್ಟುಹಾಕಿತು.

ಅದನ್ನು ಅನುಸರಿಸಿ ಬ್ರಿಟಿಷ್ ಆಡಳಿತದ ವಿರುದ್ಧ ಭೂಗತ ಚಟುವಟಿಕೆಗಳನ್ನು ನಡೆಸಲು "ಅಭಿನವ ಭಾರತ" ಎಂಬ ರಹಸ್ಯ ಸಂಘಟನೆ ರಚನೆಯಾಯಿತು. ಅದರಲ್ಲಿ ಪ್ರಮುಖ ಪಾತ್ರಧಾರಿಯಾಗಿ ಕನ್ಹೆರೆ ಭಾಗವಹಿಸುತ್ತಿದ್ದರು. ಕ್ರಾಂತಿಕಾರಿಕ ಯೋಜನೆಗಳೆಲ್ಲ ಅಲ್ಲಿಯೇ ರೂಪುಗೊಳ್ಳುತ್ತಿದ್ದವು.

1908ರಲ್ಲಿ ಔರಂಗಾಬಾದಿನಲ್ಲಿ ಕನ್ಹೆರೆ ಅವರು ರಹಸ್ಯವಾಗಿ ಕ್ರಾಂತಿಕಾರಿಗಳನ್ನು ಭೇಟಿಯಾದರು. ಅವರೊಂದಿಗೆ ಕ್ರಾಂತಿಕಾರಿ ಚಟುವಟಿಕೆಗಳನ್ನು ನಡೆಸುವುದರ ಬಗ್ಗೆ ಶಿಕ್ಷಣವನ್ನು ಪಡೆದರು. ನಾಸಿಕ್ ಸೀಕ್ರೆಟ್ ಸೊಸೈಟಿಗೆ ಶಸ್ತ್ರಾಸ್ತ್ರ ಖರೀದಿಸಲು ಬಂದಿದ್ದ ಗನುವೈದ್ಯ ಎಂಬ ಕ್ರಾಂತಿಕಾರಿ ಒಬ್ಬನ ಪರಿಚಯವಾಯಿತು.

ನಾಸಿಕ್ ಜಿಲ್ಲೆಯ ಕಲೆಕ್ಟರ್ ಆಗಿದ್ದ ಜಾಕ್ಸನ್ ಎಂಬ ಬ್ರಿಟಿಷ್ ಅಧಿಕಾರಿ ಭಾರತೀಯರನ್ನು ಬಹಳ ಕ್ರೂರವಾಗಿ ನಡೆಸಿಕೊಳ್ಳುತ್ತಿದ್ದ. ಇದೆಲ್ಲವನ್ನು ಗಮನಿಸುತ್ತಿದ್ದ ಕನ್ಹೆರೆ ಜಾಕ್ಸನ್‌ನನ್ನು ಯಮಲೋಕಕ್ಕೆ ಅಟ್ಟಬೇಕೆಂದು ತೀರ್ಮಾನಿಸಿದ.

21 ಡಿಸೆಂಬರ್ 1909ರಲ್ಲಿ ನಾಸಿಕದ ವಿಜಯಾನಂದ ಥಿಯೇಟರಿನಲ್ಲಿ ಕಿರ್ಲೋಸ್ಕರ್ ನಾಟಕ ಮಂಡಳಿಯು "ಶಾರದಾ" ಎಂಬ ನಾಟಕ ಪ್ರದರ್ಶನವನ್ನು ಏರ್ಪಡಿಸಿತ್ತು.ಅದಕ್ಕೆ ಕಲೆಕ್ಟರ್ ಜಾಕ್ಸನ್‌ಗೂ ಆಮಂತ್ರಣವಿತ್ತು. ಅಲ್ಲಿ ಅವನ ಹತ್ಯೆ ಮಾಡಬೇಕೆಂದು ಯೋಜನೆಯಾಯಿತು. ಅನಂತ ಲಕ್ಷ್ಮಣ ಕನ್ಹೆರೆ ನೇತೃತ್ವದಲ್ಲಿ ಕೃಷ್ಣೋಜಿ ಗೋಪಾಲ ಕರ್ವೆ ಮತ್ತು ವಿನಾಯಕ ದಾಮೋದರ ದೇಶಪಾಂಡೆ ಮೂವರ ತಂಡ ವಿಜಯಾನಂದ ಥಿಯೇಟರಿನ ಹತ್ತಿರ ಕಾದು ಕುಳಿತಿತ್ತು. ಕಲೆಕ್ಟರ್ ಜಾಕ್ಸನ್ ನ ಆಗಮನವಾಯಿತು.

ವಿಜಯಾನಂದ ಥಿಯೇಟರಿಗೆ ಪ್ರವೇಶಿಸುತ್ತಿದ್ದಾಗ ಅನಂತ ಲಕ್ಷ್ಮಣ ಕನ್ಹೆರೆ ತನ್ನ ರಿವಾಲ್ವರಿನಿಂದ ನಾಲ್ಕು ಗುಂಡು ಹಾರಿಸಿದ. ಜಾಕ್ಸನ್ ನೆಲಕ್ಕುರಳಿ ಸ್ಥಳದಲ್ಲೇ ಪ್ರಾಣಬಿಟ್ಟ. ಈ ಹತ್ಯೆಯು ಜನರಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ಕೆರಳಿಸಿತು. ಕನ್ಹೆರೆ, ಗೋಪಾಲಕರ್ವೆ, ರಾಮಚಂದ್ರ ದೇಶಪಾಂಡೆ ಅವರು ಬಂದಿಗಳಾದರು.

ಈ ಕೊಲೆಯು ನಾಸಿಕ್ ಮತ್ತು ಮಹಾರಾಷ್ಟ್ರದ ಭಾರತೀಯ ಕ್ರಾಂತಿಕಾರಿ ಚಳುವಳಿಯ ಇತಿಹಾಸದಲ್ಲಿ ಒಂದು ಪ್ರಮುಖ ಘಟನೆಯಾಯಿತು.

ಕನ್ಹೆರಿಗೆ ಆಗ 18 ವರ್ಷ ವಯಸ್ಸು. ಕೋರ್ಟಿನ ವಿಚಾರಣೆಯ ವೇಳೆ ತನ್ನ ತಪ್ಪನ್ನು ಒಪ್ಪಿಕೊಂಡನು. 29 ಮಾರ್ಚ್ 1910 ರಂದು ಬಾಂಬೆ ಮುಖ್ಯ ನ್ಯಾಯಾಧೀಶರು ಮೂವರೂ ತಪ್ಪಿತಸ್ಥರೆಂದು ಘೋಷಿಸಿದರು.

19 ಏಪ್ರಿಲ್ 1910 ರಂದು ಕನ್ಹೆರಿ ಜೊತೆಗೆ ಕರ್ವೆ ಮತ್ತು ದೇಶಪಾಂಡೆಯವರನ್ನು ಥಾಣೆ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ಆಗ ಮೂವರು ಶಾಂತಚಿತ್ತರಾಗಿದ್ದರು ಮತ್ತು ಧೈರ್ಯದಿಂದಿದ್ದರು. ಮರಣದಂಡನೆ ಸಮಯದಲ್ಲಿ ಈ ಮೂವರ ಸಂಬಂಧಿಕರು ಯಾರೂ ಇರಲಿಲ್ಲ. ಜೈಲು ಅಧಿಕಾರಿಗಳೇ ಇವರ ದೇಹವನ್ನು ಸುಟ್ಟು ಹಾಕಿದರು. ಮತ್ತು ಬೂದಿಯನ್ನು ಸಮುದ್ರದಲ್ಲಿ ಬಿಸಾಡಿದರು.

ಎಲ್ಲರಂತೆ ತನ್ನ ಮುಂದಿನ ಜೀವನದ ಕನಸು ಕಟ್ಟಿಕೊಂಡು ಬಾಳಬೇಕಾದ 18 ವಯಸ್ಸಿನ ಆ ಯುವಕ ಕನ್ಹೆರೆ ಭಾರತಾಂಬೆಯ ಸ್ವಾತಂತ್ರ್ಯಕ್ಕಾಗಿ ತನ್ನ ಪ್ರಾಣವನ್ನೇ ತ್ಯಾಗ ಮಾಡಿದ. ನಾವು ಇಂದು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆ.

**ಪ್ರಾಣತ್ಯಾಗ ಮಾಡಿದ ಹುತಾತ್ಮ ಅನಂತ ಲಕ್ಷ್ಮಣ ಕನ್ಹೆರೆ ಅವರಿಗೆ ನಮ್ಮ ನಮನಗಳು.**

**ಅವರಿಗೊಂದು ಸೆಲ್ಯೂಟ್.**

**"ಭಾರತ್ ಮಾತಾಕೀ ಜೈ"**



ಹಿಂದಿನ ಸಂಚಿಕೆಯಿಂದ

# ದೈವ ಮತ್ತು ಪುರುಷ ಪ್ರಯತ್ನ – 18

## ಕೃಪೆ: ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು

**– ಡಾ. ಕೆ. ಎಲ್ ಶಂಕರನಾರಾಯಣ ಜೋಯ್ಸ್**

ವಾಸ್ತುವೆಂಬ ಪದವು ಪ್ರಧಾನವಾಗಿ ವಾಸದ ಭೂಮಿಯನ್ನೇ ತಿಳಿಸುತ್ತದೆ. ವಾಸದ ಭೂಮಿಯ ಪ್ರಭಾವವು ಹಿರಿದಾದದ್ದು. ಅದರ ಅನಂತರದಲ್ಲಿ ಕಟ್ಟುವ ರಚನೆಗೆ ಬಳಸುವ ವಸ್ತುಗಳು ಮೊದಲಾದವುಗಳ ಪ್ರಭಾವ. ಆದ್ದರಿಂದ ಗೃಹರಚನೆಯ ಕಾರ್ಯದಲ್ಲಿ ಪ್ರವೃತ್ತನಾಗುವವನು ಮೊದಲು ತನ್ನ ವರ್ಣಕ್ಕೆ ಅನುಗುಣವಾದ ಭೂಮಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಅದಕ್ಕಾಗಿ ಒಬ್ಬ ಆಚಾರ್ಯನ ಸಹಕಾರ ಅಗತ್ಯವೆಂಬುದನ್ನು ಈ ಹಿಂದಿನ ಲೇಖನದಲ್ಲಿ ಮನಗಂಡೆವು.

ಭೂಮಿಯಲ್ಲಿ ಸೃಷ್ಟಿಸಹಜವಾಗಿ ಅನೇಕ ಧರ್ಮಗಳಿವೆ. ಎಲ್ಲ ಜೀವಕೋಟಿಗಳಿಗೂ ಅದು ಅವಲಂಬನವನ್ನು ನೀಡಬೇಕು. ಅದಕ್ಕಾಗಿ ಅನೇಕ ಧರ್ಮಗಳು. ಅಂತಹ ವೈಚಿತ್ರ್ಯಯುತವಾದ ಭೂಮಿಗಳಲ್ಲಿ ಮಾನವಯೋಗ್ಯವಾದ ಭೂಮಿಯೂ ಒಂದಾಗಿದೆ. ಅಂತಹ ಮಾನವಯೋಗ್ಯವಾದ ಭೂಮಿಯನ್ನು ಅದರ ಹೊರಲಕ್ಷಣಗಳಿಂದಲೂ ಗುರುತಿಸಬಹುದು. ಸಾಮಾನ್ಯವಾಗಿ ಹೊರಲಕ್ಷಣಗಳು ಒಳಧರ್ಮವನ್ನು ಪ್ರತಿನಿಧಿಸುತ್ತವೆ. ಹಣ್ಣಿನ ಹೊರಸಿಪ್ಪೆ ಹಣ್ಣಿನ ಒಳಗಿನ ಪರಿಪಾಕವನ್ನು ವ್ಯಕ್ತಪಡಿಸುತ್ತದೆ. ಸಿಪ್ಪೆಯ ಬಣ್ಣ ಹೊಳಪುಗಳನ್ನು ನೋಡಿ ಒಳಗೆ ಹುಳಿ ರಸವೇ, ಸಿಹಿಯೇ, ಒಗರೇ ಎಂದು ಮೊದಲಾಗಿ ಊಹಿಸಬಹುದಾಗಿದೆ. ಆದರೆ ಕೆಲವೊಮ್ಮೆ ಹೊರಗಿನ ಲಕ್ಷಣಗಳು ಆಭಾಸಮಾತ್ರವಾಗಿದ್ದು ಅದರಿಂದ ನಿಜವನ್ನು ಪತ್ತೆ ಹಚ್ಚುವುದು ಸಾಧ್ಯವಾಗದೇ ಹೋಗಬಹುದು. ಅಂತಹ ಸಂದರ್ಭದಲ್ಲಿ ಹೊರಲಕ್ಷಣಗಳು ಹೇಗೇ ಇದ್ದರೂ ಒಳಧರ್ಮವನ್ನು ವಿದ್ಯಾಚಕ್ಷುವಿನಿಂದ ಪರಿಶೀಲಿಸುವುದು ಅಗತ್ಯವಾಗಿರುತ್ತದೆ. ಆದ್ದರಿಂದ ಭೂಮಿಯನ್ನು ಆಯ್ಕೆ ಮಾಡುವಾಗ ಹೊರಲಕ್ಷಣಗಳಿಂದಲೂ ಪ್ರಯೋಗಗಳಿಂದಲೂ ನಿರ್ಣಯಿಸುವುದು ಒಂದು ವಿಧವಾದರೆ ಒಳಧರ್ಮಗಳನ್ನು ವೇದಚಕ್ಷುಷ್ಯಾದ ಜ್ಯೌತಿಷದಿಂದ ಪರಿಶೀಲಿಸುವುದಿದೆ.

ಮಾನವಯೋಗ್ಯವಾದ ಭೂಮಿಯ ಬಗ್ಗೆ ನಿರೂಪಿಸುವಾಗ ಮಾನವ ಸಾಮಾನ್ಯನಿಗೆ ಯೋಗ್ಯವಾದ ಭೂಮಿಯೆಂಬುದಾಗಿಯೂ ಬ್ರಾಹ್ಮಣಾದಿವರ್ಣಗಳಿಗೆ ಯೋಗ್ಯವಾದ ಭೂಮಿಯೆಂಬುದಾಗಿಯೂ ಎರಡು ವಿಭಾಗಗಳನ್ನು ಮಾಡಿರುವುದುಂಟು. ಅದರಲ್ಲಿ ಮನುಷ್ಯಸಾಮಾನ್ಯನಿಗೆ ವಾಸಯೋಗ್ಯವಾದ ಭೂಮಿಯ ಲಕ್ಷಣಗಳು ಹೀಗಿವೆ. ಆ ಭೂಮಿಯು ಮನುಷ್ಯನಿಗೂ ಗೋವುಗಳಿಗೂ ಪ್ರಿಯವೆನ್ನಿಸುವ ಭೂಮಿಯಾಗಿರಬೇಕು. ಸ್ವಸ್ಥನಾದ ಮನುಷ್ಯನಿಗೆ ಹುಟ್ಟುವ ಸಹಜವಾದ ಸಂಚಾರಪ್ರವೃತ್ತಿಯು ಯಾವ ಭೂಮಿಯಲ್ಲೋ ಆ ಭೂಮಿಯು ಮನುಷ್ಯೋಚಿತವಾದದ್ದು ಎಂದು ನಿರ್ಣಯಿಸಬಹುದು. ಆದರೆ ಒಬ್ಬ ಪ್ರಾಚೀನ ಕರ್ಮಗಳ ಕಾರಣಗಳಿಂದ ರಾಗದ್ವೇಷಕ್ಕೆ ಒಳಪಟ್ಟವನಾದರೆ ಆತನ ಬುದ್ಧಿಯು ಇಂತಹ ಸತ್ಯಗಳನ್ನು ನಿರ್ಣಯಿಸಲಾರದು. ಆಗ ಇತರ ಮಾನದಂಡಗಳಿಂದ ನಿರ್ಣಯಿಸಬೇಕಾಗುತ್ತದೆ. ಗೋವು ಸಹಜವಾಗಿ ಸಂಚರಿಸುವ ಪ್ರದೇಶವು ಮಾನವ ವಾಸಯೋಗ್ಯವಾದದ್ದು. ಎಲ್ಲ ದೇವತಾಸನ್ನಿಧಿಗಳೂ ಅಭಿವ್ಯಕ್ತವಾಗಲು ಯೋಗ್ಯವಾದ ಒಡಲುಳ್ಳ ಜೀವಿ ಗೋವು. ಯಜ್ಞೋಪಯುಕ್ತವಾದ ಹಾಲು, ಮೊಸರು, ಬೆಣ್ಣೆ, ತುಪ್ಪ ಮೊದಲಾಗಿ ಹಲವು ಶ್ರೇಷ್ಠವಾದ ವಸ್ತುಗಳನ್ನು ಕರುಣಿಸುವುದು ಮಾತ್ರವಲ್ಲ, ತನ್ನ ಸನ್ನಿಧಿಯಿಂದಲೇ ಪಾವಿತ್ರ್ಯವನ್ನು ಅನುಗ್ರಹಿಸುವ ಪ್ರಾಣಿವಿಶೇಷ ಗೋವು. 'ಯಾವತೀರ್ವೈ ದೇವತಾಃ ತಾಃ ಸರ್ವಾವೇದವಿಧಿಬ್ರಾಹ್ಮಣೇ ವಸಂತಿ' ಎಂದು ಮೊದಲಾಗಿ ಯಾವರೀತಿ ಒಬ್ಬ ಬ್ರಾಹ್ಮಣನ ಒಡಲಿನಲ್ಲಿ ಎಲ್ಲ ದೇವತೆಗಳು ನೆಲೆಸಿರುತ್ತವೆಯೆಂದು ಹೇಳುವುದುಂಟೋ ಅದೇ ರೀತಿ ಒಂದು ಗೋವಿನ ಶರೀರದಲ್ಲಿ ಪಾದಾದಿಶಿರೋಂತವಾಗಿ ಮೂವತ್ತಮೂರು ಕೋಟಿ ದೇವತೆಗಳು ನೆಲೆಸಿರುತ್ತವೆಯೆಂದು ಅದರ ತತ್ತ್ವಾರ್ಥವನ್ನು ಕಂಡವರ ನಿರೂಪಣೆಯಾಗಿದೆ. ದೇವತಾಪ್ರಸನ್ನತೆಯನ್ನು ಸಂಪಾದಿಸುವ ವಿಷಯದಲ್ಲಿ ಮಾನವದೇಹವು ಹೇಗೆ ಒಂದು ದಿವ್ಯವಾದ ಸಾಧನವೋ ಅದೇ ರೀತಿ ಗೋವೂ ಸಹ. ಈ ಹಿನ್ನೆಲೆಯಲ್ಲಿ ಗೋವು ಸಂಚರಿಸುವ ಜಗವು ಮನುಷ್ಯನ ಬಾಳಾಟಕ್ಕೆ ಯೋಗ್ಯವೆಂದು ಗುರುತಿಸಿದ್ದಾರೆ.

ಒಂದು ವಿಸ್ತಾರವಾದ ಭೂಪ್ರದೇಶದಲ್ಲಿ ಗೋವುಗಳನ್ನು ಮೇಯಲು ಬಿಟ್ಟರೆ ಅವುಗಳು ತಾವಾಗಿಯೇ ಒಂದು ನಿರ್ದಿಷ್ಟ ಜಾಗವನ್ನು ಆಯ್ದುಕೊಳ್ಳುತ್ತವೆ. ಅದರ ದೇಹದ ಉಳಿವಿಗೆ ಸಹಕಾರಿಯಾದ ಹುಲ್ಲು ನೀರು ಇರುವ ಜಾಗವನ್ನು ತಾನೇ ಅದು ಆರಿಸಿಕೊಳ್ಳಬೇಕು? ಅದಕ್ಕಿಂತಲೂ ಹೆಚ್ಚಾದ ಇನ್ನಾವ ವೈಶಿಷ್ಟ್ಯ ಎನ್ನಿಸಬಹುದು. ಹುಲ್ಲು ನೀರು ಹೇರಳವಾಗಿರುವ ಜಾಗದಲ್ಲೂ ಒಂದು ಪ್ರಾಶಸ್ತ್ಯವಿರುತ್ತದೆ–ಯೆಂಬುದನ್ನು ಮರೆಯಬಾರದು. ಅದರ ಜೊತೆಗೆ ಹೊಟ್ಟೆ ತುಂಬಿಸಿಕೊಂಡ ಗೋವು ಸ್ವೇಚ್ಛೆಯಾಗಿ ಕೆಲವು ಜಾಗಗಳಲ್ಲಿ ವಿಶ್ರಾಂತಿ ಮಾಡುತ್ತವೆ. ಆ ಭಾಗವೂ ಸಹ ಮಾನವವಾಸಯೋಗ್ಯವಾದದ್ದು. ಗೋವು ವಾಸ ಮಾಡುವ ಕೊಟ್ಟಿಗೆಯು ಸಾಧಕರು ಧ್ಯಾನ ಮಾಡಲು ಯೋಗ್ಯವಾದ ಭಾಗವೆಂದು ಯೋಗಶಾಸ್ತ್ರವು ತಿಳಿಸುತ್ತದೆಯೆಂಬುದನ್ನು ಜೊತೆಗೆ ನೆನಪಿಸಿಕೊಳ್ಳಬಹುದಾಗಿದೆ. ಧರ್ಮವು ನೆಲೆಸಿರುವ ಭೂಮಿ ಯಾವುದು? ಎಂಬ ಬಗ್ಗೆ ಮಹರ್ಷಿಗಳಾದ ಯಾಜ್ಞವಲ್ಕ್ಯರು 'ಯತ್ರ

ದೇಶೇಮೃಗಃ ಕೃಷ್ಣಃ ತತ್ರ ಧರ್ಮಾನ್ನಿಬೋಧತ' ಯಾವ ದೇಶದಲ್ಲಿ ಕೃಷ್ಣಮೃಗವು ವಾಸಮಾಡುವುದೋ ಅಲ್ಲಿ ಧರ್ಮನೆಲೆಸಿದೆಯೆಂದು ತಿಳಿಯಿರಿ. ಎಂದು ನಿರ್ದೇಶಿಸಿರುತ್ತಾರೆಂಬುದೂ ಇಲ್ಲಿ ಮನನೀಯವಾಗಿದೆ.

ಇದಲ್ಲದೆ ಇನ್ನೂ ಹಲವು ಹೊರಲಕ್ಷಣಗಳನ್ನು ಭಾವಿಸಿ ಭೂನಿರ್ಣಯವನ್ನು ಮಾಡುವುದುಂಟು. ಮಾನವನ ಬಳಕೆಗೆ ಯೋಗ್ಯವಾದ ಫಲಪುಷ್ಪಗಳು ಎಲ್ಲಿ ಸಹಜವಾಗಿ ಗೋಚರಿಸುವುದೋ ಆ ಭೂಮಿ ಮನುಷ್ಯವಾಸಕ್ಕೆ ಯೋಗ್ಯವಾದದ್ದು. ಇದೇ ರೀತಿ ಆಲ, ಗೋಳಿ ಮೊದಲಾದ ಕ್ಷೀರವೃಕ್ಷಗಳು ಬೆಳೆಯುವ ಭೂಮಿಯೂ ಪ್ರಶಸ್ತವೇ ಆಗಿದೆ.

ಪೂರ್ವದಿಕ್ಕಿಗೆ ಇಳಿಜಾರಾದ ಭೂಮಿ, ಎಂದರೆ ಬಿದ್ದ ಮಳೆಯ ನೀರು ಪೂರ್ವಾಭಿಮುಖವಾಗಿ ಹರಿದುಹೋಗುವಂತಿದ್ದರೆ ಆ ಭೂಮಿ ಪ್ರಶಸ್ತವಾದದ್ದು. ದಿಕ್ಕಾಗಲೀ ಇಳಿಜಾರಾಗಲೀ ಹೇಗೆ ವಿಶೇಷ ಪ್ರಭಾವವನ್ನು ಬೀರಬಲ್ಲವು? ಎಂಬ ಪ್ರಶ್ನೆ ಉದ್ಭವಿಸಬಹುದು. ಸೃಷ್ಟಿ ಆರಂಭವಾದೊಡನೆ ಕಾಲ ಮತ್ತು ದೇಶವೆಂಬುದೂ ಆರಂಭವಾಗಿದೆ. ದೇಶದ ಜೊತೆಗೆ ಆರಂಭವಾಗುವ ಇನ್ನೊಂದು ವ್ಯವಹಾರ ದಿಕ್ ಎಂಬುದು. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಎಂಬುದಾಗಿ ನಾಲ್ಕು ಪ್ರಧಾನ ದಿಕ್ಕುಗಳೂ, ಆಗ್ನೇಯ, ನೈಋತ್ಯ, ವಾಯುವ್ಯ ಈಶಾನ್ಯಗಳೆಂದು ನಾಲ್ಕು ವಿದಿಕ್ಕುಗಳೂ ಉಂಟು. ಊರ್ಧ್ವಂ ಅಧಃ ಎಂಬುದಾಗಿ ಇನ್ನೆರಡು ದಿಕ್ಕುಗಳೂ ಸೇರಿ ದಶದಿಕ್ಕುಗಳಾಗುತ್ತವೆ. ಈ ಒಂದೊಂದು ದಿಕ್ಕೂ ಸಹ ಒಂದೊಂದು ದೇವತಾಶಕ್ತಿಯಿಂದ ಕೂಡಿರುತ್ತದೆ. ಪೂರ್ವದಿಂದ ಆರಂಭಿಸಿ ಈಶಾನ್ಯದವರೆಗೆ ಇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ, ವಾಯು, ಕುಬೇರ, ಈಶಾನ ಎಂಬ ದಿಕ್ ದೇವತೆಗಳಿಂದ ಅಧಿಷ್ಠಿತವಾಗಿವೆ. ಈ ಒಂದೊಂದು ದೇವತಾಶಕ್ತಿಯೂ ಸಹ ತನ್ನ ಸ್ವರೂಪ–ಸ್ವಭಾವಗಳಿಗೆ ತಕ್ಕಂತೆ ರಕ್ಷಣೆ ಮಾಡುತ್ತದೆಯಾದ್ದರಿಂದ ದಿಕ್ ಪಾಲಕರು ಎಂಬ ಹೆಸರು ಬಂದಿದೆ. ಆಯಾ ದಿಕ್ ಪಾಲಕರು ತಮಗೆ ಅಭಿಮುಖರಾದವರಲ್ಲಿ ಕೆಲವು ಧರ್ಮಗಳನ್ನು ಬೆಳೆಸುತ್ತಾರೆ. ಉದಾಹರಣೆಗೆ ಪೂರ್ವದಿಕ್ಕಿಗೆ ಅಧಿಪತಿ ಇಂದ್ರ. ಇಂದ್ರ ಯಾರು? ದೇವತೆಗಳ ರಾಜ. ಸ್ವರ್ಗಸಾಮ್ರಾಜ್ಯದ ಅಧಿಪತಿ. ಎಂದರೆ ಎಲ್ಲ ಸುಖಭೋಗಗಳಿಗೆ ಬೇಕಾದ ಐಶ್ವರ್ಯವನ್ನು ಹೊಂದಿರುವವನು. ಈ ಐಶ್ವರ್ಯವನ್ನು ಅನುಭವಿಸಲು ಬೇಕಾದ ಇಂದ್ರಿಯಸಂಪತ್ತನ್ನೂ ಹೊಂದಿದ್ದಾನೆ. ಪ್ರಶಸ್ತವಾದ ಇಂದ್ರಿಯವುಳ್ಳವನಾದ್ದರಿಂದ ಇಂದ್ರ. ಇವನ ಪ್ರಧಾನ ಕಾರ್ಯವಾದರೂ ಏನು? ದೇವತೆಗಳಿಗೆ ದೈತ್ಯದಾನವರಿಂದ ಬರುವ ಆಪತ್ತನ್ನು ಪರಿಹರಿಸುವುದಾಗಿದೆ. ಎಂದರೆ ಸ್ವರ್ಗಲೋಕದಲ್ಲಿ ಇರಬೇಕಾದ ಧರ್ಮಕ್ಕೆ ಚ್ಯುತಿ ಕಂಡು ಬಂದರೆ ಅದನ್ನು ದೂರಪಡಿಸುವವನು. ಕ್ಷಾತ್ರಸಂಪತ್ತು ಉಳ್ಳವನು. ಕ್ಷತ್ರಿಯೋಚಿತವಾದ ಧೈರ್ಯ, ಪರಾಕ್ರಮ, ಸಾಹಸಪ್ರವೃತ್ತಿಗಳು ಮೈಗೂಡಿರುತ್ತವೆ. ತನ್ನ ಕ್ಷಾತ್ರವೃತ್ತಿಯನ್ನು ನಿರ್ವಹಿಸಲು ಅನುಕೂಲವಾದ ವಜ್ರಾಯುಧವೇ ಮೊದಲಾದ ಆಯುಧಗಳಿಂದ ಕೂಡಿದ್ದಾನೆ. ಧರ್ಮಾಧರ್ಮಗಳನ್ನು ನಿರ್ಣಯಿಸಿ ಕಾರ್ಯ ಕೈಗೊಳ್ಳಲು ಸಹಕಾರಿಯಾದ ಮಂತ್ರಿ–ಬೃಹಸ್ಪತಿಯ ಮಾರ್ಗದರ್ಶನಕ್ಕೆ ಒಳಪಟ್ಟಿರುತ್ತಾನೆ. ಇದನ್ನು ಸಂಕ್ಷೇಪವಾಗಿ ಅವನ ವೈಶಿಷ್ಟ್ಯವೆಂದು ಭಾವಿಸುವುದಾದರೆ ಅವನಿಗೆ ಅಭಿಮುಖರಾದವರಿಗೆ ಈ ಕೆಲವು ಧರ್ಮಗಳನ್ನು ಅವರವರ ಯೋಗ್ಯತೆಗೆ ತಕ್ಕಂತೆ ಯಥಾಸಂಭವವಾಗಿ ವೃದ್ಧಿಪಡಿಸುತ್ತಾನೆ. ಎಂದರೆ ಆರೋಗ್ಯ, ಐಶ್ವರ್ಯ, ಸುಖ, ಧರ್ಮಮಾರ್ಗಪ್ರವೃತ್ತಿ, ಧರ್ಮರಕ್ಷಣೆಗೆ ಬೇಕಾದ ಉತ್ಸಾಹ, ಧೈರ್ಯ, ಸಾಹಸ, ವಿವೇಕ ಮೊದಲಾದ ನಡೆಗಳನ್ನು ಬೆಳೆಸುತ್ತಾನೆ. ಇವು ಮಾನವರಿಗೆ ಅಪೇಕ್ಷಿತವಾದ ಸದ್ಧರ್ಮಗಳು. ಅವನದಾದ ಜನ್ಮಾಂತರಾರ್ಜಿತವಾದ ಕರ್ಮಗಳು ಈ ಸದ್ಧರ್ಮಗಳ ಬೆಳವಣಿಗೆಗೆ ಅನುಕೂಲವಾಗಿರಲೂಬಹುದು,. ಪ್ರತಿಕೂಲವಾಗಿರಲೂಬಹುದು. ಆದ್ದರಿಂದ ಎಲ್ಲರಿಗೂ ಏಕರೂಪವಾದ ಪ್ರಯೋಜನವುಂಟಾಗಲಾರದು. ಪ್ರಯೋಜನವು ಎಷ್ಟೇ ಆಗಿರಲಿ, ಈ ದಿಶೆಯಲ್ಲಿ ನಮ್ಮ ಪ್ರಯಾಣ ಸಾಗಬೇಕೆಂಬ ಸದಾಶಯವು ನಮ್ಮದಾಗಿರಬೇಕಷ್ಟೆ. ಅದಕ್ಕೆ ತಕ್ಕಂತೆ ಎಂದಾದರೂ ಸದ್ಧರ್ಮಗಳು ಬೆಳೆಯಲಿ, ಎಷ್ಟು ಬೆಳೆದರೂ ಸಂತೋಷವೆಂಬ ಮನಸ್ಸಿನಿಂದ ಕೆಲವು ಆದರ್ಶಗಳನ್ನು ಅನುಸರಿಸುವಂತೆ ಆದೇಶಿಸಿದ್ದಾರೆ.

ಭೂಮಿಯು ಪೂರ್ವಕ್ಕೆ ಇಳಿಜಾರಾಗಿದೆ ಎಂದಾಗ ಆ ಭೂಮಿಯಲ್ಲಿ ಬೀಳುವ ಮಳೆಯು ಪೂರ್ವಾಭಿಮುಖವಾಗಿ ಪ್ರವಹಿಸುತ್ತದೆಯಷ್ಟೆ. ಈ ಭೂಮಿಯಲ್ಲಿ ರಚಿಸಿದ ಗೃಹದಿಂದಲೂ ಪೂರ್ವಾಭಿಮುಖವಾಗಿಯೇ ಹೊರಗೆ ಹೋಗಬೇಕೆಂಬುದು ವಾಸ್ತುಶಾಸ್ತ್ರ. ಎಂದರೆ ಆ ಗೃಹಕ್ಕೆ ಪೂರ್ವದ್ವಾರವಿರಬೇಕು. ಈ ಪೂರ್ವದ್ವಾರದಿಂದ ಹೊರಡುವ ಒಬ್ಬ ವ್ಯಕ್ತಿಯು ಈ ದಿಕ್ಕಿನ ಅಧಿಪತಿಯಾದ ಇಂದ್ರನಿಗೆ ಅಭಿಮುಖವಾಗಿ ಹೊರಡುತ್ತಾನೆ. ಇಂದ್ರನಿಗೆ ಅಭಿಮುಖವಾಗಿ ಪ್ರವೃತ್ತಿಯುಂಟಾದರೆ ಅವನ ಅನುಗ್ರಹರೂಪವಾಗಿ ಐಶ್ವರ್ಯ ಆರೋಗ್ಯ ಸುಖ ಧರ್ಮಪ್ರವೃತ್ತಿ ಮೊದಲಾದ ಲಾಭಗಳುಂಟಾಗುವುವು. ಒಬ್ಬ ತನ್ನ ಮನೆಯಿಂದ ಹೊರಟಾಗ ಆರೋಗ್ಯ ಐಶ್ವರ್ಯ, ಸುಖ, ಧರ್ಮ ಇವುಗಳನ್ನು ರಕ್ಷಿಸಿಕೊಳ್ಳುವ ಬಗ್ಗೆ ವಿವೇಕದಿಂದಿರಬೇಕಷ್ಟೆ. ಅದಕ್ಕಾಗಿ ಉತ್ಸಾಹ, ಧೈರ್ಯ, ಪರಾಕ್ರಮಗಳೂ ಜೊತೆಗೂಡಿರಬೇಕು. ತನ್ನ ತನಕ್ಕೆ ಚ್ಯುತಿಯಾಗದಂತೆ ಸಂರಕ್ಷಿಸಿಕೊಳ್ಳುವ ಕ್ಷಾತ್ರಧರ್ಮವಿರಬೇಕು. ಹಾಗಿದ್ದವನು ತನ್ನ ಗೃಹವನ್ನು ಬಿಟ್ಟು ಎಷ್ಟು ದೂರದವರೆಗೆ ಸಂಚರಿಸಿದರೂ ತನ್ನತನಕ್ಕೆ ಘಾತವಾಗದಂತೆ ರಕ್ಷಿಸಿಕೊಳ್ಳುತ್ತಾ ನಿರ್ವಿಕಾರವಾಗಿದ್ದು ತನ್ನ ಮನೆಗೆ ಮತ್ತೆ ಬಂದು ಸೇರಬಹುದು. ಈ ನಡೆ ಸಂಸಾರಿಯಾದವನಿಗೆ ಅವಶ್ಯವಾದದ್ದು. ಸಂಸಾರಕ್ಕೆ ಪ್ರವೃತ್ತನಾದ ಜೀವನು ಅಲ್ಲಿಯ ಸುಖಭೋಗಗಳನ್ನು ಅನುಭವಿಸುವಾಗ ತನ್ನತನಕ್ಕೆ ವಿರೋಧಬಾರದಂತೆ ಎಚ್ಚರಿಕೆ ವಹಿಸುವನಾದರೆ ಅವನು ಹೊರಟ

ಜಾಗಕ್ಕೆ ಹಿಂದಿರುಗಬಹುದಷ್ಟೆ. ಹಾಗೆ ಈ ಸದ್ಧರ್ಮಗಳನ್ನು ಬೆಳೆಸಿಕೊಳ್ಳಲು ಅವನ ಮನವು ಅವಲಂಬನವನ್ನು ನೀಡುವಂತೆ ಮನೆಯೂ ಸಹ ಅವಲಂಬನವನ್ನು ನಿಡಬೇಕು. ಅಂತಹ ಮನೆಗೆ ಹೊಂದುವ ಭೂಮಿಯಿರಬೇಕು. ಈ ಆದರ್ಶವನ್ನು ಅನುಸರಿಸಿ ಪೂರ್ವಕ್ಕೆ ಇಳಿಜಾರಾದ ಭೂಮಿಯನ್ನು ಶ್ರೇಷ್ಠವೆಂದಿದ್ದಾರೆ. ಇದೇ ರೀತಿ ಆಯಾ ವರ್ಣಾನುಗುಣವಾಗಿ ಉತ್ತರ ದಕ್ಷಿಣ ಪಶ್ಚಿಮಗಳಲ್ಲಿ ಇಳಿಜಾರಿರುವ ಭೂಮಿಯನ್ನೂ ಶ್ರೇಷ್ಠವೆಂದು ಭಾವಿಸಿದ್ದಾರೆ.

ವಾಸಸ್ಥಾನದಲ್ಲಿ ವಿಪುಲವಾಗಿ ನೀರಿನ ಸೌಲಭ್ಯವಿರಬೇಕು. ನೀರು ಜೀವ ಮಾತ್ರಕ್ಕೆ ಬಹುಮುಖ್ಯವಾದದ್ದು. ಮಾನವನ ವಿಷಯದಲ್ಲಂತೂ ಹೇಳಲೇ ಬೇಕಾಗಿಲ್ಲ. ಮಾನವನ ದೇಹವನ್ನೇ ಪರಿಶೀಲಿಸಿದರೂ ಎಲ್ಲಕ್ಕಿಂತ ಹೆಚ್ಚು ಭಾಗ ಇರುವುದು ನೀರೇ ಆಗಿದೆ. ದೇಹದ ರಕ್ಷಣೆ ಪೋಷಣೆಗಳು ನೀರಿನಿಂದಲೇ ಸಾಧ್ಯ. ಸೃಷ್ಟಿಯಲ್ಲಿರುವ ಇತರ ಜೀವಿಗಳಿಗಿಂತಲೂ ಮಿಗಿಲಾಗಿ ಸಾತ್ತ್ವಿಕನಾಗಿದ್ದಾನೆ – ಮಾನವ. ಶ್ಲೇಷ್ಮವೆಂಬ ಧಾತುವು ಜಲರೂಪವಾದ ಭೂತದಿಂದ ಏರ್ಪಡುತ್ತದೆ. ಶ್ಲೇಷ್ಮವು ಧೃತಿ, ಕ್ಷಮಾ, ಸ್ಥಿರತೆ ಮೊದಲಾದ ಸಾತ್ತ್ವಿಕ ಧರ್ಮಗಳನ್ನು ನೀಡುವ ಧಾತುವಾಗಿದೆ. ಜಲದಿಂದ ಶ್ಲೇಷ್ಮಧಾತುವಿನ ಪುಷ್ಟಿ, ಅದರಿಂದ ಸಾತ್ವಿಕವಾದ ನಡೆ ಹೀಗೆ ಒಂದು ವ್ಯವಸ್ಥಿತವಾದ ಸಂಬಂಧವಿದೆ.

ವಿಪುಲವಾಗಿ ಜಲವಿರುವ ಭೂಮಿಯಲ್ಲಿ ವಾತಾವರಣದಲ್ಲಿ ತಂಪು ಏರ್ಪಡುತ್ತದೆ. ಅಪ್ರಯತ್ನವಾಗಿ ಅಥವಾ ಅಲ್ಪಪ್ರಯತ್ನದಿಂದಾಗಿ ಸಮೃದ್ಧವಾಗಿ ಸಸ್ಯಗಳು ಬೆಳೆಯುತ್ತವೆ. ಸಸ್ಯಗಳೂ ವಾತಾವರಣವನ್ನು ತಂಪಾಗಿಡುತ್ತವೆ. ಮನಸ್ಸಿನ ಶಾಂತತೆಗೆ ಅನುಕೂಲಿಸುವ ಹಸಿರು ವರ್ಣದ ದೃಶ್ಯವೂ ಜೊತೆಗೂಡುತ್ತದೆ. ಹೀಗೆ ಜಲಸಮೃದ್ಧಿಯು ಮನಸ್ಸಿನ ವೇಗಗಳನ್ನು ದೂರತಳ್ಳಿ ಶಾಂತತೆಯನ್ನು ನೀಡುತ್ತದೆ. ಅದರ ಜೊತೆ ಜೊತೆಗೆ ಏರ್ಪಡುವ ಸಹನೆ, ಸ್ಥಿರತೆ ಮೊದಲಾದವುಗಳು ಭೌತಿಕವಾದ ಐಶ್ವರ್ಯವನ್ನೂ ಬರಮಾಡಿಕೊಳ್ಳುತ್ತವೆ. ಹೀಗಿರುವುದರಿಂದ ಜಲಸಮೃದ್ಧಿಯಿರುವ ಜಾಗವು ಐಶ್ವರ್ಯವನ್ನು ವೃದ್ಧಿ ಪಡಿಸುತ್ತದೆಂದು ಹೇಳುವುದುಂಟು.

ಪದಾರ್ಥದ ಸ್ವಭಾವದಿಂದ ಉಂಟಾಗುವ ಲಾಭವನ್ನು ಚೆನ್ನಾಗಿ ಬಳಸಿಕೊಳ್ಳಲಿ ಎಂಬುದಷ್ಟೇ ಈ ವಾಸ್ತು ಸಂಬಂಧಪಟ್ಟ ವಿಧಿಗಳ ಉದ್ದೇಶವಾಗಿದೆ. ಆದರೆ ಇವೆಲ್ಲವೂ ಅವನವನ ಕರ್ಮಗಳ ಫಲದೊಡನೆ ಸೇರಿಕೊಂಡು ಫಲಿಸುತ್ತವೆ.

ಜಾಹಿರಾತು

**ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ**

ಶುಭಾಶಯಗಳೊಂದಿಗೆ

ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',
ಉತ್ತರಹಳ್ಳಿ–ಕೆಂಗೇರಿ ಮುಖ್ಯರಸ್ತೆ
ಪೂರ್ಣಪ್ರಜ್ಞ ನಗರ, ಬೆಂಗಳೂರು–560 061.
ದೂ. ಸಂ. 080–26731335, 26731336



**ಬಡಾವಣೆ ವಿವರಗಳು :**

1. ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085
2. ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061


**ಸಂಘದ ಆಡಳಿತ ಮಂಡಳಿ ಸದಸ್ಯರು**

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜಿ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ವಿ.ಕೆ. | ನಿರ್ದೇಶಕರು | | |



ಶ್ರೀಶಾಂಕರ ತತ್ತ್ವಪ್ರಸಾರ ಅಭಿಯಾನ
ಶೃಂಗೇರಿ

ವೇದಾಂತಭಾರತೀ
ಕೃಷ್ಣರಾಜನಗರ



# ಸುವರ್ಣಭಾರತೀ

### ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾಪೀಠಾಧೀಶ್ವರರಾದ
### ಜಗದ್ಗುರು ಶಂಕರಾಚಾರ್ಯ ಪರಮಪೂಜ್ಯ
### ಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ
### ಸಂನ್ಯಾಸಸ್ವೀಕಾರದ ಸುವರ್ಣಮಹೋತ್ಸವದ ನಿಮಿತ್ತ

# ಕಲ್ಯಾಣವೃಷ್ಟಿ ಮಹಾಭಿಯಾನ

ಜಗದ್ಗುರು ಶ್ರೀ ಶಂಕರಭಗವತ್ಪಾದರು ಉಪನಿಷತ್ ಪ್ರತಿಪಾದ್ಯವಾದ ಅದ್ವೈತಸಿದ್ಧಾಂತದ ತಳಹದಿಯ ಮೇಲೆ ಸನಾತನ ಧರ್ಮದ ಪುನಃಪ್ರತಿಷ್ಠಾಪನೆಯನ್ನು ಮಾಡಿ, ಇದರ ಸಂರಕ್ಷಣೆಗಾಗಿ ಭರತಖಂಡದ ನಾಲ್ಕು ದಿಕ್ಕುಗಳಲ್ಲಿ ಆಮ್ನಾಯಪೀಠಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ಪ್ರಥಮವೂ ಪ್ರಧಾನವೂ ಆದ ದಕ್ಷಿಣಾಮ್ನಾಯ ಶ್ರೀ ಶಾರದಾಪೀಠವು ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯಲ್ಲಿ ತುಂಗಾತೀರದಲ್ಲಿ ವಿರಾಜಮಾನವಾದ ಶೃಂಗೇರಿಕ್ಷೇತ್ರದಲ್ಲದೆ. ಅವಿಚ್ಛಿನ್ನ ಗುರುಪರಂಪರೆಯನ್ನು ಹೊಂದಿದ ಈ ಶಾರದಾಪೀಠದಲ್ಲಿ ಪೀಠಾಧಿಶ್ವರರಾಗಿ ವಿರಾಜಮಾನರಾದ ಪ್ರತಿಯೊಬ್ಬ ಗುರುಗಳೂ ಬ್ರಹ್ಮನಿಷ್ಠರಾಗಿ ಸದಾಚಾರ–ಸದ್ಧರ್ಮಪಾಲಕರಾಗಿದ್ದು ಜಿಜ್ಞಾಸುಗಳಿಗೆ ಧರ್ಮ ಮತ್ತು ಅದ್ವೈತತತ್ತ್ವವನ್ನು ಉಪದೇಶಿಸಿ ಈ ಪೀಠಕ್ಕೆ ಉಜ್ವಲವಾದ ಕೀರ್ತಿಯನ್ನು ತಂದುಕೊಟ್ಟಿದ್ದಾರೆ.

ಸಾಂಪ್ರತ ಈ ಪೀಠದಲ್ಲಿ ಪೀಠಾಧೀಶ್ವರರಾಗಿ ವಿರಾಜಮಾನರಾಗಿರುವ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು ಈ ಪರಂಪರೆಯಲ್ಲಿ 36 ನೆಯರವರಾಗಿ ಸರ್ವಜನವಂದ್ಯರಾಗಿದ್ದಾರೆ. ಪರಮಪೂಜ್ಯ ಮಹಾಸನ್ನಿಧಾನಂಗಳವರು ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ಐವತ್ತು ವರ್ಷಗಳು ಸಂದಿರುವ ಶುಭಸಂದರ್ಭದಲ್ಲಿ ಮಹಾನ್ನಿಧಾನಂಗಳವರ ಕರಮಲಸಂಜಾತರಾದ ಜಗದುರು ಶ್ರೀ ಶ್ರೀ ವಿಧುಶೇಖರಭಾರತೀ ಸನಿಧಾನಂಗಳವರು ರಾಜ್ಯಾಧ್ಯಂತ ಶ್ರೀ ಶಂಕರಭಗವತ್ಪಾದರ ಉಪದೇಶಗಳನ್ನು ವಿವಿಧ ಕಾರ್ಯಕ್ರಮಗಳ ಮೂಲಕ ಸಮಸ್ತ ಶಿಷ್ಯವೃಂದಕ್ಕೆ ವ್ಯಾಪಕವಾಗಿ ತಲುಪಿಸುವ ದಿವ್ಯಸಂಕಲ್ಪ ಮಾಡಿದ್ದಾರೆ.

ಈ ಹಿನ್ನೆಲೆಯಲ್ಲಿ ಪರಮಪೂಜ್ಯ ಸನ್ನಿಧಾನಂಗಳವರ ಆದೇಶದಂತೆ ಪರಮಪೂಜ್ಯ ಶ್ರೀ ಶ್ರೀ ಶಂಕರಭಾರತೀ ಸಾಮಿಗಳವರ ಅನುಗ್ರಹ ಮತ್ತು ಮಾರ್ಗದರ್ಶನದಲ್ಲಿ ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನ ಮತ್ತು ವೇದಾಂತಭಾರತೀ ಸಂಸ್ಥೆಗಳು ರಾಜ್ಯಾದ್ಯಂತ ಸಮಸ್ತ ಆಸ್ತಿಕ ಭಕ್ತ ಸಮೂಹಕ್ಕೆ ಶಂಕರಭಗವತ್ಪಾದರ ಮೂರು ಸ್ತೋತ್ರಗಳನ್ನು ಹೇಳಿಕೊಡುವ ಮತ್ತು ಅವುಗಳ ಸಾಮಾನ ಅರ್ಥಜ್ಞಾನದೊಂದಿಗೆ ಪಾರಾಯಣ ಮಾಡುವ ಕಾರ್ಯಕ್ರಮವನ್ನು ನಡೆಸಲು ನಿಶ್ಚಯಿಸಿದೆ. ವೇದಾಂತಭಾರತಿಯ ಮಹಾಸಂರಕ್ಷಕರಾಗಿ ಕಳೆದ 24 ವರ್ಷಗಳಿಂದ ವೇದಾಂತಭಾರತಿಯ ಎಲ್ಲ ಕಾರ್ಯಗಳಿಗೆ ತಮ್ಮ ದಿವ್ಯಾನುಗ್ರಹವನ್ನಿತ್ತು ಆಶೀರ್ವದಿಸುತ್ತಿರುವ ಪರಮಪೂಜ್ಯ ಶ್ರೀ ಶ್ರೀ ಜಗದ್ಗುರು ಮಹಾಸನ್ನಿಧಾನಂಗಳವರ ಸಂನ್ಯಾಸ್ವೀಕಾರ ಮಹೋತ್ಸವದ 50ನೇ ವರ್ಷದ ಪವಿತ್ರಸಂದರ್ಭದಲ್ಲಿ ಶ್ರೀಶಂಕರಭಗವತ್ಪಾದರ ಸ್ತೋತ್ರಸಮರ್ಪಣೆಯ ಮೂಲಕ ಜಗದ್ಗುರುಗಳವರಿಗೆ ವಿಶೇಷ ನಮನಗಳನ್ನು ಸಲ್ಲಿಸಿ ಅವರ ಅನುಗ್ರಹಕ್ಕೆ ಪಾತ್ರರಾಗಲು ಅವಕಾಶ ಲಭಿಸಿರುವುದು ನಮ್ಮೆಲ್ಲರ ಭಾಗ್ಯ.

ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಈಗಾಗಲೇ ಸಾಕಾರಗೊಂಡ ಪಾರಾಯಣ ಕೇಂದ್ರಗಳಲ್ಲಿ ಈ ಸೋತ್ರಗಳನ್ನು ಹೇಳಿಕೊಡುವುದರ ಜೊತೆಗೆ ಇನ್ನೂ ಅನೇಕ ನೂತನ ಕೇಂದ್ರಗಳನ್ನು ಮಾಡಿ ಎಲ್ಲರಿಗೂ ಈ ಸೋತ್ರಗಳನ್ನು ಹೇಳಿಕೊಟ್ಟು ಸಮಸ್ತರೂ ಈ ಅಭಿಯಾನದಲ್ಲಿ ಪಾಲ್ಗೊಂಡು ಭಗವಂತನ ಅನುಗ್ರಹಕ್ಕೆ ಮತ್ತು ಗುರುಕೃಪೆಗೆ ಪಾತ್ರರಾಗುವಂತೆ ಮಾಡಬೇಕೆಂದು ಎಲ್ಲ ಕಾರ್ಯಕರ್ತರಲ್ಲಿ ಸವಿನಯ ವಿನಂತಿ.

**ಪಾರಾಯಣಕ್ಕೆನಿಗದಿಗೊಳಿಸಿದ ಸ್ತೋತ್ರಗಳು**

1. ಕಲ್ಯಾಣವೃಷ್ಟಿಸ್ತವಃ
2. ಶಿವಪಂಚಾಕ್ಷರನಕ್ಷತ್ರಮಾಲಾಸೋತ್ರ
3. ಲಕ್ಷ್ಮೀನರಸಿಂಹಕರುಣಾರಸಸ್ತೋತ್ರಮ್

ಸಂಯೋಜಕರು : ವೇದಾಂತಭಾರತೀ,
ಸಂಪರ್ಕ : 9681809839 / 9880862696
Website : vedantabharati.org
You Tube Channel : https://www.youtube.com/@yadathore

PERIODICAL RATE
VIPRANUDI KANNADA MONTHLY
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 19-04-2024 Date of Publishing 18-04-2024

ನಿವೃತ್ತ ಎ.ಡಿ.ಜಿ.ಪಿ. ಶ್ರೀ ಭಾಸ್ಕರ್‌ರಾವ್‌ರವರು
60 ವಸಂತಗಳನ್ನು ಪೂರೈಸಿದ ಹಿನ್ನಲೆ

# ಅಭಿನಂದನೆಗಳು



"ಜಗನ್ಮಾತೆ ಶ್ರೀ ಚಾಮುಂಡೇಶ್ವರಿಯು ಶ್ರೀ ಭಾಸ್ಕರ್ ರಾವ್‌ರವರಿಗೆ
ಆಯಸ್ಸು, ಆರೋಗ್ಯವನ್ನು ಇನ್ನು ಹೆಚ್ಚು ದಯಪಾಲಿಸಲಿ "

ಶ್ರೀಯುತರು ಸೇವೆ ಸಲ್ಲಿಸಿದ ಕೆಲವು ಹುದ್ದೆಗಳು
* ಪೋಲಿಸ್ ಆಯುಕ್ತರಾಗಿ ಬೆಂಗಳೂರು ಮತ್ತು ಮೈಸೂರುಗಳಲ್ಲಿ ಸೇವೆ
* ಕೊಡಗು ಜಿಲ್ಲಾ ಪೊಲೀಸ್ ಅಧೀಕ್ಷಕರು * ರಾಜ್ಯ ಸಾರಿಗೆ ಆಯುಕ್ತರು

ಪದಕಗಳು :
* ಪ್ರತಿಭಾನ್ವಿತಾ ಸೇವೆಗಾಗಿ 2008ರಲ್ಲಿ ರಾಷ್ಟ್ರಪತಿ ಪದಕ
* ವಿಶೇಷ ಸೇವೆಗಾಗಿ 2015ರಲ್ಲಿ ರಾಷ್ಟ್ರಪತಿ ಪದಕ

ವಿದೇಶಿ ಸೇವೆ :
ವಿಶ್ವಸಂಸ್ಥೆಯ ಶಾಂತಿ ಪಾಲನಾ ಪಡೆ ಹಾಗೂ ಐವರಿ ಕೋಸ್ಟ್, ಪಶ್ಚಿಮ ಆಫ್ರಿಕಾ



ಎಂ.ಎಸ್. ರವೀಂದ್ರ
ಅಧ್ಯಕ್ಷರು,
ವಿಪ್ರ ವಕೀಲರ ಪರಿಷತ್
ಮೈಸೂರು



ಸಿ.ಎಸ್. ಚಂದ್ರಶೇಖರ್
ಅಧ್ಯಕ್ಷರು,
ಅಖಿಲ ಭಾರತ ಗ್ರಾಹಕ್ ಪಂಚಾಯತ್
ಮೈಸೂರು



ಎಂ. ಮುರಳಿ
ಕಾರ್ಯದರ್ಶಿಗಳು
ಜಯನಗರ ರಾಮ ಮಂದಿರ
ಮೈಸೂರು



ವೆಂಕಟರಮಣ
ಅಧ್ಯಕ್ಷರು
ಪಿನಾಕಲ್ ಪರ್ಲ್ ಲೇಔಟ್,
ಶ್ರೀರಾಂಪುರ, ಮೈಸೂರು



ಶ್ರೀಧರ ಮೂರ್ತಿ
ಮಾಧ್ವ ಸಮಿತಿ
ಮೈಸೂರು

If undelivered please return to :

**VIPRANUDI**

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar